# ಕರ್ನಾಟಕ ವಿಧಾನ ಪರಿಷತ್ತು

**ಬುಧುವಾರ, 9ನೇ ಫೆಬ್ರವರಿ 2012**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಮಧ್ಯಾಹ್ನ 11 ಗಂಟೆ 31 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ)**

**ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**(ಸದನ ಪ್ರಾರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ನಿಂತು ಧರಣಿಯನ್ನು ಮುಂದುವರೆಸಿದರು ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.)**

**ಸಭಾಪತಿಯವರು:–** ಈಗ ಪ್ರಶ್ನೋತ್ತರ. ಎಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಈಗ ಮೊದಲು ಪ್ರಶ್ನೋತ್ತರವನ್ನು ಮುಗಿಸೋಣ.

**ಶ್ರೀ ವೈ.ಎಸ್.ವಿ. ದತ್ತ:–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ವೇಳೆಗಿಂತ ಮುಂಚೆ ನಾವು ಕಳುಹಿಸಿರುವ ನಿಲುವಳಿ ಸೂಚನೆಯನ್ನು ತಾವು ತೆಗೆದುಕೊಳ್ಳಿ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರು ಹೇಳದೆ ಕೇಳದೆ ಧರಣಿಯನ್ನು ಮಾಡುತ್ತಿದ್ದಾರೆ. ಏನಿದು? ಸದನ ನಡೆಯಬೇಕೋ ಬೇಡವೋ? ಅವರು ಬಾವಿಯಲ್ಲಿ ನಿಂತಿರುವುದನ್ನು ನೋಡಿದರೆ ಅವರು ಇವೊತ್ತು ಸದನವನ್ನು ನಡೆಸುವುದು ಬೇಡವೆಂದು ತೀರ್ಮಾನ ಮಾಡಿಕೊಂಡು ಬಂದ ಹಾಗೆ ಇದೆ. ಏಕಾ ಏಕಿ ಈ ರೀತಿ ಬಾವಿಗೆ ಬರುವಂಥದ್ದು ಅಂದರೇನು? ಅದರಲ್ಲೂ ಇದು ಮೇಲ್ಮನೆ, ಇಲ್ಲಿ ಇವರು ಈ ರೀತಿ ಬಾವಿಗೆ ಬರುವುದು ಅಂದರೇನು? ಏನಾದರು ಮಾತನಾಡಿ, ಅವರ ಸಮಸ್ಯೆ ಏನೆಂದು ಹೇಳಿ ತಮಗೆ ತಿಳಿಸಿ ಬಾವಿಗೆ ಬಂದರೆ ಒಂದು ಮಾತು ಬೇರೆ.

**ಸಭಾಪತಿಯವರು:–** ಎಲ್ಲರೂ ದಯಮಾಡಿ ತಮ್ಮ ತಮ್ಮ ಸ್ಥಾನಕ್ಕೆ ಬನ್ನಿ. ನಾವು ಮೊದಲು ಪ್ರಶ್ನೋತ್ತರವನ್ನು ಮುಗಿಸೋಣ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ತಾವು ನಿನ್ನೆ ನಮಗೆ ನಿಲುವಳಿ ಸೂಚನೆಯ ಮೇಲೆ ಮಾತನಾಡಲು ಅವಕಾಶ ನೀಡಲಿಲ್ಲ. ನೀವು ಬರವಣಿಗೆಯ ಮೂಲಕ ಅಧಿಕೃತವಾಗಿ ಮಾತನಾಡಲು ಪರವಾನಿಗೆಯನ್ನು ಕೇಳಿಲ್ಲ. ಆದ್ದರಿಂದ ನಿಮಗೆ ನಾನು ಮಾತನಾಡಲು

ಅವಕಾಶವನ್ನು ಕೊಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದೀರಿ. ಆಮೇಲೆ ಮಾನ್ಯ ಮುಖ್ಯಮಂತ್ರಿಯವರ ಒಂದು ಮನವಿಯ ಮೇಲೆ ನಾವು ಅವರು ಏನು ಹೇಳಿಕೆಯನ್ನು ಮಾಡಿದ್ದಾರೆ ಅದನ್ನು ಕೇಳಿದ್ದೇವೆ. ಆದರೆ ಇವೊತ್ತು ನಾವು ನಿಯಮ 59ರಡಿಯಲ್ಲಿ ನಮ್ಮ ಪಕ್ಷದವರು ಹಾಗೂ ಜೆ.ಡಿ.(ಎಸ್) ಪಕ್ಷದವರು ಸೇರಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಆ ನಿಯಮದಡಿ ನಮಗೆ ಚರ್ಚೆಗೆ ಅವಕಾಶವನ್ನು ನೀಡಬೇಕೆಂದು ಕೇಳಿದ್ದೇವೆ.

**ಸಭಾಪತಿಯವರು:–** ತಾವು ನಿಯಮ 59ರಡಿಯಲ್ಲಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೀರಿ. ಅದು ನಿಜ. ಅದನ್ನು ನಾನು ಗಮನಿಸಿದ್ದೇನೆ. ಅದೇ ರೀತಿ ಕೆಲವೊಂದು ಗೌರವಾನ್ವಿತ ಸದಸ್ಯರುಗಳು ಯಾವುದೋ ಕಾರಣಕ್ಕಾಗಿ ಸದನಕ್ಕೆ ಬರುವುದಕ್ಕಾಗುತ್ತಿಲ್ಲ, ಆದರೆ ನಮ್ಮ ಪ್ರಶ್ನೆಗಳು ಬಹಳ ಪ್ರಮುಖವಾಗಿವೆ. ಆದ್ದರಿಂದ ಇನ್ನೊಬ್ಬ ಸದಸ್ಯರು ನನ್ನ ಪರವಾಗಿ ಪ್ರಶ್ನೆಯನ್ನು ಕೇಳುತ್ತಾರೆಂದು ಪತ್ರವನ್ನು ಕಳುಹಿಸಿದ್ದಾರೆ. ಹಾಗೆಯೇ ಶೂನ್ಯವೇಳೆಯ ಪ್ರಸ್ತಾಪಗಳನ್ನು ಕೆಲವು ಗೌರವಾನ್ವಿತ ಸದಸ್ಯರುಗಳು ನನಗೆ ಕಳುಹಿಸಿದ್ದಾರೆ. ಅವುಗಳನ್ನೆಲ್ಲವನ್ನು ನಾನು ನೋಡಿದ್ದೇನೆ. ತಾವು ನನಗೆ ಏನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೀರಿ ಅದರ ಬಗ್ಗೆ ತಮಗೆ ಏನು ಅವಕಾಶವನ್ನು ನೀಡಬೇಕೋ ಅದರ ಬಗ್ಗೆ ನಾನು ಹೇಳುತ್ತೇನೆ. ಅದನ್ನು ಖಂಡಿತವಾಗಿಯೂ ಮಾಡೋಣ. ಆದರೆ ಮೊದಲು ತಾವುಗಳೆಲ್ಲಾ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ. ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ನಮ್ಮ ಕಾರ್ಯಚಟುವಟಿಕೆಗಳ ಪ್ರಕಾರ ನಾವು ಮುಂದಕ್ಕೆ ಹೋಗೋಣ. ಆ ಚರ್ಚೆಯೆಲ್ಲಾ ಆಗ ಮಾಡೋಣ. ಈಗ ಪಶ್ನೋತ್ತರ ಬಿಟ್ಟು ಬೇರೆ ಏನೂ ಸಾಧ್ಯವಿಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ಹಾಗೂ ಇತರ ಕಾರ್ಯಕಲಾಪಗಳನ್ನು ಬದಿಗೊತ್ತಿ ನಾವು ಕಳುಹಿಸಿರುವ ನಿಲುವಳಿ ಸೂಚನೆಗೆ ತಾವು ಏಕೆ ಅವಕಾಶವನ್ನು ಕೊಡಬೇಕೆಂದು ಹೇಳಿದರೆ..

**ಸಭಾಪತಿಯವರು:–** ಇಲ್ಲ. ಆಗುವುದಿಲ್ಲ. ಚರ್ಚೆ ಆಗುವುದಿಲ್ಲ, ಬೇರೆ ಕಾರ್ಯಕಲಾಪಗಳಿಗೆ ಅವಕಾಶವಿಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನೋಡಿ ಇಲ್ಲಿ ಪತ್ರಿಕೆಯ ತುಣಕು ಇದೆ. ಇದರಲ್ಲಿನ ಅಶ್ಲೀಲ ಚಿತ್ರ ವಿಶ್ವದಾದ್ಯಂತ ವೀಕ್ಷಣೆಯಾಗಿದೆ.

**ಸಭಾಪತಿಯವರು:–** ಇಲ್ಲ. ಆಗುವುದಿಲ್ಲ. ಪ್ರಶ್ನೋತ್ತರ ಆಗುವುದಕ್ಕಿಂತ ಮೊದಲು ಬೇರೆ ಯಾವುದೇ ಚರ್ಚೆ ಸಾಧ್ಯವಿಲ್ಲ.

(ಗೊಂದಲ)

**ಶ್ರೀ ಅಶ್ವತ್ಥನಾರಾಯಣ:** ಮಾನ್ಯ ಸಭಾಪತಿಯವರೆ, ಮೊದಲು ಪ್ರಶ್ನೋತ್ತರ ಮುಗಿಯಲಿ. ನಂತರ ಅವರು ಮಾತನಾಡಲಿ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಮೊದಲು ಈ ವಿಚಾರವನ್ನು ತೆಗೆದುಕೊಳ್ಳಿ. ಈ ವಿಷಯ ದೇಶ–ವಿದೇಶಗಳಲ್ಲಿ ಪ್ರಸಾರವಾಗಿದೆ.

**ಸಭಾಪತಿಯವರು:–** ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಇದಕ್ಕಿಂತ ಮುಖ್ಯ ಪ್ರಶ್ನೋತ್ತರ ಇಲ್ಲ. ಪ್ರಶ್ನೋತ್ತರ ಕೂಡ ತೆಗೆದುಕೊಳ್ಳೋಣ. ಆದರೆ ನಾವು ಕಳುಹಿಸಿರುವ ನಿಲುವಳಿ ಸೂಚನೆಯ ನಂತರ ತೆಗೆದುಕೊಳ್ಳೋಣ. ಮಾನ್ಯ ಸಭಾಪತಿಯವರೆ, ನಾವು ಸದನ ನಡೆಸುವುದಕ್ಕೆ ಖಂಡಿತ ಸಹಕಾರ ನೀಡುತ್ತೇವೆ.

(ಗೊಂದಲ)

**ಶ್ರೀಮತಿ ಮೋಟಮ್ಮ:** ಮಾನ್ಯ ಸಭಾಪತಿಯವರೆ, ಇಂತಹ ಮಹತ್ತರವಾದ ವಿಷಯದ ಬಗ್ಗೆ ಚರ್ಚೆ ಮಾಡಲು ತಾವು ದಯಮಾಡಿ ಅವಕಾಶ ಕೊಡಬೇಕು.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಈಗ ಅವರು ಪ್ರಶ್ನೋತ್ತರ ವೇಳೆ ನಡೆಸಲು ತಯಾರು ಇರುವಂತೆ ಕಾಣುತ್ತದೆ. ನಾವು ಪ್ರಾರಂಭ ಮಾಡೋಣ. ದಯಮಾಡಿ ಎಲ್ಲರು ಕುಳಿತುಕೊಳ್ಳಿ.

(ಗೊಂದಲ)

**ಸಭಾಪತಿಯವರು:–** ತಾವುಗಳೆಲ್ಲಾ ತಮ್ಮ ತಮ್ಮ ಸ್ಥಾನಕ್ಕೆ ಹೋದರೆ ನಾವು ಕಲಾಪ ನಡೆಸುವುದಕ್ಕೆ ಅನುಕೂಲವಾಗುತ್ತದೆ. ತಾವೆಲ್ಲರೂ ದಯಮಾಡಿ ತಮ್ಮ ತಮ್ಮ ಸ್ಥಾನಕ್ಕೆ ಬನ್ನಿ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಕಳೆದ ಮೂರು ದಿನಗಳಿಂದ ಇದು ನಡೆಯುತ್ತಿದೆ. ಇಡೀ ಪ್ರಪಂಚವೇ ಆ ದೃಶ್ಯಾವಳಿಗಳನ್ನು ನೋಡಿದೆ. ಕರ್ನಾಟಕ ವಿಧಾನ ಮಂಡಲದ ಪಾವಿತ್ರ್ಯತೆ ಹಾಳಾಗಿರತಕ್ಕಂಥ ಹಿನ್ನಲೆಯಲ್ಲಿ ನಾವು ಏನು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ, ಅದನ್ನು ಪುರಸ್ಕರಿಸಿ, ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಗೆ ತಾವು ಆದ್ಯತೆಯನ್ನು ಕೊಡಬೇಕು. ಇದರಲ್ಲಿ ಸಾರ್ವಜನಿಕ ಮಹತ್ವದ ವಿಷಯ ಇರುವುದರಿಂದ ತಾವು ಈ ವಿಷಯವನ್ನು ಚರ್ಚೆಗೆ ಅಂಗೀಕಾರ ಮಾಡಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ತಾವು ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಇದನ್ನು ಮೊದಲು ತೆಗೆದುಕೊಳ್ಳಿ.

(ಗೊಂದಲ)

**ಸಭಾಪತಿಯವರು:–** ನಾನು ವಿರೋಧ ಪಕ್ಷದ ನಾಯಕರು ಹಾಗೂ ಇತರ ವಿರೋಧ ಪಕ್ಷದ ನಾಯಕರುಗಳು ಕೊಟ್ಟಿರುವ ನಿಲುವಳಿ ಸೂಚನೆಯನ್ನು ಹಾಗೂ ಸಚಿವರು ಕೊಟ್ಟಿರತಕ್ಕಂಥ ವಿಷಯಗಳನ್ನು ಗಮನಿಸಿದ್ದೇನೆ. ಪ್ರಶ್ನೋತ್ತರ ಅವಧಿಯ ನಂತರ ನಾನು ನನ್ನ ತೀರ್ಮಾನವನ್ನು ಹೇಳುತ್ತೇನೆ. ಪ್ರಶ್ನೋತ್ತರ ಆಗುವುದಕ್ಕಿಂತ ಮುಂಚೆ ನಾನು ನನ್ನ ಯಾವುದೇ ತೀರ್ಮಾನವನ್ನು ಹೇಳುವುದಿಲ್ಲ.

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ನಾಚಿಕೆಯಿಂದ ತಲೆ ತಗ್ಗಿಸುವಂಥ ಒಂದು ಪರಿಸ್ಥಿತಿ ಇಂದು ನಿರ್ಮಾಣ ಆಗಿದೆ.

(ಗೊಂದಲ)

**ಸಭಾಪತಿಯವರು:** ಈಗ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡುತ್ತಿದ್ದೇನೆ.

**(11 ಗಂಟೆ 38 ನಿಮಿಷಗಳಲ್ಲಿ ಮುಂದೂಡಲ್ಪಟ್ಟ ಸದನವು ಪುನಃ 12 ಗಂಟೆ 10 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು)**

**(ವಿರೋಧ ಪಕ್ಷಗಳ ಮುಖಂಡರುಗಳನ್ನು ಹೊರತುಪಡಿಸಿ ಉಳಿದ ಎಲ್ಲ ಪ್ರತಿ ಪಕ್ಷಗಳ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯನ್ನು ಮುಂದುವರೆಸಿದರು)**

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ನಾವು ತಮಗೆ ಒಂದು ವಿಷಯವನ್ನು ಕಳುಹಿಸಿಕೊಟ್ಟಿದ್ದೇನೆ. ದಯಮಾಡಿ ತಾವು ಬೇರೆ ಕಾರ್ಯಕಲಾಪಗಳನ್ನು ಬದಿಗೊತ್ತಿ, ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ಈ ವಿಷಯವನ್ನು ಪ್ರಸ್ತಾಪಿಸಲು ತಾವು ನಮಗೆ ಅವಕಾಶ ಮಾಡಿಕೊಡಬೇಕು.

ಏಕೆಂದರೆ ಕಳೆದ ಎರಡು–ಮೂರು ದಿವಸಗಳಿಂದ ಈ ಅಧ್ವಾನದ ಪ್ರಕರಣ ಇಡೀ ಪ್ರಪಂಚದ ಗಮನವನ್ನು ಸೆಳೆದಿದೆ. ಈ ಪ್ರಕರಣಕ್ಕೆ ಸಾರ್ವಜನಿಕ ಮಹತ್ವ ಬಂದಿರುವಂತಹ ಕಾರಣಕ್ಕಾಗಿ ದಯಮಾಡಿ ತಾವು ನಮಗೆ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ನೀಡಬೇಕಾಗಿ ವಿನಂತಿಸುತ್ತೇವೆ.

**ಸಭಾಪತಿಯವರು:** ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನದಲ್ಲಿ ಬಂದು ಕುಳಿತುಕೊಂಡರೆ ಬಾಕಿ ವಿಷಯಗಳನ್ನು ಚರ್ಚಿಸಬಹುದು. ಆದ್ದರಿಂದ ಎಲ್ಲರೂ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಯಾವುದೇ ಒಂದು ನಿಯಮಾವಳಿಯಲ್ಲಿ ಇಲ್ಲದಿದ್ದರೂ ಕೂಡ, ಇಂಥದ್ದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಯಾವುದೇ ಅವಕಾಶವಿಲ್ಲದ್ದರೂ ಕೂಡ ಪ್ರಜಾತಂತ್ರ ವ್ಯವಸ್ಥೆಯ ಮೌಲ್ಯಗಳನ್ನು ಉಳಿಸಬೇಕು ಎನ್ನುವಂತಹ ದೃಷ್ಟಿಯಿಂದ ನೆನ್ನೆಯ ದಿವಸ ಸಮಗ್ರವಾದಂತಹ ಒಂದು ಹೇಳಿಕೆಯನ್ನು ಈ ಸದನದ ಮುಂದೆ ಮಾಡಲಾಗಿದೆ. ಆದರೆ ಯಾವುದೋ ಬೇರೆ ಉದ್ದೇಶಕ್ಕಾಗಿ ಈ ರೀತಿ ಈ ವಿಷಯವನ್ನು ಮತ್ತೆ ಮತ್ತೆ ಎತ್ತಿಕೊಂಡು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳುವುದು ಸಾಧುವಲ್ಲ. ಈಗಾಗಲೇ ಕೆಳಮನೆಯಲ್ಲಿ ಈ ವಿಷಯವಾಗಿ ಚರ್ಚೆಯಾಗಿದ್ದು ಈ ಬಗ್ಗೆ ಸಮಗ್ರವಾಗಿ ಪರಿಶೀಲನೆ ನಡೆಸಲು ಸದನ ಸಮಿತಿಯೊಂದನ್ನು ಕೂಡ ರಚಿಸಲಾಗಿದೆ. ಸದನ ಸಮಿತಿಯ ವರದಿಗಳನ್ನು ಪಡೆಯಲು ತೀರ್ಮಾನಿಸಲಾಗಿದೆ. ಆದಕಾರಣ ಈ ಹಂತದಲ್ಲಿ ಈ ವಿಷಯವಾಗಿ ಮತ್ತೆ ಚರ್ಚೆ ಮಾಡುವಂತಹ ಯಾವುದೇ ಅವಶ್ಯಕತೆ ಇಲ್ಲ.

**ಶ್ರೀ ವಿ.ಆರ್. ಸುದರ್ಶನ್:** ಮಾನ್ಯ ಸಭಾಪತಿಯವರೇ, ಒಂದು ನೋಟೀಸ್‌ನ್ನು ಕಳುಹಿಸಿಕೊಡಿ, ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ತಾವೇ ತಿಳಿಸಿದ್ದಿರಿ.

(ಗೊಂದಲ)

**ಸಭಾಪತಿಯವರು:** ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಈ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ, ನಾನು ಸಹ ಹೇಳುತ್ತಿದ್ದೇನೆ, ಎಲ್ಲರೂ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಪ್ರಶ್ನೋತ್ತರ ಅವಧಿಯನ್ನು ಮುಗಿಸಿದ ಮೇಲೆ ಬೇರೆ ಯಾವುದೇ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ನೋಡೋಣ, ನಾನು ಪ್ರಯತ್ನ ಮಾಡುತ್ತೇನೆ. ಆದರೆ ಪ್ರಶ್ನೋತ್ತರ ಅವಧಿಯೇ ಮುಗಿಯದೆ ಬೇರೆ ಯಾವುದೇ ರೀತಿಯ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ, ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ.

(ಗೊಂದಲ)

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ...

(ಗೊಂದಲ)

**ಸಭಾಪತಿಯವರು:** ತಾವು ಮೊದಲು ವಿರೋಧ ಪಕ್ಷದ ಸದಸ್ಯರುಗಳನ್ನು ಅವರವರ ಸ್ಥಾನಗಳಿಗೆ ವಾಪಸ್ ಬರುವಂತೆ ಕರೆಯಿರಿ.

(ಗೊಂದಲ)

**ಶ್ರೀ ಅಶ್ವಥ್ ನಾರಾಯಣ:** ಮಾನ್ಯ ಸಭಾಪತಿಯವರೆ, ಬೆಂಗಳೂರಿನಲ್ಲಿ ನಾಯಿ ಕಚ್ಚಿರುವಂತಹ ಪ್ರಕರಣ ಮತ್ತೆ ವರದಿಯಾಗಿರುವುದರಿಂದ ದಯಮಾಡಿ ಆ ವಿಷಯದ ಬಗ್ಗೆ ನಾವೀಗ ಚರ್ಚೆ ಮಾಡಬೇಕಾಗಿದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಪ್ರಜಾಪ್ರಭುತ್ವಕ್ಕೆ ಗೌರವ ಕೊಡಬೇಕೆನ್ನುವಂತಹ ವಿಷಯವನ್ನು ನಾನು ಕೂಡ ಒಪ್ಪುತ್ತೇನೆ, ಆ ವಿಚಾರ ತಮಗೂ ಸಹ ಗೊತ್ತಿದೆ. ಆದರೆ ಇದು ಸಾರ್ವಜನಿಕ ಮಹತ್ವದ ವಿಷಯವಾಗಿದೆ. ನಮ್ಮ ರಾಜ್ಯದ ಮಾನ ಹರಾಜಾಗಿದೆ, ವಿಧಾನ ಪರಿಷತ್ತಿನ ಗೌರವಕ್ಕೆ ಕಳಂಕ ಬಂದಿದೆ. ನಾವು ಈ ವಿಧಾನ ಪರಿಷತ್ತಿನಿಂದ ವಿಧಾನ ಮಂಡಲಕ್ಕೆ ಸಂದೇಶ ಕಳಹಿಸಬೇಕಾಗಿದೆ.

(ಗೊಂದಲ)

## 2. ದಿನಾಂಕ 08.02.2012 ಮತ್ತು 09.02.2012ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.

**ಸಭಾಪತಿಯವರು:–** ದಯಮಾಡಿ ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ. ಒಂದು ಸಣ್ಣ ಪ್ರಕಟಣೆ ಇದೆ.

ದಿನಾಂಕ: 08ನೇ ಫೆಬ್ರವರಿ 2012ರ ಸಮೂಹ 11ರ ಸದನದಲ್ಲಿ ಉತ್ತರಿಸುವ ಒಟ್ಟು 18 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 66 ಪ್ರಶ್ನೆಗಳ ಪೈಕಿ 53 ಪ್ರಶ್ನೆಗಳಿಗೆ ಮತ್ತು ದಿನಾಂಕ:09ನೇ ಫೆಬ್ರವರಿ 2012ರ ಸಮೂಹ 4ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 12 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 126 ಪ್ರಶ್ನೆಗಳ ಪೈಕಿ 97 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

### ಅನುದಾನಿತ ಐ.ಟಿ.ಐ. ಸಂಸ್ಥೆಗಳ ಸಂಬಂಧ ಥಾಮಸ್ ವರದಿ ಅನುಷ್ಠಾನದ ಬಗ್ಗೆ

### 736(741); ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) ಮತ್ತು ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

**ಅ)** ಅನುದಾನಿತ ಐ.ಟಿ.ಐ ಸಂಸ್ಥೆಗಳ ಸುಧಾರಣೆ ಸಂಬಂಧ ಥಾಮಸ್ ಸಮಿತಿಯನ್ನು ಯಾವಾಗ ರಚಿಸಲಾಯಿತು (ವಿವರ ನೀಡುವುದು);

**ಆ)** ಥಾಮಸ್ ವರದಿಯಲ್ಲಿ ಈ ಸಂಸ್ಥೆಗಳ ಸುಧಾರಣೆಗೆ ಮಾಡಿರುವ ಶಿಫಾರಸ್ಸುಗಳೇನು? (ವಿವರ ನೀಡುವುದು);

**ಇ)** ಈ ಶಿಫಾರಸ್ಸುಗಳನ್ನು ಇದುವರೆವಿಗೂ ಜಾರಿಗೊಳಿಸದಿರಲು ಕಾರಣಗಳೇನು;

**ಈ)** ಶಿಫಾರಸ್ಸುಗಳನ್ನು ಜಾರಿಗೊಳಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಉ) ಥಾಮಸ್ ವರದಿಯು ಶಿಫಾಸರ್ಸುಗಳನ್ನು ಯಾವ ಕಾಲಮಿತಿಯಲ್ಲಿ ಜಾರಿಗೊಳಿಸಲಾಗುತ್ತದೆ?

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು)**

ಅ) ಸರ್ಕಾರದ ಆದೇಶ ಸಂ.ಕಾಇ 166 ಇಟಿಐ 2005 ದಿನಾಂಕ: 26–03–2007 ರ ಮೂಲಕ ಶ್ರೀ ಪಿ.ಎಸ್.ಎಸ್. ಥಾಮಸ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಆದೇಶದ ಪ್ರತಿಯನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದ್ದು ವಿವರಗಳು ಆದೇಶದಲ್ಲಿವೆ.

ಆ) **ಶ್ರೀ ಪಿ.ಎಸ್.ಎಸ್. ಥಾಮಸ್ ರವರ ವರದಿಯ ಶಿಫಾರಸ್ಸುಗಳ ವಿವರ.**

1. ಪೂರ್ಣ ಪ್ರಮಾಣದ ವೇತನ ನೀಡುವಿಕೆ
2. ಸಂಯೋಜನೆ ಹೊಂದಿ ಅನುದಾನ ಪಡೆಯಲು ಇರುವ ಕಾಯುವಿಕೆಯನ್ನು 7 ರಿಂದ 5 ವರ್ಷಕ್ಕೆ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ/ಅಲ್ಪ ಸಂಖ್ಯಾತರ/ಮಹಿಳಾ ಅಥವಾ ಅಂಗವಿಕಲರ ಆಡಳಿತ ಮಂಡಳಿಗಳ ಸಂಸ್ಥೆಗಳಿಗೆ 5 ವರ್ಷಕ್ಕಿಂತ ಕಡಿಮೆ ಕಾಯುವಿಕೆ ಅವಧಿಯನ್ನು ಶಿಫಾರಸ್ಸು ಮಾಡಿರುತ್ತಾರೆ.
3. ಕ್ರಮಬದ್ಧವಾಗಿ ಸಂಸ್ಥೆಯನ್ನು ನಡೆಸಲು ಅಸಮರ್ಥರಾದ ಆಡಳಿತ ಮಂಡಳಿ/ಸಂಸ್ಥೆಗೆ ಸರ್ಕಾರದ ಪ್ರತಿನಿಧಿಯನ್ನು ನಿಯೋಜಿಸುವುದು.
4. ಶಿಕ್ಷಣ ಇಲಾಖೆ ಅಡಿಯಲ್ಲಿರುವ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ ನೀಡುವ ರೀತಿಯಲ್ಲಿ ವೇತನ, ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ನೀಡುವುದು.
5. ಅನುದಾನಿತ ಐ.ಟಿ.ಐಗಳ ಸಿಬ್ಬಂದಿಗಳಿಗೆ ನಡತೆ ಮತ್ತು ನಿಯಂತ್ರಣ ಮೇಲ್ಮನವಿಯ ನಿಯಮಗಳನ್ನು ಜಾರಿಗೊಳಿಸುವುದು.

6. ಚಾಲ್ತಿಯಲ್ಲಿರುವ ಅನುದಾನ ಸಂಹಿತೆಗೆ ಹೊಸ ಶಿಫಾರಸ್ಸುಗಳಂತೆ ಮಾರ್ಪಾಟುಗಳನ್ನು ಸೇರಿಸುವುದು. ಹಾಗೂ ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ಜಾರಿಗೊಳಿಸುವುದು.

(ವರದಿಯ ಸಾರಾಂಶವನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ)

ಇ)

1. ಸರ್ಕಾರದ ಆದೇಶ ಸಂ: ಕಾಇ 385 ಇಟಿಐ 2005. ದಿನಾಂಕ: 01–10–2007 ರಂತೆ ಅನುದಾನಿತ ಐಟಿಐಗಳ ಸಿಬ್ಬಂದಿಗಳಿಗೆ ಈ ಹಿಂದೆ ನೀಡಲಾಗುತ್ತಿದ್ದ ಶೇ. 85 ರ ಪ್ರಮಾಣದ ಅನುದಾನವನ್ನು ಶೇ. 100ಕ್ಕೆ ಹೆಚ್ಚಿಸಿ, ಪಾವತಿಸಲಾಗುತ್ತಿದೆ. ಈ ಯೋಜನೆಯಡಿ ಪ್ರಸ್ತುತ 193 ಸಂಸ್ಥೆಗಳು ಅನುದಾನ ಪಡೆಯುತ್ತಿವೆ.
2. ಸಮಿತಿಯ ಶಿಫಾರಸ್ಸಿನಂತೆ ಈಗ ವಿದ್ಯಾರ್ಥಿ ಕೇಂದ್ರೀಕೃತ ಸಹಾಯಾನುದಾನ ಯೋಜನೆಯನ್ನು ಸರ್ಕಾರಿ ಆದೇಶ ಸಂ: ಕಾಇ 118 ಇಟಿಐ 2010, ದಿ: 30–08–2010 ರಲ್ಲಿ ಪ್ರಕಟಿಸಲಾಗಿದೆ. ಸದರಿ ಯೋಜನೆಯಡಿಯಲ್ಲಿ ಖಾಸಗಿ ಐಟಿಐನಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ವಾರ್ಷಿಕ ಗರಿಷ್ಟ ರೂ. 6,000/– ದಂತೆ ಸಂಬಂಧಪಟ್ಟ ಖಾಸಗಿ ಸಂಸ್ಥೆಗಳಿಗೆ ನೀಡಲು ಅವಕಾಶವಿರುತ್ತದೆ. ಸದರಿ ಯೋಜನೆಯಡಿಯಲ್ಲಿ 30 ಸಂಸ್ಥೆಗಳಿಂದ ಅರ್ಜಿ ಸ್ವೀಕರಿಸಿದ್ದು ಅವುಗಳು ಪರಿಶೀಲನೆಯಲ್ಲಿರುತ್ತವೆ.

ಇನ್ನುಳಿದ ಶಿಫಾರಸ್ಸುಗಳನ್ನು ಜಾರಿಗೊಳಿಸುವ ವಿಷಯದಲ್ಲಿ ಆರ್ಥಿಕ ಇಲಾಖೆ ಮತ್ತು ಸಂಬಂಧಿಸಿದ ಇತರೆ ಇಲಾಖೆಗಳ ಅಧಿಕಾರಿಗಳ ಜೊತೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಮೇಲೆ ವಿವರಿಸಿದಂತೆ

ಉ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

Annexure-1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳ ಸಿಬ್ಬಂದಿಗಳಿಗಿರುವ ಅನುದಾನ ಸಂಹಿತೆಯನ್ನು ಪರಿಷ್ಕರಿಸಲು ತಜ್ಞರ ಸಮಿತಿಯನ್ನು ರಚಿಸುವ ಬಗ್ಗೆ.

**ಓದಲಾಗಿದೆ:-**

ಪತ್ರ ಸಂ: ಉತಇತಸಂ-೧:ವಿವ್ರ-೯೩:೨೦೦೩-೦೪,ದಿನಾಂಕ:೨೬-೨-೨೦೦೭.

**ಪ್ರಸ್ತಾವನೆ:-**

ಆಯುಕ್ತರು ಉದ್ಯೋಗ ಮತ್ತು ತರಬೇತಿ ಇಲಾಖೆ ರವರು ಮೇಲೆ ಓದಲಾದ ತಮ್ಮ ಪತ್ರದಲ್ಲಿ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಜಾರಿಯಲ್ಲಿರುವ ಅನುದಾನ ಸಂಹಿತೆಯನ್ನು ಪರಿಷ್ಕರಿಸಲು ವಿಷಯದಲ್ಲಿ ಪರಿಣಿತಿ, ಅನುಭವವಿರುವ ತಜ್ಞರ ಸಮಿತಿಯನ್ನು ರಚಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

೨೦೦೭-೦೮ ನೇ ಆಯವ್ಯಯದಲ್ಲಿ ಗುಣಮಟ್ಟದ ವೃತ್ತಿ ಶಿಕ್ಷಣ ತರಬೇತಿ ಉತ್ತೇಜಿಸಲು "ವಿದ್ಯಾರ್ಥಿ ಕೇಂದ್ರೀಕೃತ ಸಹಾಯಾನುದಾನ" ನೂತನ ನೀತಿಯನ್ನು ಈವರೆಗೆ ಅನುದಾನ ಪಡೆಯದಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ತರಲು ಉದ್ದೇಶಿಸಲಾಗಿದೆಯೆಂದು ಘೋಷಿಸಲಾಗಿರುವುದರಿಂದ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಮುಂದೆ ವೇತನಾನುದಾನಕ್ಕೆ ಒಳಪಡಿಸಲು ಪ್ರಸ್ತುತ ಇರುವ ಅನುದಾನ ಸಂಹಿತೆಯನ್ನು ಪರಿಷ್ಕರಿಸಿ ಶಿಫಾರಸ್ಸುಗಳನ್ನು ನೀಡಲು ಸಮಿತಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂ: ಕಾಇ ೧೬೬ ಇಟಿಐ ೨೦೦೫, ಬೆಂಗಳೂರು, ದಿನಾಂಕ: ೨೬.೩.೨೦೦೭.**

ಉದ್ಯೋಗ ಮತ್ತು ತರಬೇತಿ ಇಲಾಖೆಯ ತರಬೇತಿ ವಿಭಾಗದ ನಿಯಂತ್ರಣ ಮತ್ತು ಮೇಲುಸ್ತುವಾರಿಗೆ ಒಳಪಡುವ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳ ಸಿಬ್ಬಂದಿಯನ್ನು ವೇತನಾನುದಾನಕ್ಕೆ ಒಳಪಡಿಸಲು ಪ್ರಸ್ತುತ ಇರುವ ಅನುದಾನ ಸಂಹಿತೆಯನ್ನು ಪರಿಷ್ಕರಿಸಿ ಶಿಫಾರಸ್ಸುಗಳನ್ನು ನೀಡಲು ಈ ಕೆಳಕಂಡವರನ್ನು ಒಳಗೊಂಡ ಸಮಿತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಮೂರು ತಿಂಗಳ ಅವಧಿಗೆ ರಚಿಸಲಾಗಿದೆ.

| ಕ್ರ.ಸಂ: | ಹೆಸರು ಮತ್ತು ವಿಳಾಸ | ಹುದ್ದೆ |
|---|---|---|
| ೦೧ | ಶ್ರೀ.ಪಿ.ಎಸ್.ಎಸ್. ಥಾಮಸ್,ಐ.ಎ.ಎಸ್(ನಿವೃತ್ತ), ಕಾರ್ಯದರ್ಶಿ, ಸಿದ್ಧಗಂಗಾ ವೃತ್ತಿ ತರಬೇತಿ ಕೇಂದ್ರ, ತುಮಕೂರು | ಅಧ್ಯಕ್ಷರು |
| ೦೨ | ಶ್ರೀ.ಎ.ಎಸ್.ಹೋಳ್ಕೆ, ಜಂಟಿ ನಿರ್ದೇಶಕರು(ನಿವೃತ್ತ), ನಂ:೧೩೯, ಶ್ರವಣ, ೪ನೇ ಮುಖ್ಯ ರಸ್ತೆ, ೬ನೇ ಅಡ್ಡ ರಸ್ತೆ, ಬೆಳಕನಹಳ್ಳಿ, ಬನ್ನೇರುಘಟ್ಟ ರಸ್ತೆ, ಬಿಟಿಎಂ ೨ನೇ ಹಂತ, ಬೆಂಗಳೂರು. | ಸದಸ್ಯರು |
| ೦೩ | ಶ್ರೀ.ಬಿ.ಎನ್.ವೆಂಕಟೇಶ್‌ರಾವ್, ಪ್ರಾಂಶುಪಾಲರು, (ನಿವೃತ್ತ) ಎನ್.ಐ.ಇ ನಂ:೬೨೪೫,೯ನೇ ಮುಖ್ಯ ರಸ್ತೆ,ಸರಸ್ವತಿಪುರಂ, ಮೈಸೂರು. | ಸದಸ್ಯರು |
| ೦೪ | ಶ್ರೀ.ವೈ.ಎನ್.ಸಾಲ್ಯಾನ್, ಪ್ರಾಂಶುಪಾಲರು, ರಾಮಕೃಷ್ಣ ಪೂಂಜಾ, ಕೈಗಾರಿಕಾ ತರಬೇತಿ ಕೇಂದ್ರ, ಮುಲ್ಕಿ, ದಕ್ಷಿಣ ಕನ್ನಡ ಜಿಲ್ಲೆ. | ಸದಸ್ಯರು |
| ೦೫ | ಶ್ರೀ ಎಸ್.ಆರ್.ರವಿ, ಅಧ್ಯಕ್ಷರು,ಕರ್ನಾಟಕ ರಾಜ್ಯ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ಸಂಘ, ೩೦೨೧,೩ನೇ ಅಡ್ಡರಸ್ತೆ, ೧೦ನೇ ಮುಖ್ಯ ರಸ್ತೆ, ಸರಸ್ವತಿಪುರಂ,ಮೈಸೂರು. | ಸದಸ್ಯರು |

| | | |
|---|---|---|
| ೧೬ | ಜಂಟಿ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ (ತರಬೇತಿ) | ಕಾರ್ಯದರ್ಶಿ |

೧. ಈ ಸಮಿತಿಯು ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳ ಸಿಬ್ಬಂದಿಯನ್ನು ವೇತನಾನುದಾನಕ್ಕೆ ಒಳಪಡಿಸಲು ಈಗಾಗಲೇ ಜಾರಿಯಲ್ಲಿರುವ ಅನುದಾನ ಸಂಹಿತೆಯನ್ನು ಅಧ್ಯಯನ ಮಾಡತಕ್ಕದ್ದು.

೨. ವೇತನಾನುದಾನವು ಗುಣಮಟ್ಟದ ವೃತ್ತಿಶಿಕ್ಷಣ ತರಬೇತಿಯನ್ನು ಉತ್ತೇಜಿಸುವಂತಾಗಿರತಕ್ಕದ್ದು.

೩. ವೇತನಾನುದಾನವು ವಿದ್ಯಾರ್ಥಿ ಕೇಂದ್ರೀಕೃತ ಸಹಾಯಾನುದಾನ ಆಧಾರಿತವಾಗಿರತಕ್ಕದ್ದು.

೪. ಸಂಸ್ಥೆಯಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಸಂಖ್ಯೆ, ಅಂತಿಮ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆ, ಪ್ರಥಮ ದರ್ಜೆ, ಶೇಗ್ರೇಡ್ ದರ್ಜೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ, ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ ಪ.ಜಾ/ಪ.ಪಂ. ವಿದ್ಯಾರ್ಥಿಗಳ ಸಂಖ್ಯೆ, ರ್‍ಯಾಂಕ್ ಪಡೆದವರ ಸಂಖ್ಯೆ ಮತ್ತು ಸಂಸ್ಥೆಯ ಭೌಗೋಳಿಕ ಸ್ಥಳ ಮತ್ತು ಮುಂದುವರಿಕೆ/ಹಿಂದುಳಿಯುವಿಕೆ ಮತ್ತು ಇತರ ಅಂಶಗಳನ್ನು ಮಾನದಂಡಗಳನ್ನಾಗಿ ಪರಿಗಣಿಸತಕ್ಕದ್ದು.

೫. ಇತರ ಇಲಾಖೆಯಲ್ಲಿ ರಚಿಸಿರುವ ಅನುದಾನ ಸಂಹಿತೆಯನ್ನು ಸಹ ಅಧ್ಯಯನ ಮಾಡಿ ಪರಿಗಣಿಸತಕ್ಕದ್ದು.

೬. ಈ ಸಮಿತಿಯು ಇಚ್ಛಿಸಿದಲ್ಲಿ ತಜ್ಞರನ್ನು Co-opt ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.

ಸಮಿತಿಗೆ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ರವರು ಕೇಂದ್ರಕಛೇರಿಯಲ್ಲಿ ಈಗಾಗಲೇ ಲಭ್ಯವಿರುವ ಸ್ಥಳಾವಕಾಶ, ಸಿಬ್ಬಂದಿ ಸಹಾಯ ಮತ್ತು ಲೇಖನಸಾಮಗ್ರಿಗಳನ್ನು ಒದಗಿಸತಕ್ಕದ್ದು.

ಸಮಿತಿಯು ಮೂರು ತಿಂಗಳ ಒಳಗಾಗಿ ಅಂತಿಮ ವರದಿಯನ್ನು ಸಲ್ಲಿಸತಕ್ಕದ್ದು.

ಸಂಸ್ಥೆಯ ಅಧಿಕಾರೇತರ ಸದಸ್ಯರಿಗೆ ನಿಯಮಾನುಸಾರ ಸಂಭಾವನೆ, ಪ್ರಯಾಣಭತ್ಯೆಯನ್ನು ನೀಡತಕ್ಕದ್ದು.

ANNEXURE-2

# REPORT OF THE EXPERT COMMITTEE

ON

# REVISION OF GRANT-IN-AID CODE FOR PRIVATE ITIs IN KARNATAKA

AND

# INTRODUCTION OF NEW SCHEME OF STUDENT-CENTRIC GRANT IN AID

JUNE 2007

## SUMMARY OF MAIN RECOMMENDATIONS AND OBSERVATIONS

1. Vocational training offers a future for school-leavers through development of skill and employability. The number of young men and women who do not proceed academically beyond SSLC is around 5 lakhs per annum. There is need to strengthen the ITI system in the state.

SALARY GRANT-IN-AID (1997 REGULATIONS)

2. The existing Grant-in-Aid Code has a number of deficiencies which have been pointed out in the Report. The chief of these are

(a) Lack of mechanism for prompt payment of salary every month, leading to substantial delay in salaried employees getting their salaries-a situation not existing in any other Grant-in-Aid scheme

(b) In comparison with other Grant-in-Aid employees, a truncated quantum of salary grant, without other benefits given to other Grant-in-Aid staff

(c) Long period of 7 years of waiting for sanction of Grant – needs to be reduced to 5 years, with further relaxation in the case of SC/ST managements, women, disabled, and minorities

(d) Cumbersome admission process of trainees to ITI s under Grant-in-Aid

(e) Absence of a management quota

(f) Fees fixed in 1997 and not revised thereafter

(g) Staffing pattern needs revision

(h) Classes need to start promptly on 1st of August each year; admission process should be regulated

accordingly, and the systems in vogue in respect of Pre-University admissions can be adopted. Reservation of seats to be made but rationalized on a practical basis.

(i) Existing Code does not contain features relating to employee regulation and security, which are to be adopted from other Codes.

OTHER OBSERVATIONS:

(3) System of conducting ITI Examinations needs thorough improvement to make the system credible and fool-proof against malpractices

(4) There is considerable delay in the issue of National Trade Certificates. They should be issued along with Marks Cards.

(5) Department should adopt Information Technology for efficient management of ITI matters, as well as introduce transparency in its dealings

(6) The State Council for Vocational Training needs to get active in introducing new and relevant courses in consultation with the industry and other employers, and make it possible for the private ITI s to offer such courses.

(7) State Government should take up with Government of India regarding the need to include private ITIs also under the Centres of Excellence programme, and channelize capital funds to these institutions.

STUDENT-CENTRIC GRANT-IN-AID

(8) This is a welcome concept which can benefit the students in non-Grant-in-Aid it is, assist the private ITI s to reach financial stability, and help improve the infrastructure in the private ITI s..

(9) The budget provision under this head can be released for

--Building and equipment grant to deserving institutes

--Grants for libraries, training of trainers, awards for best in the categories of trainees, teachers, and institutes, and for setting up new add-on training courses which will further improve the employability of ITI trainees.

(10) A substantial part of the budget provision should be for **Studentships**, which will be released to non-Grant-in-Aid ITI s for all candidates of the categories of SC/ST, OBC, Minorities, Women, Physically Disabled, and Ex-Servicemen who are selected for training. A scale of Studentships ranging from Rs 2000 to Rs 6000 has been suggested, depending upon type of trade and duration. Further incentive for passing of these categories of student, as well as incentives for high performance among these categories of students. Government is requested to announce immediately 10,000 Studentships of this nature starting from the current year.

(11) For purposes of this scheme, private unaided ITI s are classified on the basis of rural/urban and backward region where they are located.

(12) The Scheme of Student-Centric Grant-in-Aid for unaided ITI s to be seen as a major initial step in assisting vocational training in the State with scope for further development, and should be, for better performance, under the direction of an Empowered Committee. The budget provision to be made non-lapseable, and for this purpose, a Special Purpose Vehicle – a Registered Society or a Corporate organization to be set up with private sector participation/representation.

## ಚೆಕ್‌ಡ್ಯಾಂ ನಿರ್ಮಾಣದ ಬಗ್ಗೆ

## 411; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬಾಣೋಜಿಪಂಥ್ ಏತ ನೀರಾವರಿ ಯೋಜನೆ ಶಿಂಷಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಚೆಕ್ ಡ್ಯಾಂ ಪದೇ ಪದೇ ಒಡೆದು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹಾಗಿದ್ದಲ್ಲಿ, ಪದೇ ಪದೇ ಒಡೆದು ಹೋಗುತ್ತಿರುವ ಚೆಕ್ ಡ್ಯಾಂ ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

**ಅ)** ಮದ್ದೂರು ತಾಲ್ಲೂಕಿನ ನೀಲಕಂಠನಹಳ್ಳಿ ಗ್ರಾಮದ ಬಳಿ ಬಾಣೋಜಿಪಂಥ್ ಏತ ನೀರಾವರಿ ಯೋಜನೆಗೆ ನೀರು ಒದಗಿಸುವ ಸಲುವಾಗಿ ಶಿಂಷಾ ನದಿಗೆ ಕಟ್ಟಲಾಗಿರುವ ವಿಯರ್‌ನ ಬಲತುದಿಯು ಸರಪಳಿ 195.00 ಮೀ. ನಿಂದ 210.00 ಮೀ. ರವರೆಗೆ ದಿನಾಂಕ:08.05.2007 ರಂದು ಧಕ್ಕೆಯಾಗಿತ್ತು. ಧಕ್ಕೆಯಾದ ಈ ಭಾಗದ ಮರುನಿರ್ಮಾಣ ಹಾಗೂ ಹೆಚ್ಚುವರಿಯಾಗಿ ಸರಪಳಿ 210 ರಿಂದ 225 ಮೀ.ವರೆಗೆ ವಿಯರ್ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಈ ಕಾಮಗಾರಿ ಪ್ರಗತಿಯಲ್ಲಿದೆ.

ಧಕ್ಕೆಯಾದ ಈ ಭಾಗದ ಕಾಮಗಾರಿಯನ್ನು ನಿರ್ಮಿಸಲು, ನೀರಿನ ಹರಿವನ್ನು ನಿಯಂತ್ರಿಸಿ ಮಾರ್ಗ ಬದಲಿಸಲು ನಿರ್ಮಿಸಿದ್ದ ತಾತ್ಕಾಲಿಕ ರಿಂಗ್‌ಬಂಡ್ ದಿನಾಂಕ:03–11–2011 ಹಾಗೂ 04–11–2011 ರಂದು ಬಿದ್ದ ಮಳೆಯಿಂದ ಉಂಟಾದ ಪ್ರವಾಹದಿಂದ ದಿನಾಂಕ:04–11–2011 ರಂದು ಒಡೆದಿರುವುದು ಗಮನಕ್ಕೆ ಬಂದಿದೆ.

**ಆ)** ತಾತ್ಕಾಲಿಕವಾಗಿ ನಿರ್ಮಿಸಿದ್ದ ರಿಂಗ್‌ಬಂಡ್ ಕೊಚ್ಚಿಹೋಗಿದ್ದು, ಇದನ್ನು ಪುನರ್ ನಿರ್ಮಿಸಿ, ವಿಯರ್ ನಿರ್ಮಾಣವನ್ನು ಮುಂದುವರೆಸಿ ಪೂರ್ಣಗೊಳಿಸಲಾಗುವುದು.

## ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿನ ವನ್ಯಜೀವಿ ಸಂರಕ್ಷಣೆ ಬಗ್ಗೆ

### 704; ಶ್ರೀ ಪ್ರೋ ಕೆ.ಆರ್. ಮಲ್ಲಿಕಾರ್ಜುನಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಎಷ್ಟು ವನ್ಯಜೀವಿಗಳು ವಿವಿಧ ಕಾರಣಗಳಿಂದಾಗಿ ಮೃತಪಟ್ಟಿವೆ (ಮೃತಪಟ್ಟ ವಿವಿಧ ವನ್ಯಜೀವಿಗಳ ವಿವರವನ್ನು ಕಾರಣಸಹಿತ ತಾಲ್ಲೂಕುವಾರು, ಅರಣ್ಯವಾರು ವಿವರ ನೀಡುವುದು);

**ಆ)** ಸದರಿ ವನ್ಯಜೀವಿಗಳ ಸಾವಿಗೆ ಕಾರಣರಾದವರನ್ನು ಎಷ್ಟು ಪ್ರಕರಣಗಳಲ್ಲಿ ಪತ್ತೆ ಮಾಡಲಾಗಿದೆ. (ಇವರ ಮೇಲೆ ಕೈಗೊಂಡ ಕ್ರಮದ ವಿವರ ಒದಗಿಸುವುದು);

**ಇ)** ಜಿಲ್ಲೆಯ ಯಾವ ಯಾವ ಅರಣ್ಯ ಪ್ರದೇಶದಲ್ಲಿ ವಾಹನ ಸಂಚಾರದ ರಸ್ತೆಗಳಿವೆ (ವಿವರ ನೀಡುವುದು);

**ಈ)** ರಾಜ್ಯದ ವನ್ಯಜೀವಿ ವಲಯಗಳಲ್ಲಿ ರಾತ್ರಿ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿಷೇಧ ಮಾಡಿದ್ದಲ್ಲಿ ಬಹಳಷ್ಟು ವನ್ಯಮೃಗಗಳ ಜೀವ ಉಳಿಸಬಹುದಲ್ಲವೇ; ಈ ಬಗ್ಗೆ ಸರ್ಕಾರ ನಿರ್ದಿಷ್ಟ ಕ್ರಮ ಕೈಗೊಳ್ಳುವುದೇ?

### ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು)

**ಅ)** ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳು ವಿವಿಧ ಕಾರಣಗಳಿಂದಾಗಿ ಮೃತಪಟ್ಟಿರುವ ವಿವರ ಈ ಕೆಳಕಂಡಂತಿದೆ.

| | 2009–10 | | | 2010–11 | | | 2011–12 | | |
|---|---|---|---|---|---|---|---|---|---|
| ವನ್ಯಪ್ರಾಣಿ | ಸ್ವಾಭಾವಿಕ | ವಿದ್ಯುತ್ ಸ್ಪರ್ಶ | ಬೇಟೆ/ ಅಪಘಾತ | ಸ್ವಾಭಾವಿಕ | ವಿದ್ಯುತ್ ಸ್ಪರ್ಶ | ಬೇಟೆ/ ಅಪಘಾತ | ಸ್ವಾಭಾವಿಕ | ವಿದ್ಯುತ್ ಸ್ಪರ್ಶ | ಬೇಟೆ/ ಅಪಘಾತ |
| **ಚಾಮರಾಜನಗರ – ಚಾಮರಾಜನಗರ ಸ್ಟೇಟ್ ಫಾರೆಸ್ಟ್** | | | | | | | | | |
| ಆನೆ | 02 | – | – | 02 | 01 | – | – | 01 | – |
| ಜಿಂಕೆ | – | – | – | – | – | 03 | – | – | – |
| ಹುಲಿ | – | – | 01 | – | – | – | – | – | – |
| **ಯಳಂದೂರು – ಬಿಆರ್‌ಟಿ ಮೀಸಲು ಅರಣ್ಯ** | | | | | | | | | |
| ಆನೆ | – | – | – | 02 | – | – | 02 | – | – |
| ಚಿರತೆ | – | – | 01 | – | – | – | – | – | – |
| **ಕೊಳ್ಳೇಗಾಲ – ದೊಡ್ಡಸಂಪಿಗೆ ಮೀಸಲು ಅರಣ್ಯ** | | | | | | | | | |
| ಆನೆ | 03 | – | – | 12 | – | – | 06 | – | – |
| ಜಿಂಕೆ | – | – | 01 | – | – | 02 | – | – | 01 |
| ಕಾಡು ಹಂದಿ | – | – | 01 | – | – | – | – | – | 02 |
| ಕಡವೆ | – | – | – | – | – | – | – | – | 01 |

**ಆ)** 15 ಪ್ರಕರಣಗಳ ಪೈಕಿ 09 ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಮಾಡಲಾಗಿದೆ. (ಕಳೆದ ಮೂರು ವರ್ಷಗಳಲ್ಲಿ) ನಿಯಮಾನುಸಾರ ಅರಣ್ಯ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ.

**ಇ)**

1. ಚಾಮರಾಜನಗರ ಸ್ಟೇಟ್ ಫಾರೆಸ್ಟ್
2. ಬಿಆರ್‌ಟಿ ಮೀಸಲು ಅರಣ್ಯ
3. ದೊಡ್ಡಸಂಪಿಗೆ ಮೀಸಲು ಅರಣ್ಯ

**ಈ)** ಹೌದು.

ನಾಗರಹೊಳೆಯ ಅಭಯಾರಣ್ಯದ ಮೂಲಕ ಹಾದುಹೋಗುವ ಮೈಸೂರು ಮಾನಂತವಾಡಿ 10.00 ಕಿ.ಮೀ. ರಸ್ತೆಯನ್ನು ಸಂಪೂರ್ಣವಾಗಿ ಮುಚ್ಚಲಾಗಿರುತ್ತದೆ. ಅಲ್ಲದೆ, ಬಂಡೀಪುರ ರಾಷ್ಟ್ರೀಯ ಉದ್ಯಾನವನದಿಂದ ತಮಿಳುನಾಡು ಮತ್ತು ಕೇರಳಕ್ಕೆ ಹೋಗುವ NH 67 ಮತ್ತು NH 212 ಗಳಲ್ಲಿ ವಾಹನ ಸಂಚಾರವನ್ನು ರಾತ್ರಿ 9.00 ಗಂಟೆಯಿಂದ ಬೆಳಿಗ್ಗೆ 6.00 ಗಂಟೆವರೆಗೆ ನಿಷೇಧಿಸಲಾಗಿರುತ್ತದೆ.

## ಸ್ನಾತಕೋತ್ತರ ಪದವಿ ಪಡೆದ ಸರ್ಕಾರಿ ಐ.ಟಿ.ಐ. ಗಳಲ್ಲಿ ಕೆಲಸ ಮಾಡುತ್ತಿರುವ ಪ್ರಶಿಕ್ಷಕರನ್ನು ವರ್ಗಾಯಿಸದಿರುವ ಬಗ್ಗೆ

### 681; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

**ಅ)** ಸರ್ಕಾರಿ ಐ.ಟಿ.ಐ.ಗಳಲ್ಲಿ ಕೆಲಸ ಮಾಡುತ್ತಿರುವ ಸ್ನಾತಕೋತ್ತರ ಪದವಿ ಪಡೆದ ಪ್ರಶಿಕ್ಷಕರನ್ನು ಬೇರೆ ಕಡೆ ವರ್ಗಾಯಿಸಲು ನಿರ್ಧರಿಸಲಾಗಿದೆಯೇ;

**ಆ)** ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸ್ನಾತಕೋತ್ತರ ಪದವೀಧರರಿಗೆ ಇದ್ದ ಸಂಸ್ಥೆಯಲ್ಲಿಯೇ ಕೆಲಸ ಮಾಡಲು ಅವಕಾಶ ಕಲ್ಪಿಸಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಈ ಸೌಲಭ್ಯವನ್ನು ಸರ್ಕಾರಿ ಐ.ಟಿ.ಐ.ಗಳಲ್ಲಿ ಕೆಲಸ ಮಾಡುತ್ತಿರುವ ಪ್ರಶಿಕ್ಷಕರಿಗೆ ವಿಸ್ತರಿಸದಿರಲು ಕಾರಣಗಳೇನು;

ಈ) ಸರ್ಕಾರಿ ಐ.ಟಿ.ಐ.ಗಳಲ್ಲಿ ಕೆಲಸ ಮಾಡುತ್ತಿರುವ ಪ್ರಶಿಕ್ಷಕರನ್ನು ಇದ್ದ ಸ್ಥಳದಲ್ಲಿಯೇ ಮುಂದುವರಿಸಲು ಉದ್ದೇಶಿಸಲಾಗಿದೆಯೇ;

ಉ) ಹಾಗಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು?

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು)**

ಅ) ಸದ್ಯಕ್ಕೆ ನಿರ್ಧರಿಸಿರುವುದಿಲ್ಲ,

ಆ) ಸರ್ಕಾರದಿಂದ ಈ ಕುರಿತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಯಾವುದೇ ಸೂಚನೆ ನೀಡಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಸರ್ಕಾರದ ನಿಯಮಾನುಸಾರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಕಾಲಕಾಲಕ್ಕೆ ವರ್ಗಾವಣೆ ಮಾಡಲಾಗುವುದು.

ಉ) ಡಿಜಿಇಟಿ ನಿಯಮಾವಳಿಯಂತೆ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಬೋಧಕರಿಗೆ ನಿಗಧಿಪಡಿಸಲಾದ ಕನಿಷ್ಠ ವಿದ್ಯಾರ್ಹತೆಯು ಸಂಬಂಧಪಟ್ಟ ವಿಷಯಗಳಲ್ಲಿ ಇಂಜಿನಿಯರಿಂಗ್ ಪದವಿ/ಡಿಪ್ಲೊಮೋ /ಎನ್‌ಟಿಸಿ–ಎನ್‌ಎಸಿ ಆಗಿರುತ್ತದೆ. ಆದ್ದರಿಂದ ಸ್ನಾತಕೋತ್ತರ ಪದವಿ ಹೊಂದುವ ಕಡ್ಡಾಯ ಇರುವುದಿಲ್ಲ. ಹೀಗಾಗಿ ಸ್ನಾತಕೋತ್ತರ ಪದವಿ ಪಡೆದಿರುವವರಿಗೆ ಯಾವುದೇ ವಿಶೇಷ ಸೌಲಭ್ಯ ಅಥವಾ ನಿರ್ಬಂಧನೆಗಳನ್ನು ಇಲಾಖೆಯು ವಿಧಿಸಿರುವುದಿಲ್ಲ.

## ಹಾಸನ ತಾಲ್ಲೂಕು ಕಸಬಾ ಹೋಬಳಿಯಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಭೂಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿರುವ ಕುರಿತು

### 659; ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಹಾಸನ ತಾಲ್ಲೂಕು, ಕಸಬಾ ಹೋಬಳಿಯಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಸರ್ಕಾರ ಭೂಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿರುವ ಜಮೀನೆಷ್ಟು;

**ಆ)** ಸರ್ಕಾರ ಭೂಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿರುವ ಜಮೀನಿನಲ್ಲಿ ಕೃಷಿ ಮತ್ತು ಕೃಷಿಯೇತರ ಜಮೀನೆಷ್ಟು;

**ಇ)** ಭೂಸ್ವಾಧೀನಕ್ಕೆ ಸ್ಥಳೀಯ ರೈತರು ಒಪ್ಪಿದ್ದಾರೆಯೇ; ಭೂಸ್ವಾಧೀನವಾಗಿರುವ ಜಮೀನಿಗೆ ಪ್ರತಿ ಎಕರೆಗೆ ನೀಡುವ ಪರಿಹಾರ ಧನದ ಮೊತ್ತವೆಷ್ಟು?

**ಈ)** ಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನನ್ನು ಯಾವ ಯಾವ ಕೈಗಾರಿಕೆಗಳಿಗೆ ನೀಡುವ ಉದ್ದೇಶವಿದೆ; ಮತ್ತು ಅವರಿಗೆ ಎಷ್ಟೆಷ್ಟು ಜಮೀನನ್ನು ನೀಡುವ ಉದ್ದೇಶವಿದೆ;

**ಉ)** ಸ್ವಾಧೀನಪಡಿಸಿಕೊಂಡಿರುವ ಜಮೀನಿನ ರೈತರಿಗೆ ಉದ್ಯೋಗ ಭದ್ರತೆಗೆ ಉದ್ಯೋಗ ನೀಡುವ ಯೋಜನೆ ಸರ್ಕಾರದಲ್ಲಿದೆಯೇ

### ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

**ಅ)** ಕೆ.ಐ.ಎ.ಡಿ.ಬಿ. ವತಿಯಿಂದ ಹಾಸನ ತಾಲ್ಲೂಕಿನ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಒಟ್ಟು 1422–241/2 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಗ್ರಾಮವಾರು ವಿವರಗಳನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ.

**ಆ)** ಈ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಪೂರಾ ಜಮೀನು ಖುಷ್ಕಿ / ತರಿ / ಬಾಗಾಯ್ತು ಜಮೀನೆಂದು ವರ್ಗೀಕರಿಸಲ್ಪಟ್ಟಿದ್ದು, ಕೃಷಿಯೇತರ ಜಮೀನಾಗಿರುವುದಿಲ್ಲ.

**ಇ)** ಭೂಸ್ವಾಧೀನವನ್ನು ವಿರೋಧಿಸಿ, ರೈತರಿಂದ ಯಾವುದೇ ಪ್ರತಿಭಟನೆಗಳು ವ್ಯಕ್ತವಾಗಿರುವುದಿಲ್ಲ. ಆದರೆ, ಬೊಮ್ಮನಾಯಕನಹಳ್ಳಿ ಗ್ರಾಮದ 17–06 ಎಕರೆ ಜಮೀನಿನ ಭೂಸ್ವಾಧೀನ ಕ್ರಮವನ್ನು ಪ್ರಶ್ನಿಸಿ, 26 ಜನ ಭೂ ಮಾಲೀಕರು ರಿಟ್ ಅರ್ಜಿ ಸಂಖ್ಯೆ: 37251–75/2011 ಪ್ರಕರಣವನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಯಥಾಸ್ಥಿತಿ ಕಾಪಾಡುವಂತೆ ಮಾನ್ಯ ನ್ಯಾಯಾಲಯವು ಮಧ್ಯಂತರ ಆದೇಶ ನೀಡಿರುತ್ತದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಜಮೀನಿಗೆ ನಿಗಧಿಪಡಿಸಿರುವ ಪರಿಹಾರ ದರದ ವಿವರಗಳನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ.

**ಈ)** ಪ್ರಸ್ತಾಪಿತ ಭೂಸ್ವಾಧೀನದ ಉದ್ದೇಶ ಮತ್ತು ವಿಸ್ತೀರ್ಣದ ವಿವರಗಳನ್ನು **ಅನುಬಂಧ–2**ರಲ್ಲಿ ನಿಡಲಾಗಿದೆ.

**ಉ)** ಡಾ॥ ಸರೋಜಿನಿ ಮಹಿಷಿ ವರದಿಯ ಪ್ರಕಾರ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವಂತೆ ಷರತ್ತನ್ನು ವಿಧಿಸಿ, ಯೋಜನೆ ಮಂಜೂರಾತಿ ಮಾಡಲಾಗುತ್ತಿದೆ.

ಅನುಬಂಧ-1

ಕೆಐಎಡಿಬಿ ವತಿಯಿಂದ ಹಾಸನ ತಾಲ್ಲೂಕು, ಕಸಬಾ ಹೋಬಳಿಯಲ್ಲಿ ಸ್ವಾಧೀನಪಡಿಸಿಕೊಂಡಿರುವ/ ಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನುಗಳ ವಿವರ

| ಕ್ರ. ಸಂ. | ಗ್ರಾಮ | ವಿಸ್ತೀರ್ಣ ಎ-ಗು | ನಿಗದಿಪಡಿಸಿರುವ ಭೂಪರಿಹಾರ ದರ ಎಕರೆ ಒಂದಕ್ಕೆ (ರೂ. ಲಕ್ಷಗಳಲ್ಲಿ) |
|---|---|---|---|
| 1. | ಸಮುದ್ರವಳ್ಳಿ | 21-09 | 3.00 |
| 2. | ಪೆರುಮೇನಹಳ್ಳಿ | 112-14 | |
| 3 | ಕೊಕ್ಕನಗಟ್ಟ | 98-32 | |
| 4 | ಹನುಮಂತಪುರ | 11-11 | |
| 5 | ಪೆರುಮೇನಹಳ್ಳಿ | 4-30 | 3.80 |
| 6 | ಕೊಕ್ಕನಗಟ್ಟ | 1-36 | |
| 7 | ಬಸ್ತೇನಹಳ್ಳಿ | 121-18 ½ | 20.00 |
| 8 | ಕಸ್ತೂರವಳ್ಳಿ | 82-01 ¼ | |
| 9 | ಗವ್ವೇನಹಳ್ಳಿ | 201-11 ¼ | 25.00 |
| 10 | ಆಡುವಳ್ಳಿ | 55-30 | |
| 11 | ಬೊಮ್ಮನಾಯಕನಹಳ್ಳಿ | 32-22 | |
| 12 | ಬುವನಹಳ್ಳಿ | 6-15 | 11.00 |
| 13 | ಕೆಂಚಟವಳ್ಳಿ | 11-05 ½ | |
| 14 | ಸಮುದ್ರವಳ್ಳಿ | 11-39 | 9.00 |
| 15 | ಗೇಕರವಳ್ಳಿ | 4-32 | |
| 16 | ಪೆರುಮೇನಹಳ್ಳಿ | 18-00<br>17-34 | ದರ ನಿಗದಿಪಡಿಸಬೇಕಾಗಿದೆ. |
| 17 | ಬುವನಹಳ್ಳಿ | 95-21 | ಅಂತಿಮ ಅಧಿಸೂಚನೆ ಹೊರಡಿಸಬೇಕಾಗಿದೆ. |
| 18 | ಸಂಕೇನಹಳ್ಳಿ | 57-10 ½ | |
| 19 | ಲಕ್ಷ್ಮಿಸಾಗರ | 110-25 | |
| 20 | ತೆಂಡಿಹಳ್ಳಿ | 90-01 | |
| 21 | ದ್ಯಾವಲಾಪುರ | 31-19 | |
| 22 | ಜ.ಮೈಲನಹಳ್ಳಿ | 14-01 | |
| 23 | ಬುವನಹಳ್ಳಿ | 7-10 | ಪ್ರಾಥಮಿಕ ಅಧಿಸೂಚನೆ ಹೊರಡಿಸಬೇಕಾಗಿದೆ. |
| 24 | ತೆಂಡಿಹಳ್ಳಿ | 14-03 | |
| 25 | ಗೇಕರವಳ್ಳಿ | 3-17 | ಪ್ರಾಥಮಿಕ ಅಧಿಸೂಚನೆ ಹೊರಡಿಸಬೇಕಾಗಿದೆ. |
| 26 | ಕೆಂಚಟವಳ್ಳಿ | 0-11 | |
| 27 | ಬುವನಹಳ್ಳಿ | 178-05 ½ | ದರ ನಿಗದಿಪಡಿಸಬೇಕಾಗಿದೆ. |
| | ಒಟ್ಟು | 1422-24½ | |

ಅನುಬಂಧ-2

**ಕೆಐಎಡಿಬಿ ವತಿಯಿಂದ ಹಾಸನ ತಾಲ್ಲೂಕು, ಕಸಬಾ ಹೋಬಳಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಜಮೀನುಗಳ ಭೂಸ್ವಾಧೀನದ ಉದ್ದೇಶ ಮತ್ತು ವಿವರ**

| ಕ್ರ. ಸಂ. | ಗ್ರಾಮ | ವಿಸ್ತೀರ್ಣ ಎ-ಗು | ಭೂಸ್ವಾಧೀನದ ಉದ್ದೇಶ | ಷರಾ |
|---|---|---|---|---|
| 1. | ಸಮುದ್ರವಳ್ಳಿ | 21-09 | ಹಾಸನ ವಿಶೇಷ ಆರ್ಥಿಕ ವಲಯ ಯೋಜನೆ | ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯಗೊಂಡಿದೆ. |
| 2. | ಪೆರುಮೇನಹಳ್ಳಿ | 112-14 | | |
| 3 | ಕೊಕ್ಕನಗಟ್ಟ | 98-32 | | |
| 4 | ಹನುಮಂತಪುರ | 11-11 | | |
| 5 | ಪೆರುಮೇನಹಳ್ಳಿ | 4-30 | ಹಾಸನ ವಿಶೇಷ ಆರ್ಥಿಕ ವಲಯ ಯೋಜನೆ | ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯಗೊಂಡಿದೆ. |
| 6 | ಕೊಕ್ಕನಗಟ್ಟ | 1-36 | | |
| 7 | ಬಸ್ತೇನಹಳ್ಳಿ | 121-18 ½ | ಕೈಗಾರಿಕಾ ಪ್ರದೇಶ (ಐ.ಐ.ಡಿ) | ಈ ಯೋಜನೆಗಾಗಿ ಸ್ವಾಧೀನ ಪಡಿಸಿಕೊಂಡಿರುವ ಒಟ್ಟು 1057-24 ಎಕರೆ ಪೈಕಿ 60 ಎಕರೆಗೆ ಪ್ರೀಮಿಯಂ ಫಾರಂ ಫ್ರೆಷ್ ಪ್ರೊಡ್ಯೂಸ್ ಲಿ., ಮತ್ತು 450 ಎಕರೆ ಜಮೀನಿಗೆ ಹಾಸನ ಥರ್ಮಲ್ ಪವರ್ ಪ್ರೈ. ಲಿ., ಯೋಜನೆಗಳು ಅನುಮೋದನೆಗೊಂಡಿರುತ್ತವೆ. |
| 8 | ಕಸ್ತೂರವಳ್ಳಿ | 82-01 ¼ | | |
| 9 | ಗವ್ವೇನಹಳ್ಳಿ | 201-11 ¼ | | |
| 10 | ಅಡುವಳ್ಳಿ | 55-30 | | |
| 11 | ಬೊಮ್ಮನಾಯಕನಹಳ್ಳಿ | 32-22 | | |
| 12 | ಬುವನಹಳ್ಳಿ | 6-15 | ಹಾಸನ ವಿಮಾನ ನಿಲ್ದಾಣಕ್ಕೆ ಸಂಪರ್ಕ ರಸ್ತೆ | ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿದೆ. |
| 13 | ಕೆಂಚಟವಳ್ಳಿ | 11-05 ½ | | |
| 14 | ಸಮುದ್ರವಳ್ಳಿ | 11-39 | | |
| 15 | ಗೇಕರವಳ್ಳಿ | 4-32 | | |
| 16 | ಪೆರುಮೇನಹಳ್ಳಿ | 18-00<br>17-34 | ಹಾಸನ ವಿಶೇಷ ಆರ್ಥಿಕ ವಲಯ ಯೋಜನೆ | ದರ ನಿಗದಿಪಡಿಸಬೇಕಾಗಿದೆ. |
| 17 | ಬುವನಹಳ್ಳಿ | 95-21 | ಹಾಸನ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ | ಅಂತಿಮ ಅಧಿಸೂಚನೆ ಹೊರಡಿಸಬೇಕಾಗಿದೆ. |
| 18 | ಸಂಕೇನಹಳ್ಳಿ | 57-10 ½ | | |
| 19 | ಲಕ್ಷ್ಮಿಸಾಗರ | 110-25 | | |
| 20 | ತೆಂಡಿಹಳ್ಳಿ | 90-01 | | |
| 21 | ದ್ಯಾವಲಾಪುರ | 31-19 | | |
| 22 | ಜಿ.ಮೈಲನಹಳ್ಳಿ | 14-01 | | |
| 23 | ಬುವನಹಳ್ಳಿ | 7-10 | ಹಾಸನ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ | ಪ್ರಾಥಮಿಕ ಅಧಿಸೂಚನೆ ಹೊರಡಿಸಬೇಕಾಗಿದೆ. |
| 24 | ತೆಂಡಿಹಳ್ಳಿ | 14-03 | | |
| 25 | ಗೇಕರವಳ್ಳಿ | 3-17 | ಹಾಸನ ವಿಮಾನ ನಿಲ್ದಾಣಕ್ಕೆ ಸಂಪರ್ಕ ರಸ್ತೆ | ಪ್ರಾಥಮಿಕ ಅಧಿಸೂಚನೆ ಹೊರಡಿಸಬೇಕಾಗಿದೆ. |
| 26 | ಕೆಂಚಟವಳ್ಳಿ | 0-11 | | |
| 27 | ಬುವನಹಳ್ಳಿ | 178-05 ½ | ಗಾಲ್ಫ್ ಯೋಜನೆಗಾಗಿ (ಜ್ಯೂಪಿಟರ್ ಏವಿಯೇಷನ್) | ದರ ನಿಗದಿಪಡಿಸಬೇಕಾಗಿದೆ. |
| | ಒಟ್ಟು | 1422-24½ | | |

## ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಮಹಾಲಕ್ಷ್ಮಿ ಏತ ನೀರಾವರಿ ಕಾಮಗಾರಿ ಬಗ್ಗೆ

**248; ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಮಹಾಲಕ್ಷ್ಮಿ ಏತ ನೀರಾವರಿ ಯೋಜನೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆಯೇ?

ಆ) ಈ ಯೋಜನೆಗೆ ಒಳಪಡುವ ನೀರಾವರಿ ವ್ಯಾಪ್ತಿ ಎಷ್ಟು ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಈ ಯೋಜನೆಗೆ 2011–12ನೇ ಸಾಲಿನಲ್ಲಿ ಎಷ್ಟು ಹಣ ಮೀಸಲಿರಿಸಲಾಗುವುದು?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಶ್ರೀ ಮಹಾಲಕ್ಷ್ಮೀ ಏತ ನೀರಾವರಿ ಯೋಜನೆಗಾಗಿ 1.17 ಟಿಎಂಸಿ ನೀರಿನ ಅಗತ್ಯತೆ ಇರುತ್ತದೆ. ಈ ಯೋಜನೆಗಾಗಿ ನೀರಿನ ಹಂಚಿಕೆ ಬಗ್ಗೆ ಪರಿಶೀಲನೆಯಲ್ಲಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

## ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರಿಗೆ ಅರಣ್ಯ ಪರವಾನಿಗೆ ಸರಳೀಕರಣ ಕುರಿತು

### 723; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರು ತಮ್ಮ ಅಗತ್ಯತೆಗೆ ತಮ್ಮ ಹೊಲದಲ್ಲಿರುವ ಮರಗಳನ್ನು ಕಡಿದು ಸಾಗಾಟಕ್ಕೆ ಪರವಾನಿಗೆ ಪಡೆಯುವ ಸಂದರ್ಭದಲ್ಲಿ ರೂಪಾಯಿ 50,000 ಕ್ಕಿಂತ ಹೆಚ್ಚಿನ ಮೌಲ್ಯದ ಮರಗಳ ಪರವಾನಿಗೆಗೆ, ಸಹಾಯಕ ಕಮಿಷನರ್ ಮತ್ತು ಜಿಲ್ಲಾಧಿಕಾರಿಯವರ ಅನುಮತಿಗೆ ಸಲ್ಲಿಸಬೇಕಾಗಿದ್ದು, ಈ ಮೌಲ್ಯ ಕಳೆದ 25 ವರ್ಷಗಳ ಹಿಂದಿನ ಮರದ ಮೌಲ್ಯವಾಗಿದ್ದು ಈಗಲೂ ಅದೇ ಮಾನದಂಡವನ್ನು ಅನುಸರಿಸುತ್ತಿದ್ದು ಇದನ್ನು ಸರಳೀಕರಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು;

**ಆ)** ಅರಣ್ಯ ಇಲಾಖೆ ಮರಗಳನ್ನು ಕಡಿದು ಸಾಗಾಟ ಮಾಡುವಾಗ ಇರುವ ಸರಳೀಕರಣ ಖಾಸಗಿಯವರಿಗೆ ಇಲ್ಲದಿರಲು ಕಾರಣವೇನು?

### ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು)

**ಅ)** ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್‌ಇಇ 8 ಎಫ್‌ಎಎಫ್ 2001 ದಿನಾಂಕ 07-12-2002ರ ಪ್ರಕಾರ ದಿನಾಂಕ 01-01-2003 ರಿಂದ ಅನ್ವಯವಾಗುವಂತೆ ಮರಗಳ ಮೌಲ್ಯ ರೂ. 50,000/- ಕ್ಕಿಂತ ಹೆಚ್ಚಿಗೆ ಇರುವ ಪ್ರಕರಣಗಳಲ್ಲಿ ಮಾತ್ರ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಮತ್ತು ಮರಗಳ ಮೌಲ್ಯ ರೂ.50,000/- ಕ್ಕಿಂತ ಕಡಿಮೆ ಇರುವ ಪ್ರಕರಣಗಳಲ್ಲಿ ಸಂಬಂಧಿಸಿದ ಸಹಾಯಕ ಕಮೀಷನರ್‌ಗಳಿಂದ ಮರಗಳ ಮಾಲೀಕತ್ವದ ಬಗ್ಗೆ ಅಭಿಪ್ರಾಯ ಪಡೆದು, ಪರಿಶೀಲಿಸಿ ಕಡಿತಲೆ ಮತ್ತು ಸಾಗಾಣಿಕೆಗೆ ಅನುಮತಿ ನೀಡಲಾಗುತ್ತಿದೆ. ಹಾಲಿ ಇರುವ ಅಧಿಕಾರದ ಮಿತಿಯನ್ನು ಹೆಚ್ಚಿಸುವ ಕುರಿತು ಸರ್ಕಾರವು ಪರಿಶೀಲಿಸಿ ವರದಿ ನೀಡಲು ದಿನಾಂಕ 24-01-2011 ರಂದು ಇಲಾಖೆಗೆ ಸೂಚಿಸಿದ್ದು, ಇಲಾಖಾ ಮಟ್ಟದಲ್ಲಿ ಶ್ರೀ ಬಿ ಬಸಪ್ಪ

ಭಾ.ಆ.ಸೇ. ಅಂದಿನ ಅಪರ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಮತ್ತು ಹಾಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (EWPT), ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಪಿಸಿಸಿಎಫ್.ಸಿ.ಜಿ.ಎಲ್.482/09-10 ದಿನಾಂಕ 22-03-2010 ರಂತೆ ಈಗಾಗಲೇ ರಚಿತವಾಗಿರುವ ಇಲಾಖಾ ಕಾರ್ಯತಂಡ"ವು ಈ ವಿಷಯವನ್ನು ಪರಿಶೀಲಿಸುತ್ತಿದೆ.

**ಇಲಾಖಾ ಕಾರ್ಯಾ ತಂಡದಲ್ಲಿರುವ ಅಧಿಕಾರಿಗಳು:**

1. ಶ್ರೀ ಬಿ.ಬಸಪ್ಪ, ಭಾ.ಆ.ಸೇ – ಅಧ್ಯಕ್ಷರು
2. ಶ್ರೀಮತಿ ಮಧುಶರ್ಮ ಭಾ.ಆ.ಸೇ– ಸಂಚಾಲಕರು
3. ಶ್ರೀ ರಾಮಚಂದ್ರ, ಭಾ.ಆ.ಸೇ– ಸದಸ್ಯರು
4. ಶ್ರೀ ಬಿ.ಪಿ. ರವಿ, ಭಾ.ಆ.ಸೇ–ಸದಸ್ಯರು
5. ಶ್ರೀ ಕುಮಾರ್ ಪುಷ್ಕರ್, ಭಾ.ಆ.ಸೇ– ಸದಸ್ಯರು

ಆ) ಅರಣ್ಯ ಇಲಾಖೆ ಅರಣ್ಯ ಪ್ರದೇಶದಲ್ಲಿರುವ ಮರಗಳನ್ನು ಕಡಿಯಲು ಮಂಜೂರಾದ ಕಾರ್ಯಯೋಜನೆ (ವರ್ಕಿಂಗ್ ಪ್ಲಾನ್) ಅನ್ವಯ ಅವಕಾಶವಿದ್ದರೆ, ಕರ್ನಾಟಕ ಅರಣ್ಯ ಕಾಯಿದೆ 1963, ಕರ್ನಾಟಕ ಅರಣ್ಯ ನಿಯಮಾವಳಿ 1969, ಕರ್ನಾಟಕ ಅರಣ್ಯ ಕೈಪಿಡಿ 1976, ಕರ್ನಾಟಕ ಅರಣ್ಯ ಸಂಹಿತೆ 1976 ಹಾಗೂ ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ 1976 ಇವುಗಳ ಅಡಿಯಲ್ಲಿ ರೂಪಿಸಿರುವ ನಿಯಮಾವಳಿಗಳನ್ವಯ ಕಡಿದು ಸಾಗಾಣಿಕೆ ಮಾಡಲಾಗುತ್ತಿದೆಯೇ ಹೊರತು ಯಾವುದೇ ಸರಳೀಕರಣ ಇರುವುದಿಲ್ಲ. ಆದರೆ ಖಾಸಗಿ ಜಮೀನಿನಲ್ಲಿರುವ ಮರಗಳನ್ನು ಕಡಿಯುವ ಮತ್ತು ಸಾಗಾಣಿಕೆಯನ್ನು ಸರಳೀಕರಣ ಮಾಡುವ ನಿಟ್ಟಿನಲ್ಲಿ ಸರ್ಕಾರವು ಖಾಸಗಿ ಜಮೀನಿನಲ್ಲಿ ಸಾಮಾನ್ಯವಾಗಿ ಬೆಳೆಯುವ ಹನ್ನೊಂದು (11) ಜಾತಿಯ ವಿವಿಧ

ಮರಗಳ ಕಡಿತಲೆ ಮತ್ತು ಸಾಗಾಣಿಕೆ ಈಗಾಗಲೇ ವಿನಾಯಿತಿ ನೀಡಿದ್ದು, ಇನ್ನೂ ಹೆಚ್ಚಿನ ವಿವಿಧ ಜಾತಿಯ ಮರಗಳ ಕಡಿತಲೆ ಮತ್ತು ಸಾಗಾಣಿಕೆಗೆ ವಿನಾಯಿತಿ ನೀಡಲು ಇಲಾಖಾ ಮಟ್ಟದಲ್ಲಿ ಶ್ರೀ ಬಸಪ್ಪ, ಭಾ.ಆ.ಸೇ. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ "ಇಲಾಖಾ ಕಾರ್ಯತಂಡ"ವು ಈ ವಿಷಯವನ್ನು ಪರಿಶೀಲಿಸುತ್ತಿದೆ.

**ಹುಣಸೂರು ರೇಷ್ಮೆ ಗೂಡಿನ ಮಾರುಕಟ್ಟೆ ದುರಸ್ತಿಪಡಿಸುವ ಬಗ್ಗೆ**

**752; ಶ್ರೀ ಎಸ್ ಚಿಕ್ಕಮಾದು (ವಿಧಾನಸಭಾ ಕ್ಷೇತ್ರ)**

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನ ರೇಷ್ಮೆ ಗೂಡಿನ ಮಾರುಕಟ್ಟೆಯ ಕಟ್ಟಡ ನಿರ್ಮಿಸಿದ್ದು ಯಾವಾಗ;

ಆ) ಸದರಿ ಕಟ್ಟಡ ಶಿಥಿಲಗೊಂಡಿದ್ದು NIE Expert Engineers ರವರು ಇದು ಅನುಪಯುಕ್ತವಾದ ಕಟ್ಟಡವಾಗಿದ್ದು Demolish ಮಾಡಬೇಕೆಂದು ನೀಡಿರುವ ಅವರ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ನಿರ್ದೇಶಕರು, ಮೈಸೂರು ಇವರ ಮೂಲಕ ಮಾರುಕಟ್ಟೆ ದುರಸ್ತಿಗಾಗಿ ಅಂದಾಜುಪಟ್ಟಿ ತಯಾರಿಸಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರವರಿಗೆ ಸಲ್ಲಿಸಿದ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)**

ಅ) ಈ ಮಾರುಕಟ್ಟೆ ಕಟ್ಟಡವನ್ನು 1985–86ರಲ್ಲಿ ನಿರ್ಮಿಸಲಾಗಿದೆ.

ಆ) NIE Expert Engineers ರವರು ಮಾರುಕಟ್ಟೆ ಕಟ್ಟಡವನ್ನು ಪರಿಶೀಲಿಸಿ ಕಟ್ಟಡದ ಸ್ಲಾಬ್ ಶಿಥಿಲಗೊಂಡಿದೆಯೆಂದು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರಿಗೆ ವರದಿಯನ್ನು ನೀಡಿದ್ದಾರೆ.

ಇ) ಪ್ರಸ್ತಾವನೆಯು ರೇಷ್ಮೆ ಜಂಟಿ ನಿರ್ದೇಶಕರು, ಮೈಸೂರು ಅವರಿಂದ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರಿಗೆ ಬಂದಿದ್ದು ಕಟ್ಟಡದ ಅವಶ್ಯಕತೆ ಮತ್ತು ವಂಟನೆಯ ಲಭ್ಯತೆ ಅನುಸಾರ ಪರಿಶೀಲಿಸಲಾಗುತ್ತಿದೆ.

**ಕಾಡಾನೆಗಳಿಂದ ಉಂಟಾಗುತ್ತಿರುವ ಬೆಳೆ, ಪ್ರಾಣ ಹಾನಿಯ ಬಗ್ಗೆ**

**739; ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)**

**ಅ)** ರಾಜ್ಯದಲ್ಲಿ ನಾನಾ ಭಾಗಗಳಲ್ಲಿ ಕಳೆದ 3 ವರ್ಷಗಳಿಂದ ಆನೆಗಳು ಕಾಡಿನಿಂದ ಹಳ್ಳಿ ಹಾಗೂ ಪಟ್ಟಣಗಳಿಗೆ ಬಂದು ಬೆಳೆಹಾನಿ, ಪ್ರಾಣಹಾನಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಆನೆದಾಳಿಯಿಂದ ಕಳೆದ 3 ವರ್ಷಗಳಿಂದ ಉಂಟಾಗಿರುವ ಬೆಳೆಹಾನಿಯ ಅಂದಾಜು ಮೊತ್ತವೆಷ್ಟು ಹಾಗೂ ಪ್ರಾಣಹಾನಿಗಳ ಸಂಖ್ಯೆ ಎಷ್ಟು;

ಇ) ಸದರಿ ಬೆಳೆ ನಷ್ಟಕ್ಕೆ ಸರ್ಕಾರ ನೀಡಿರುವ ಪರಿಹಾರದ ಮೊತ್ತವೆಷ್ಟು; ಪ್ರಾಣ ಹಾನಿಗೆ ತಲಾ ನೀಡಿರುವ ಪರಿಹಾರದ ಮೊತ್ತವೆಷ್ಟು;

**ಈ)** ಆನೆಗಳು ಹಳ್ಳಿ ಮತ್ತು ಪಟ್ಟಣಕ್ಕೆ ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿರಲು ಕಾರಣಗಳೇನು; ಆನೆಗಳು ನಾಡಿಗೆ ಬರುವಿಕೆ ಬಗ್ಗೆ ತಜ್ಞರ ಅಧ್ಯಯನ ಸಮಿತಿ ರಚಿಸಲಾಗಿದೆಯೇ; ಅಧ್ಯಯನ ಸಮಿತಿ ವರದಿಯ ಮುಖ್ಯಾಂಶಗಳೇನು;

ಉ) ಆನೆಗಳಿಂದ ಆಗುತ್ತಿರುವ ಬೆಳೆಹಾನಿ ಪ್ರಾಣಹಾನಿ ತಡೆಗಟ್ಟಲು ಯಾವ ಯೋಜನೆಗಳನ್ನು ರೂಪಿಸಲಾಗಿದೆ; ಆ ಯೋಜನೆಗಳ ರೂಪು ರೇಷೆಗಳೇನು?

**ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು)**

ಅ) ಹೌದು.

ಆ) ಆನೆ ದಾಳಿಯಿಂದ ಕಳೆದ 3 ವರ್ಷಗಳಿಂದ ಉಂಟಾಗಿರುವ ಬೆಳೆಹಾನಿ ಹಾಗೂ ಪ್ರಾಣಹಾನಿ ವಿವರ ಕೆಳಗಿನಂತಿದೆ:

| **ವರ್ಷ** | **ಬೆಳೆಹಾನಿ ಪ್ರಕರಣ ಸಂಖ್ಯೆ** | **ಅಂದಾಜು ಮೊತ್ತ** | **ಪ್ರಾಣ ಹಾನಿ ಪ್ರಕರಣಗಳ ಸಂಖ್ಯೆ** |
|---|---|---|---|
| 2009–10 | 14,275 | 3,11,35,702/– | 24 |
| 2010–11 | 29,871 | 7,53,35,512/– | 34 |
| 2011–12 | 11,132 | 3,26,90,161/– | 11 |

ಇ) ಬೆಳೆಹಾನಿ ನಷ್ಟಕ್ಕೆ ನೀಡಿರುವ ಪರಿಹಾರದ ವಿವರ:

| **ವರ್ಷ** | **ಪಾವತಿಸಿದ ಪರಿಹಾರ ರೂ. ಗಳಲ್ಲಿ** |
|---|---|
| 2009–10 | 3,11,35,702/– |
| 2010–11 | 7,53,35,512/– |
| 2011–12 | 3,26,90,161/– |

ಮಾನವ ಪ್ರಾಣ ಹಾನಿಗೆ ಆಯಾ ವರ್ಷದಲ್ಲಿ ಚಾಲ್ತಿಯಲ್ಲಿರುವ ಸರ್ಕಾರದ ಆದೇಶದನ್ವಯ ದಯಾತ್ಮಕ ಧನವನ್ನು ನೀಡಲಾಗುತ್ತಿದೆ.

2009–10ನೇ ಮತ್ತು 2010–11ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ ಅಪಜೀ 70 ಎಫ್‌ಡಬ್ಲ್ಯೂಎಲ್ 2009 ದಿನಾಂಕ: 10–08–2010 ರಂತೆ ಪ್ರತಿ ಪ್ರಾಣಹಾನಿ ಪ್ರಕರಣಗಳಿಗೆ ರೂ. 2.00

ಲಕ್ಷಗಳ ದಯಾತ್ಮಕ ಧನವನ್ನು ಪಾವತಿಸಲು ಆದೇಶಿಸಲಾಗಿರುತ್ತದೆ. ಈ ಅವಧಿಯಲ್ಲಿ ಸಂಭವಿಸಿದ ಪ್ರಾಣಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶದ ರೀತ್ಯ ರೂ. 2.00 ಲಕ್ಷಗಳ ದಯಾತ್ಮಕ ಧನವನ್ನು ಸಂಬಂಧಿಸಿದ ವಾರಸುದಾರರಿಗೆ ಪಾವತಿಸಿದೆ.

2011–12ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ ಅಪಜೀ 143 ಎಫ್‌ಡಬ್ಲ್ಯೂಎಲ್ 2010 ದಿನಾಂಕ: 30–04–2011 ರಲ್ಲಿ ಮಾನವ ಪ್ರಾಣ ಹಾನಿ ಪ್ರಕರಣಗಳಿಗೆ ದಯಾತ್ಮಕ ಧನವನ್ನು ರೂ. 2.00 ಲಕ್ಷ ದಿಂದ ರೂ. 3.50 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಅದರನ್ವಯ ಈ ಅವಧಿಯಲ್ಲಿ ಉಂಟಾದ ಪ್ರಾಣ ಹಾನಿ ಪ್ರಕರಣಗಳಿಗೆ ರೂ. 3.50 ಲಕ್ಷಗಳ ದಯಾತ್ಮಕ ಧನವನ್ನು ಸಂಬಂಧಿಸಿದ ವಾರಸುದಾರರಿಗೆ ಪಾವತಿಸಿದೆ.

ಮುಂದುವರೆದು, ಹಿಂದೆಂದೂ ನಡೆಯದಂತಹ ಕಾಡಾನೆ ದಾಳಿಯ ಪ್ರಕರಣವು ಮೈಸೂರು ನಗರದಲ್ಲಿ ದಿನಾಂಕ: 08–06–2011 ರಂದು ನಡೆದಿದ್ದು, ಇದರಿಂದ ಓರ್ವ ವ್ಯಕ್ತಿಯು ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ ರೂ. 5.00 ಲಕ್ಷಗಳ ದಯಾತ್ಮಕ ಧನವನ್ನು ಪಾವತಿಸಲು ಆದೇಶಿಸಿರುತ್ತಾರೆ. ಈ ಪ್ರಕರಣದನ್ವಯ ಸರ್ಕಾರಿ ಆದೇಶ ಸಂಖ್ಯೆ ಅಪಜೀ 143 ಎಫ್‌ಡಬ್ಲ್ಯೂಎಲ್ 2010 ದಿನಾಂಕ: 03–08–2011ರಲ್ಲಿ ದಿನಾಂಕ: 08–06–2011 ರಿಂದ ಅನ್ವಯಾಗುವಂತೆ ರೂ. 5.00 ಲಕ್ಷಗಳಿಗೆ ಪರಿಷ್ಕರಿಸಿ ಹೆಚ್ಚಿಸಿದ ಅನ್ವಯ ಪ್ರಸ್ತುತ ಮಾನವ ಪ್ರಾಣಹಾನಿ ಪ್ರಕರಣಗಳಿಗೆ ರೂ. 5.00 ಲಕ್ಷಗಳ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.

**ಈ)** ಕಾಡಾನೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಗುಂಪು ಗುಂಪಾಗಿ ಓಡಾಡುವುದು ಸಾಮಾನ್ಯವಾಗಿರುತ್ತದೆ. ಕೆಲವೊಂದು ಬಾರಿ ಕಾಡಾನೆಗಳು ಗುಂಪಿನಿಂದ ಬೇರ್ಪಟ್ಟು ಅರಣ್ಯದ ಅಂಚಿನಲ್ಲಿನ

ಗ್ರಾಮಗಳಿಗೆ ಬರುವುದುಂಟು. ಕಾಡಿನ ಅಂಚಿನ ಗ್ರಾಮಗಳಲ್ಲಿನ ಜನರು ಅರಣ್ಯದ ಅಂಚಿನ ಪ್ರದೇಶಗಳಲ್ಲಿನ ಕಳ್ಳಬಟ್ಟಿ ತಯಾರಿಸುವುದು, ದನ ಕರುಗಳನ್ನು ಕಾಡಿಗೆ ಮೇಯಲು ಬಿಡುವುದು ಹಾಗೂ ಉರುವಲುಗಾಗಿ ಜನರು ಕಾಡನ್ನು ಪ್ರವೇಶಿಸುವುದರಿಂದ ಕಾಡಾನೆಗಳ ಚಲನವಲನಕ್ಕೆ ಅಡಚಣೆ/ತೊಂದರೆಯಾಗುತ್ತಿರುವುದರಿಂದ ಕಾಡಾನೆ ದಾಳಿ ಉಂಟಾಗುತ್ತದೆ. ಅಲ್ಲದೆ, ಅರಣ್ಯದ ಅಂಚಿನಲ್ಲಿ ಬೆಳೆದ ಬತ್ತ, ಕಬ್ಬು, ಬಾಳೆ ಬೆಳೆಗಳಿಗೆ ಆಕರ್ಷಿತಗೊಂಡು ಕಾಡಾನೆಗಳು ದಾಳಿಯಿಡುತ್ತಿವೆ. ಕಾಡಾನೆ ದಾಳಿಗೆ ಕಾಡಿನ ಅಂಚಿನಲ್ಲಿ ಬೆಳೆದ ಬೆಳೆಗಳು ಕಾರಣವಾಗಿದೆ.

ರಾಜ್ಯದ ಆನೇಕಲ್, ಕನಕಪುರ, ರಾಮನಗರ ಮಂಡ್ಯ, ಮೈಸೂರು ಆಲೂರು, ಸಕಲೇಶಪುರ, ಹಾಸನ, ಮಡಿಕೇರಿ ಅರಣ್ಯ ಪ್ರದೇಶಗಳು ಆನೆ ಮೊಗಸಾಲೆ (Elephant Corridor) ಪ್ರದೇಶವಾಗಿದ್ದು, ಕಾಡಾನೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡುತ್ತಿರುತ್ತವೆ. ಈ ಪ್ರದೇಶಗಳ ಗ್ರಾಮಗಳು ಮತ್ತು ಪಟ್ಟಣಗಳ ಅಂಚಿನಲ್ಲಿ ಕಾಡಾನೆಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇದೀಗ ಕೇಂದ್ರ ಸರ್ಕಾರವು ಎಲ್ಲಾ 25 ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲು ದಿನಾಂಕ: 11/11/2011 ರಂದು ಕೆಲವು ನಿಬಂಧನೆಗಳೊಂದಿಗೆ ಅನುಮತಿ ನೀಡಿರುತ್ತದೆ. ಈ ಕ್ರಮಕ್ಕೆ ರಾಜ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ: 14029/2008ಕ್ಕೆ ಸಂಬಂಧಿಸಿದಂತೆ ದಿನಾಂಕ: 17/11/2011ರಲ್ಲಿ ಸದರಿ ಆನೆಗಳನ್ನು ಸ್ಥಳಾಂತರಿಸುವ ಮುನ್ನ ತಜ್ಞರು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಅಭಿಪ್ರಾಯ ಪಡೆದ ನಂತರ ಸ್ಥಳಾಂತರಿಸಲು ನಿರ್ದೇಶನ ನೀಡಿರುತ್ತದೆ. ಹಾಗೆಯೇ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಇದನ್ನು ಗಂಭೀರವಾಗಿ ಪರಿಗಣಿಸಲು ಹಾಗೂ ಆಫ್ರಿಕಾ ಮತ್ತು ಏಷ್ಯ ಖಂಡಗಳ ನುರಿತ ತಜ್ಞರನ್ನು ಒಳಗೊಂಡ ತಂಡದೊಂದಿಗೆ ವಿಮರ್ಶಿಸಿದ ನಂತರವೇ ಸ್ಥಳಾಂತರಿಸಲು ನಿರ್ದೇಶನ ನೀಡಿರುತ್ತದೆ. ಅದರಂತೆ ಇನ್ಸ್‌ಪೆಕ್ಟರ್

ಜನರಲ್ ಆಫ್ ಫಾರೆಸ್ಟ್ ಹಾಗೂ ನಿರ್ದೇಶಕರು (ಆನೆಯೋಜನೆ), ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ ಇವರನ್ನು ಮುಂದಿನ ಸೂಕ್ತ ಕ್ರಮ ಜರುಗಿಸಲು ಕೋರಲಾಗಿರುತ್ತದೆ.

ಕೇಂದ್ರ ಸರ್ಕಾರವು ಪ್ರಸ್ತಾಪಿಸಿರುವಂತೆ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ: 24–01–2012ರಂದು ಮಾನವ–ಆನೆ ಸಂಘರ್ಷವನ್ನು ತಡೆಗಟ್ಟಲು ನುರಿತ ತಜ್ಞರನ್ನೊಳಗೊಂಡ ಕಾರ್ಯಪಡೆಯನ್ನು ರಚಿಸಿ ದಿನಾಂಕ: 15–04–2012 ರೊಳಗೆ ವರದಿ ಸಲ್ಲಿಸಲು ತಿಳಿಸಿ ತೀರ್ಪು ನೀಡಿರುತ್ತದೆ. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ) ಕಾಡು ಪ್ರಾಣಿಗಳು ಹಾಗೂ ಕಾಡಾನೆಗಳು ಗ್ರಾಮಗಳಿಗೆ, ನಗರಗಳಿಗೆ ಬರುತ್ತಿರುವುದನ್ನು ತಡೆಗಟ್ಟಲು ಪ್ರಸ್ತುತ ಚಾಲ್ತಿಯಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಲಭ್ಯವಿರುವ ಅನುದಾನದಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಕಾಡಾನೆಗಳು ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ದಾಳಿ ಮಾಡುವುದನ್ನು ತಡೆಗಟ್ಟುವ ಸಲುವಾಗಿ ಅರಣ್ಯದ ಅಂಚಿನ ಸೂಕ್ಷ್ಮ ಪ್ರದೇಶಗಳಲ್ಲಿ ಸೋಲಾರ್ ತಂತಿ ಬೇಲಿ ನಿರ್ಮಿಸಲಾಗಿ ಇವುಗಳನ್ನು ನಿರ್ವಹಿಸಲಾಗುತ್ತಿದೆ.

2. ಕಾಡು ಪ್ರಾಣಿಗಳು ಹಾಗೂ ಕಾಡಾನೆಗಳು ಪದೇ ಪದೇ ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಪುನಃ ಕಾಡಿಗೆ ಓಡಿಸುವ ಸಲುವಾಗಿ ಕಾಡಾನೆ ತಡೆ ಕ್ಯಾಂಪುಗಳನ್ನು (Anti Depredation Camp) ಸ್ಥಾಪಿಸಿ, ಪ್ರತಿಯೊಂದು ಕ್ಯಾಂಪಿನಲ್ಲೂ ಸ್ಥಳೀಯರ ಜೊತೆಗೆ ನಾಲ್ಕು ಮಂದಿ ನುರಿತ ಅರಣ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಕ್ರಮಕೈಗೊಳ್ಳಲಾಗಿದೆ.

3. ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ನಿಯೋಜಿತ ಸಿಬ್ಬಂದಿಗಳಿಗೆ ವಾಕೀ–ಟಾಕೀ, ಗನ್ ಹಾಗೂ ವಾಹನಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.

4. ಸಿಬ್ಬಂದಿಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ಒದಗಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

5. ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಂಡ ಕಾಡಾನೆಗಳನ್ನು ಗುರುತಿಸಿ ಅವುಗಳನ್ನು ಹಿಡಿದು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು.

6. ಕಾಡಾನೆಗಳು ರೈತರ ಬೆಳೆಗಳಿಗೆ ಹಾನಿ ಮಾಡಿದಾಗ ರೈತರಿಗೆ ಪರಿಹಾರವನ್ನು ಪಾವತಿಸಲಾಗುವುದು.

**ಸಿಂಗಟಾಲೂರು ಏತ ನೀರಾವರಿ ಯೋಜನೆ ಕುರಿತು**

**705; ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಸಿಂಗಟಾಲೂರು ಏತ ನೀರಾವರಿ ಯೋಜನೆಯು ಯಾವ ಹಂತದಲ್ಲಿದೆ?

**ಆ)** ಸರ್ಕಾರ ಈ ಯೋಜನೆಗೆ ಈವರೆಗೆ ಬಿಡುಗಡೆ ಮಾಡಿದ ಮೊತ್ತ ಎಷ್ಟು?

**ಇ)** ಈ ಯೋಜನೆಯ ಪ್ರಾರಂಭದಲ್ಲಿದ್ದ ಅಂದಾಜು ಮೊತ್ತ ಎಷ್ಟು? ಹಾಗೂ ಈಗ ಈ ಯೋಜನೆ ಸಂಪೂರ್ಣಗೊಳಿಸಲು ಬೇಕಾಗುವ ಮೊತ್ತ ಎಷ್ಟು?

**ಈ)** ಈ ಯೋಜನೆ ಯಾವಾಗ ಸಂಪೂರ್ಣಗೊಳ್ಳುತ್ತದೆ ಇದಕ್ಕೆ ಸರ್ಕಾರ ಕಾಲಮಿತಿ ನಿಗದಿಪಡಿಸಿದೆಯೇ?

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)**

ಅ) ಸಿಂಗಟಾಲೂರು ಏತ ನೀರಾವರಿ ಯೋಜನೆಯ ಕಾಮಗಾರಿಗಳ ಪ್ರಸ್ತುತ ಹಂತದ ವಿವರ ಈ ಕೆಳಗೆ ನೀಡಿದೆ:

ಬ್ಯಾರೇಜ್ ಕಾಮಗಾರಿ – ಪೂರ್ಣಗೊಂಡಿರುತ್ತದೆ.

ಬಲಭಾಗದ ಕಾಮಗಾರಿಗಳು – ಮೊದಲನೆ ಹಂತದ ಲಿಫ್ಟ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಚಾಲನೆ ಮಾಡಲಾಗಿದೆ. ಇದರಡಿಯಲ್ಲಿ ಬರುವ ಮಾಗಳ, ಅಯ್ಯನಹಳ್ಳಿ, ರಾಜವಾಳ ಬ್ರಾಂಚ್ ಕಾಲುವೆಗಳು ಹಾಗೂ ವಿತರಣಾ ಕಾಲುವೆಗಳು ಪೂರ್ಣಗೊಂಡಿದ್ದು, 9,000 ಎಕರೆ ನೀರಾವರಿ ಸಾಮರ್ಥ್ಯ ಸೃಜಿಸಲಾಗಿದೆ.

ಎರಡನೇ ಹಂತದ ಲಿಫ್ಟ್ ಕಾಮಗಾರಿ ಇನ್‌ಟೇಕ್ ಕೆನಲ್, ಸೈಫನ್, ರೈಸಿಂಗ್ ಮೇನ್ ಕಾಮಗಾರಿಗಳು ಮತ್ತು ಇದರಡಿಯಲ್ಲಿ ಬರುವ ಹಡಗಲಿ ಶಾಖಾ ಕಾಲುವೆ 25.5 ಕಿಮೀ. ಪ್ರಗತಿಯಲ್ಲಿದ್ದು ಪೂರ್ಣಗೊಳ್ಳುವ ಹಂತದಲ್ಲಿದೆ ಹಾಗೂ ಇದರಡಿಯ ವಿತರಣಾ ಕಾಲುವೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.

ಎಡಭಾಗದ ಕಾಮಗಾರಿಗಳು: ಇನ್‌ಟೇಕ್ ಕೆನಲ್ 6.71 ಕಿಮೀ. ಪೂರ್ಣಗೊಳ್ಳುವ ಹಂತದಲ್ಲಿದೆ. ಹಮ್ಮಿಗಿ ಮುಂಡವಾಡ ನೀರೆತ್ತುವ ಘಟಕ 6ನೇ ಲಿಫ್ಟ್‌ವರೆಗೆ ಪೂರ್ಣಗೊಂಡಿದ್ದು, ಪ್ರಗತಿಯಲ್ಲಿದೆ ಹಾಗೂ ರೈಸಿಂಗ್ ಮೇನ್ ಅಳವಡಿಸಲಾಗುತ್ತಿದೆ. ಇದರಡಿಯ ಹಮ್ಮಿಗೆ ಬ್ರಾಂಚ್ ಕೆನಲ್ ಪ್ರಗತಿಯಲ್ಲಿದ್ದು, ಮುಂಡವಾಡ ಕಾಲುವೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಮೊದಲನೇ ಲಿಫ್ಟ್‌ನ ಕಾಮಗಾರಿ: ಜಾಕ್ ವೆಲ್ ಕಾಮಗಾರಿಯು ಮೋಟಾರ್ ಫ್ಲೋರ್ ಮಟ್ಟದವರೆಗೆ ಹಾಗೂ ಕಂಟ್ರೋಲ್ ರೂಂ ರೂಫ್ ಲೆವೆಲ್‌ವರೆಗೆ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೇನ್ ಅಳವಡಿಸುವ ಕಾರ್ಯ ಹಾಗೂ ಡೆಲಿವರಿ ಛೇಂಬರ್ ಕಾಮಗಾರಿ

ಪ್ರಗತಿಯಲ್ಲಿದೆ. ಇದರಡಿಯ ಮೊದಲನೇ ರೀಚ್ ಮುಖ್ಯ ಕಾಲುವೆ 0 ರಿಂದ 14 ಕಿಮೀ. ವರೆಗಿನ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಎರಡನೇ ಲಿಫ್ಟ್‌ನ ಕಾಮಗಾರಿ: ಜಾಕ್‌ವೆಲ್ ಎಂಟನೇ ಲಿಫ್ಟ್‌ವರೆಗೆ ಪೂರ್ಣಗೊಂಡಿದ್ದು, ಗದಗ್ ಬ್ರಾಂಚ್ ರೈಸಿಂಗ್ ಮೇನ್ 6.3 ಕಿಮೀ. (2 ರೋಗಳು) ಅಳವಡಿಸುವ ಕಾರ್ಯ ಪೂರ್ಣಗೊಂಡಿದೆ. ಮುಂಡರಗಿ ಶಾಖಾ ಕಾಲುವೆಗೆ ಸಂಪರ್ಕಿಸುವ ರೈಸಿಂಗ್ ಮೇನ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಪಂಪಿಂಗ್ ಮೆಷಿನರೀಸ್ ಮತ್ತು ಮೋಟಾರ್ಸ್ ಸ್ವೀಕೃತಗೊಂಡಿವೆ. ಇದರಡಿಯ ಗದಗ್ ಬ್ರಾಂಚ್ ಕಾಲುವೆ 29.5 ಕಿಮೀ. ಒಟ್ಟು 4 ಪ್ಯಾಕೇಜ್‌ಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ. ಮುಂಡರಗಿ ಬ್ರಾಂಚ್ ಕಾಲುವೆ ಒಟ್ಟು 73 ಕಿಮೀ.ಗಳಲ್ಲಿ 27 ಕಿಮೀ. ಕಾಲುವೆಗೆ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಅನುಮೋದನೆಯನ್ನು ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಮೂರನೇ ಲಿಫ್ಟ್ ಕಾಮಗಾರಿಗಳು: ಜಾಕ್‌ವೆಲ್ ಕಾಮಗಾರಿ 11ನೇ ಲಿಫ್ಟ್ ವರೆಗೆ ಪೂರ್ಣಗೊಂಡಿದ್ದು, ಪ್ರಗತಿಯಲ್ಲಿರುತ್ತದೆ. ರೈಸಿಂಗ್ ಮೇನ್ ಒಟ್ಟು 5.8 ಕಿ.ಮೀ. ನಲ್ಲಿ 3 ಕಿಮೀ. ಅಳವಡಿಸುವ ಕಾರ್ಯ ಪೂರ್ಣಗೊಂಡಿರುತ್ತದೆ. ಗದಗ್ ಬ್ರಾಂಚ್ ಒಟ್ಟು 36 ಕಿಮೀ. ಉದ್ದವಿದ್ದು, 0 ಯಿಂದ 10.00 ಕಿಮೀ. ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಮುಂದಿನ 11 ರಿಂದ 36 ಕಿಮೀ. ವರೆಗಿನ ಕಾಲುವೆಯ ಪಥವನ್ನು ನಿರ್ಧರಿಸಲಾಗುತ್ತಿದೆ.

**ಆ)** ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಪ್ರಾರಂಭದಿಂದ ಡಿಸೆಂಬರ್ 2011ರವರೆಗೆ ರೂ.544.39 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಇ) ಸಿಂಗಟಾಲೂರು ಏತ ನೀರಾವರಿ ಯೋಜನೆಯನ್ನು 1997–98 ರಲ್ಲಿ 40,000 ಎಕರೆ ಪ್ರದೇಶಕ್ಕೆ ನೀರು ಒದಗಿಸಲು ಯೋಜಿಸಿ ರೂ. 123.00 ಕೋಟಿಗೆ ಅಂದಾಜಿಸಲಾಗಿದ್ದು, ಮುಂದೆ ಮಾರ್ಪಾಡಿಸಿ 2000 ರಲ್ಲಿ 1,18,000.00 ಎಕರೆ ಪ್ರದೇಶಕ್ಕೆ ರೂ. 595.00 ಕೋಟಿಗಳಿಗೆ ಅಂದಾಜು ಪಟ್ಟಿಗೆ ಸರ್ಕಾರದಿಂದ ಆಡಳಿತಾತ್ಮಕ ನೀಡಲಾಗಿದ್ದು, ಪ್ರಸ್ತುತ ಪರಿಷ್ಕರಿಸಿ 1,67,000.00 ಎಕರೆ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಯೋಜಿಸಿ 2010–11ನೇ ಸಾಲಿನ ದರಗಳನ್ವಯ ರೂ. 1894.5 ಕೋಟಿಗಳಿಗೆ ಯೋಜನಾ ವರದಿ ಸಿದ್ದಪಡಿಸಿದೆ. ಯೋಜನೆ ಪೂರ್ಣಗೊಳಿಸಲು ರೂ. 1350.11 ಕೋಟಿಗಳ ಮೊತ್ತ ಬೇಕಾಗುತ್ತದೆ.

ಈ) ಸಿಂಗಟಾಲೂರು ಏತ ನೀರಾವರಿ ಯೋಜನೆಯ ಎಲ್ಲಾ ಕಾಮಗಾರಿಗಳನ್ನು 2013ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

**ಗೋದಾವರಿ ನದಿ ಕಣಿವೆ ನೀರಿನ ಕುರಿತು**

**713; ಶ್ರೀ ಖಾಜಿ ಅರಶದ ಅಲಿ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಗೋದಾವರಿ ನದಿ ಕಣಿವೆ ಟ್ರಿಬುನಲ್ ವತಿಯಿಂದ ಕರ್ನಾಟಕಕ್ಕೆ ಸಿಕ್ಕಿರುವ ನೀರಿನ ಪಾಲು ಎಷ್ಟು;

ಆ) ಗೋದಾವರಿ ನದಿ ಕಣಿವೆಯ ನೀರನ್ನು ಇಲ್ಲಿಯವರೆಗೆ ಎಷ್ಟು ಪ್ರಮಾಣದಲ್ಲಿ ಬಳಸಲಾಗಿದೆ ಮತ್ತು ಇನ್ನು ಎಷ್ಟು ಪ್ರಮಾಣದ ಟಿ.ಎಂ.ಸಿ. ನೀರು ಬಳಸಬಹುದಾಗಿದೆ;

ಇ) ಗೋದಾವರಿ ನದಿ ಕಣಿವೆಯ ಬಳಸದೇ ಇರುವ ನೀರಿನ ಉಪಯೋಗಕ್ಕಾಗಿ ರಾಜ್ಯ ಸರ್ಕಾರದ ವತಿಯಿಂದ ಯಾವುದಾದರು ಯೋಜನೆ ರೂಪಿಸಲಾಗಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು?

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)**

**ಅ)** ಗೋದಾವರಿ ಜಲ ವಿವಾದ ನ್ಯಾಯಾಧೀಕರಣದ (ಬಚಾವತ್ ನ್ಯಾಯಾಧೀಕರಣ) ತೀರ್ಪಿನಿಂದ ಗೋದಾವರಿ ಕಣಿವೆಯಲ್ಲಿ ಕರ್ನಾಟಕಕ್ಕೆ 22.37 ಟಿಎಂಸಿ ಪರಿಮಾಣದ ನೀರು ಲಭಿಸಿದೆ.

**ಆ)** ಗೋದಾವರಿ ನದಿ ಕಣಿವೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಯಡಿ ಕಾರಂಜಾ ಯೋಜನೆ, ಚುಳಕಿನಾಲಾ ಯೋಜನೆ ಹಾಗೂ ಮಾಂಜ್ರಾ ನದಿಗೆ ಅಡ್ಡಲಾಗಿ ನಾಲ್ಕು ಸೇತುವೆ ಸಹಿತ ಬ್ಯಾರೇಜುಗಳು ಇವುಗಳಡಿ 15.24 ಟಿಎಂಸಿ ಉಪಯೋಗಿಸಬಹುದಾಗಿದೆ.

ಈಗ ಕಾರಂಜಾ ಯೋಜನೆಗೆ 9.27 ಟಿ.ಎಂ.ಸಿ. ಪರಿಮಾಣದಷ್ಟು ಹಂಚಿಕೆಯಾಗಿದ್ದು, ಕಾರಂಜಾ ಜಲಾಶಯದ ಗರಿಷ್ಠ ಸಂಗ್ರಹಣಾ ಸಾಮರ್ಥ್ಯ 7.69 ಟಿಎಂಸಿ ಆಗಿದ್ದು ಜಲಾಶಯದ ಹಿನ್ನೀರಿನಲ್ಲಿ ಹೆಚ್ಚುವರಿ 973 ಎಕರೆ ಭೂಸ್ವಾಧೀನ ಪ್ರಕ್ರಿಯೆ ಈಗ ಪ್ರಗತಿಯಲ್ಲಿದೆ. ತದನಂತರ ಪೂರ್ಣ ಪ್ರಮಾಣದ 7.69 ಟಿಎಂಸಿ ಸಂಗ್ರಹಿಸಲಾಗುವುದು. ಈಗ ಲಭ್ಯವಾಗುತ್ತಿರುವ ಒಳಹರಿವಿನ ಅನುಗುಣವಾಗಿ ಇಲ್ಲಿಯವರೆಗೆ 6.00 ಟಿಎಂಸಿ ನೀರನ್ನು ಸಂಗ್ರಹಿಸಲಾಗಿದೆ. ಅದರಲ್ಲಿ 0.375 ಟಿಎಂಸಿ ಡೆಡ್ ಸ್ಟೋರೇಜ್ ಆಗಿದ್ದು, 4.825 ಟಿಎಂಸಿ ನೀರಾವರಿಗಾಗಿ ಹಾಗೂ 0.80 ಟಿಎಂಸಿ ನೀರನ್ನು ಕುಡಿಯುವ ನೀರಿಗಾಗಿ ಬೀದರ್, ಹುಮನಾಬಾದ್, ಬಾಲ್ಕಿ ಹಾಗೂ ಚಿಟುಗುಪ್ಪ ಪಟ್ಟಣಗಳಲ್ಲಿ ಬಳಸಿಕೊಳ್ಳಲಾಗಿದೆ.

ಚುಳುಕಿನಾಲಾ ಯೋಜನೆಯಡಿ 1.17 ಟಿ.ಎಂ.ಸಿ ಪರಿಮಾಣದ ನೀರನ್ನು ಬಳಸಬಹುದಾಗಿದೆ. 2010ರಲ್ಲಿ ಜಲಾಶಯವು ಪ್ರಥಮ ಬಾರಿಗೆ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿರುತ್ತದೆ. ಕಾಲುವೆ ಜಾಲದ ಪುನಶ್ಚೇತನ ಕಾರ್ಯವನ್ನು ಆದ್ಯತೆಯ ಮೇಲೆ ಕೈಗೊಳ್ಳಲಾಗುತ್ತಿದ್ದು ನೀರಾವರಿಗೆ ನೀರನ್ನು ಒದಗಿಸಲಾಗುವುದು.

ಮಾಂಜ್ರಾ ನದಿಗೆ ಅಡ್ಡಲಾಗಿ ಕೃಷ್ಣಾ ಭಾಗ್ಯ ಜಲ ನಿಗಮದ ಅಡಿಯಲ್ಲಿ ಜೀರಗಿಹಾಳ್ ಮಾಣಿಕೇಶ್ವರ, ಹಾಲಹಳ್ಳಿ ಮತ್ತು ಚಂದಾಪುರ ಬ್ಯಾರೇಜುಗಳಿಗೆ ಒಟ್ಟು 4.80 ಟಿ.ಎಂ.ಸಿ. ನೀರನ್ನು ಉಪಯೋಗಿಸಲು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಬ್ಯಾರೇಜುಗಳಲ್ಲಿ ಶೇಖರಣೆ ಆಗುವ ನೀರನ್ನು ರೈತರು ಎತ್ತಿ ಬಳಸಿಕೊಳ್ಳಬೇಕಾಗಿದೆ. ಚಂದಾಪುರ ಬ್ಯಾರೇಜನ್ನು ಪೂರ್ಣಗೊಳಿಸಲಾಗಿದ್ದು, ಉಳಿದ ಮೂರು ಬ್ಯಾರೇಜುಗಳನ್ನು ಜೂನ್ 2012 ರಲ್ಲಿ ಪೂರ್ಣಗೊಳಿಸಲಾಗುವುದು.

ಸಣ್ಣ ನೀರಾವರಿಗೆ 7.13 ಟಿ.ಎಂ.ಸಿ. ನೀರಿನ ಹಂಚಿಕೆಯಾಗಿದೆ.

ಇ) ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಡಿ ಯೋಜನೆಗಳಿಗೆ ಹಂಚಿಕೆ ಮಾಡಲಾಗಿರುವ ನೀರನ್ನು ಬಳಸಬಹುದಾಗಿದ್ದು, ಹೊಸ ಯೋಜನೆಗಳನ್ನು ರೂಪಿಸುವುದು ಉದ್ಭವಿಸುವುದಿಲ್ಲ.

**ಗುಲ್ಬರ್ಗಾ ಜಿಲ್ಲೆಯಲ್ಲಿ ಕೈಗೊಂಡಿರುವ ನೀರಾವರಿ ಯೋಜನೆ ಬಗ್ಗೆ**

**743; ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕಲಬುರ್ಗಿ ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ನೀರಾವರಿ ಯೋಜನೆಗಳೆಷ್ಟು? ಅವುಗಳ ಬಗ್ಗೆ ವಿವರ ನೀಡುವುದು)

**ಆ)** ಈ ಯೋಜನೆಗಳಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಕರ್ಯ ದೊರೆಯಲಿದೆ.

**ಇ)** ಇದುವರೆಗೆ ಈ ಯೋಜನೆಗಳಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ.

**ಈ)** ಪೂರ್ಣಗೊಳ್ಳಲು ಇನ್ನು ಎಷ್ಟು ಹಣದ ಅಗತ್ಯವಿದೆ.

**ಉ)** ಬೆಣ್ಣೆತೋರಾ ಹಾಗೂ ಗಂಡೋರಿನಾಲಾ ಯೋಜನೆಗಳು ಉದ್ಘಾಟನೆಗೊಂಡರೂ ಅವುಗಳಿಂದ ನಿಗದಿತ ಪ್ರಮಾಣದಲ್ಲಿ ರೈತರ ಹೊಲಗಳಿಗೆ ನೀರು ಹರಿಸಲಾಗಿದೆಯೇ? ಇಲ್ಲದೇ ಇದ್ದಲ್ಲಿ ಕಾರಣಗಳನ್ನು ತಿಳಿಸುವುದು.

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

**ಅ)** ಕಲಬುರ್ಗಿ ಜಿಲ್ಲೆಯಲ್ಲಿ 6 ನೀರಾವರಿ ಯೋಜನೆಗಳು ಬರುತ್ತವೆ. ಅವುಗಳೆಂದರೆ, (1) ಭೀಮಾ ಏತ (2) ಬೆಣ್ಣೆತೋರಾ (3) ಅಮರ್ಜಾ, (4) ಗಂಡೋರಿನಾಲಾ, (5) ಮುಲ್ಲಾ–ಮಾರಿ ಕೆಳದಂಡೆ, ಹಾಗೂ (6) ಚಂದ್ರಂಪಳ್ಳಿ ನೀರಾವರಿ ಯೋಜನೆಗಳು. ಇವುಗಳಲ್ಲದೇ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಜೇವರ್ಗಿ ಶಾಖಾ ಕಾಲುವೆ ಇರುತ್ತದೆ. ಮುದಬಾಳ ಶಾಖಾ ಕಾಲುವೆ, ಮುಲ್ಲಾಬಾದ್ ಏತ ನೀರಾವರಿ ಕೈಗೆತ್ತಿಕೊಳ್ಳಲಾಗಿದೆ.

**ಆ)** ಈ ಯೋಜನೆಗಳಿಂದ ಕಲ್ಪಿಸಲಾಗುವ ನೀರಾವರಿ ಕ್ಷೇತ್ರದ ವಿವರ ಈ ಕೆಳಕಂಡಂತಿವೆ.

| | | |
|---|---|---|
| (1) ಭೀಮಾ ಏತ | – | 60,001 ಎಕರೆ |
| (2) ಬೆಣ್ಣೆತೋರಾ | – | 49,978 ಎಕರೆ |
| (3) ಅಮರ್ಜಾ | – | 21,990 ಎಕರೆ |
| (4) ಗಂಡೋರಿನಾಲಾ | – | 19,912 ಎಕರೆ |
| (5) ಮುಲ್ಲಾಮಾರಿ ಕೆಳದಂಡೆ | – | 23,991 ಎಕರೆ |
| (6) ಚಂದ್ರಂಪಳ್ಳಿ | – | 12,901 ಎಕರೆ |

(7) ಕೃಷ್ಣಾ ಮೇಲ್ದಂಡೆ ಯೋಜನೆ:

ಜೇವರ್ಗಿ ಶಾಖಾ ಕಾಲುವೆ – 1,41,037 ಎಕರೆ

ಮುದಬಾಳ ಶಾಖಾ ಕಾಲುವೆ – 1,11,000 ಎಕರೆ

ಮುಲ್ಲಾಬಾದ್ ಏತ ನೀರಾವರಿ – 26,000 ಎಕರೆ

(ಮೊದಲನೇ ಲಿಫ್ಟ್‌ರಡಿ)

ಇ) ಈ ಯೋಜನೆಗಳಿಂದ ಇದುವರೆಗೆ ಮಾಡಿದ ಖರ್ಚು ಈ ರೀತಿ ಇದೆ:

**ರೂ. ಕೋಟಿಗಳಲ್ಲಿ**

| | | |
|---|---|---|
| (1) ಭೀಮಾ ಏತ | – | 265.41 |
| (2) ಬೆಣ್ಣೆತೋರಾ | – | 376.23 |
| (3) ಅಮರ್ಜಾ | – | 213.63 |
| (4) ಗಂಡೋರಿನಾಲಾ | – | 261.55 |
| (5) ಮುಲ್ಲಾಮಾರಿ ಕೆಳದಂಡೆ | – | 200.45 |
| (6) ಚಂದ್ರಂಪಳ್ಳಿ | – | 2.01 |

(7) ಕೃಷ್ಣಾ ಮೇಲ್ದಂಡೆ ಯೋಜನೆ:

ಜೇವರ್ಗಿ ಶಾಖಾ ಕಾಲುವೆ – 548.00 (ಯೋಜನೆ ಮುಗಿದಿದೆ)

ಮುದಬಾಳ ಶಾಖಾ ಕಾಲುವೆ –295.00 (ಯೋಜನೆ ಮುಗಿದಿದೆ)

ಮುಲ್ಲಾಬಾದ್ ಏತ ನೀರಾವರಿ – 11.80

(ಮೊದಲನೇ ಲಿಫ್ಟ್‌ರಡಿ)

**ಈ)** ಈ ಯೋಜನೆ ಪೂರ್ಣಗೊಳಿಸಲು ಬೇಕಾಗುವ ಅಂದಾಜಿಸಿದ ಮೊತ್ತ (ರೂ. ಕೋಟಿಗಳಲ್ಲಿ) ಈ ಕೆಳಕಂಡಂತಿವೆ.

**ರೂ. ಕೋಟಿಗಳಲ್ಲಿ**

| | | |
|---|---|---|
| (1) ಭೀಮಾ ಏತ | – | 322.96 |
| (2) ಬೆಣ್ಣೆತೋರಾ | – | 40.00 |
| (3) ಅಮರ್ಜಾ | – | 64.37 |
| (4) ಗಂಡೋರಿನಾಲಾ | – | 14.70 |
| (5) ಮುಲ್ಲಾಮಾರಿ ಕೆಳದಂಡೆ | – | 20.00 |
| (6) ಚಂದ್ರಂಪಳ್ಳಿ | – | 15.058 (ನವೀಕರಣಕ್ಕಾಗಿ) |

ಮೇಲ್ಕಂಡ ಯೋಜನೆಗಳಲ್ಲಿ ಭೀಮಾ ಏತ ನೀರಾವರಿ ಯೋಜನೆಗಳನ್ನು ಹೊರತುಪಡಿಸಿ, ಉಳಿದ ಯೋಜನೆಗಳ ಪುನಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

(7) ಕೃಷ್ಣಾ ಮೇಲ್ದಂಡೆ ಯೋಜನೆ:

ಜೇವರ್ಗಿ ಶಾಖಾ ಕಾಲುವೆ - ಪೂರ್ಣಗೊಂಡಿದೆ

ಮುದಬಾಳ ಶಾಖಾ ಕಾಲುವೆ – ಪೂರ್ಣಗೊಂಡಿದೆ

ಮುಲ್ಲಾಬಾದ್ ಏತ ನೀರಾವರಿ – 29.00 ಕೋಟಿ (ಮೊದಲನೇ ಲಿಫ್ಟ್‌ರಡಿ)

ಉ) ಬೆಣ್ಣೆತೋರಾ ಯೋಜನೆಯನ್ನು ದಿನಾಂಕ:16–07–2006 ರಂದು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ. ಈ ಯೋಜನೆಯಡಿ 20,234 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

ಈ ಯೋಜನೆಯಡಿಯಲ್ಲಿ ಬಲದಂಡೆ ಹಾಗೂ ಎಡದಂಡೆಯ ಮುಖ್ಯ ಕಾಲುವೆಗಳು ಸುಮಾರು 15 ವರ್ಷಗಳ ಹಿಂದೆ ಶಹಾಬಾದ್ ಕಲ್ಲುಚಪ್ಪಡಿಯ ಲೈನಿಂಗ್ ಒಳಗೊಂಡಂತೆ ನಿರ್ಮಾಣವಾಗಿದ್ದು, ಕಾಲುವೆಯು ಶಿಥಿಲಗೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ಸದರಿ ಕಾಲುವೆಯನ್ನು ಆರ್.ಸಿ.ಸಿ. ಲೈನಿಂಗ್ ಸಮೇತ ಪುನಶ್ಚೇತನಗೊಳಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, 2012–2013ರ ಅಂತ್ಯದೊಳಗೆ ಯೋಜನೆಯನ್ನು ಪೂರ್ಣಗೊಳಿಸಿ ನೀರನ್ನು ಒದಗಿಸಲಾಗುವುದು.

| | | | ಒಟ್ಟು | 15 |
| XIII | ಶಿವಮೊಗ್ಗ | ಶಿವಮೊಗ್ಗ | ಚಂದನ ಅರಣ್ಯ ವಿಶ್ರಾಂತಿ ಗೃಹ, ಆಲ್ಕೊಳ | 1 |
| | | | ಅರಣ್ಯ ವಿಶ್ರಾಂತಿ ಗೃಹ, ಬೆನವಳ್ಳಿ ರಿಪ್ಪನ್‌ಪೇಟೆ | 1 |
| | | | ಅರಣ್ಯ ವಿಶ್ರಾಂತಿ ಗೃಹ, ಮಂಡಗದ್ದೆ | 1 |
| | | ಸಾಗರ | ಕಪ್ಪಗಡ್ಡೆ ಅರಣ್ಯ ವಿಶ್ರಾಂತ್ರಿ ಗೃಹ, ಆನವಟ್ಟಿ | 1 |
| | | | ಕಣಗದ್ದೆ ಅರಣ್ಯ ವಿಶ್ರಾಂತ್ರಿ ಗೃಹ, ಆನವಟ್ಟಿ | 1 |
| | | | ಮರಸೆ ಅರಣ್ಯ ವಿಶ್ರಾಂತ್ರಿ ಗೃಹ, ಸಾಗರ ವಲಯ | 1 |
| | | | ಕುಮ್ಮೂರು ಅರಣ್ಯ ವಿಶ್ರಾಂತ್ರಿ ಗೃಹ, ಆನಂದಪುರಂ | 1 |
| | | | ಹುಲಿಕಲ್ ಅರಣ್ಯ ವಿಶ್ರಾಂತ್ರಿ ಗೃಹ, ನಗರ ವಲಯ | 1 |
| | | | ಜೋಗ್‌ಫಾಲ್ಸ್ ಅರಣ್ಯ ವಿಶ್ರಾಂತ್ರಿ ಗೃಹ, ಕಾರ್ಗಲ್ ವಲಯ | 1 |
| | | | ಅಂಬ್ಲಿಗೋಳ್ ಅರಣ್ಯ ವಿಶ್ರಾಂತ್ರಿ ಗೃಹ, ಅಂಬ್ಲಿಗೋಳ ವಲಯ | 1 |
| | | ಭದ್ರಾವತಿ | ಬುಳ್ಳಾಪುರ | 1 |
| | | | ಗಂಗೂರು | 1 |
| | | | ಉಂಬ್ಳೆಬೈಲು | 1 |
| | | | ಡೋಣದಾಳ್ | 1 |
| | | | ಉದ್ಬಾಣೆ | 1 |
| | | | ಕೆಮ್ಮಣ್ಣುಗುಂಡಿ | 1 |
| | | ಶಿವಮೊಗ್ಗ ವನ್ಯಜೀವಿ ವಿಭಾಗ | ಹಣಗೆರೆ ಅರಣ್ಯ ವಿಶ್ರಾಂತ್ರಿ ಗೃಹ | 1 |
| | | | ಸಿರಿಗೆರೆ ಅರಣ್ಯ ವಿಶ್ರಾಂತ್ರಿ ಗೃಹ | 1 |
| | | | ಚಕ್ಕೂರು ಅರಣ್ಯ ವಿಶ್ರಾಂತ್ರಿ ಗೃಹ | 1 |
| | | | ಶೆಟ್ಟಿಹಳ್ಳಿ ಅರಣ್ಯ ವಿಶ್ರಾಂತ್ರಿ ಗೃಹ | 1 |
| | | | ಮುಪ್ಪಾನೆ ಅರಣ್ಯ ವಿಶ್ರಾಂತ್ರಿ ಗೃಹ | 1 |
| | | | ಒಟ್ಟು | 21 |

166

## ರಾಜ್ಯದಲ್ಲಿರುವ ಅರಣ್ಯ ಪ್ರದೇಶ ಕುರಿತು

## 409; ಶ್ರೀ ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ)

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ಪ್ರಮಾಣ ಮತ್ತು ಪರಿಮಾಣ ಎಷ್ಟು

ಆ) ಇದರಲ್ಲಿ ಅರಣ್ಯ ಇರುವ ಪ್ರಮಾಣ ಮತ್ತು ಪರಿಮಾಣ ಎಷ್ಟು;

ಇ) ರಾಜ್ಯದಲ್ಲಿ ಕಳೆದ 10 ವರ್ಷಗಳಲ್ಲಿ ಹೆಚ್ಚಾದ ಕಾಡಿನ ಪ್ರಮಾಣ ಎಷ್ಟು;

ಈ) ರಾಜ್ಯದಲ್ಲಿ ಕಳೆದ 10 ವರ್ಷಗಳಲ್ಲಿ ಕಾಡಿನ ಅಭಿವೃದ್ಧಿಗೆ (ವಿವಿಧ ಯೋಜನೆಗಳಲ್ಲಿ) ವೆಚ್ಚ ಮಾಡಿರುವ ಹಣವೇನು?

## ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು)

ಅ) ಕರ್ನಾಟಕ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣವು 1,91,79,100 ಹೆಕ್ಟೇರ್‌ಗಳಾಗಿರುತ್ತದೆ. ಅದರಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣವು ಇಲಾಖೆಯ ದಾಖಲಾತಿಗಳ ಪ್ರಕಾರ 43,35,645 ಹೆಕ್ಟೇರ್‌ಗಳಷ್ಟು ಆಗಿರುತ್ತದೆ. ಹಾಗಾಗಿ ಕರ್ನಾಟಕ ರಾಜ್ಯದಲ್ಲಿ ಶೇಕಡ 22.61 ರಷ್ಟು ಭೂಭಾಗ ಅರಣ್ಯ ಪ್ರದೇಶವಾಗಿರುತ್ತದೆ.

ಆ) ಭಾರತ ಸರ್ಕಾರದ ಅರಣ್ಯ ಮೋಜಣಿ ಸಂಸ್ಥೆ (ಸರ್ವೆ ಆಫ್ ಇಂಡಿಯಾ) ಡೆಹರಡೂನ್‌ರವರ 2009ನೇ ಸಾಲಿನ ವರದಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 36,19,000 ಹೆಕ್ಟೇರ್ ಪ್ರದೇಶ ಮರಗಳಿಂದ ಕೂಡಿದ ಅರಣ್ಯ ಪ್ರದೇಶವಾಗಿರುತ್ತದೆ. ಈಗಾಗಿ ರಾಜ್ಯದಲ್ಲಿ ಒಟ್ಟು ಅರಣ್ಯ ಪ್ರದೇಶದ ಶೇಕಡ 83,47 ರಷ್ಟು ಅರಣ್ಯ ಪ್ರದೇಶವು ಮರಗಳಿಂದ ಕೂಡಿರುತ್ತದೆ.

ಇ) ಭಾರತ ಸರ್ಕಾರದ ಅರಣ್ಯ ಮೋಜಣಿ ಸಂಸ್ಥೆ (ಸರ್ವೆ ಆಫ್ ಇಂಡಿಯಾ) ಡೆಹರಡೂನ್‌ರವರ 1999ನೇ ಸಾಲಿನ ವರದಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 32,46,700 ಹೆಕ್ಟೇರ್ ಪ್ರದೇಶ ಮರಗಳಿಂದ ಕೂಡಿದ ಅರಣ್ಯ ಪ್ರದೇಶ ಆಗಿರುತ್ತದೆ. ಸದರಿ ಸಂಸ್ಥೆ 2009ನೇ ಸಾಲಿನ

ವರದಿ ಪ್ರಕಾರ 36,19,000 ಹೆಕ್ಟೇರ್ ಪ್ರದೇಶ ಮರಗಳಿಂದ ಕೂಡಿದ ಅರಣ್ಯ ಪ್ರದೇಶ ಆಗಿರುತ್ತದೆ. ಇದರಿಂದಾಗಿ ತಿಳಿಯುವುದೇನೆಂದರೆ ಕರ್ನಾಟಕ ರಾಜ್ಯದಲ್ಲಿ ಕಳೆದ 10 ವರ್ಷಗಳಲ್ಲಿ 3,72,300 ಹೆಕ್ಟೇರ್ (9,20,000 ಎಕರೆ) ವಿಸ್ತೀರ್ಣದಲ್ಲಿ ಮರಗಳಿಂದ ಕೂಡಿದ ಅರಣ್ಯ ಪ್ರದೇಶವು ಜಾಸ್ತಿಯಾಗಿರುತ್ತದೆ.

**ಈ)** ರಾಜ್ಯದಲ್ಲಿ ಕಳೆದ 10 ವರ್ಷಗಳಿಂದ ಜಿಲ್ಲಾ ವಲಯ, ರಾಜ್ಯವಲಯ ಮತ್ತು ಕೇಂದ್ರ ಪುರಸ್ಕೃತ ವಲಯಗಳ ಯೋಜನೆಗಳಲ್ಲಿ ಲಭ್ಯವಿರುವ ಅನುದಾನದಿಂದ ನೆಡುತೋಪು ಬೆಳೆಸಲು ವೆಚ್ಚವಾದ ವಿವರಗಳು ಈ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ವರ್ಷ | ಜಿಲ್ಲಾವಲಯ | ರಾಜ್ಯವಲಯ | ಬಾಹ್ಯ ನೆರವಿನ ಯೋಜನೆ | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ವಲಯ | ಒಟ್ಟು |
|---|---|---|---|---|---|---|
| 1 | 2001–02 | 606.485 | 1034.050 | 9772.422 | 960.552 | 12,373.51 |
| 2 | 2002–03 | 591.220 | 584.320 | 6910.224 | 760.350 | 8846.114 |
| 3 | 2003–04 | 438.930 | 951.370 | 5133.290 | 2641.010 | 9,164.60 |
| 4 | 2004–05 | 686.890 | 1011.790 | 3721.240 | 2185.010 | 7,604.93 |
| 5 | 2005–06 | 138.040 | 1805.865 | 4917.940 | 2213.654 | 9,075.50 |
| 6 | 2006–07 | 129.800 | 3287.100 | 8286.010 | 2919.098 | 14,622.01 |
| 7 | 2007–08 | 168.770 | 2384.213 | 11525.317 | 2128.828 | 16,207.13 |
| 8 | 2008–09 | 2101.960 | 2566.200 | 13468.140 | 2650.010 | 20,786.31 |
| 9 | 2009–10 | 2375.110 | 3451.900 | 15311.340 | 2106.166 | 23,244.52 |
| 10 | 2010–11 | 1989.131 | 7646.750 | 7983.110 | 2243.670 | 19,862.66 |
| 11 | 2011–12 (ಡಿಸೆಂಬರ್ ಮಾಹೆಯ ಅಂತ್ಯಕ್ಕೆ) | 956.413 | 6469.370 | 3014.380 | 825.560 | 11,040.723 |
| | **ಒಟ್ಟು** | **10,182.75** | **31,192.93** | **90043.414** | **21,633.91** | **153052.994** |

**ಕೃಷ್ಣ ಕೊಳ್ಳದ ಯೋಜನೆ ಕುರಿತು**

**410; ಶ್ರೀ ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ)**

ಅ) ಕೃಷ್ಣಾ ಕೊಳ್ಳದ ಮುಂದಿನ ಯೋಜನೆಗಳಲ್ಲಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಯಾವ ಯೋಜನೆಗಳು ಸೇರಿವೆ.

ಆ) ಈ ಯೋಜನೆಗಳ ಸರ್ವೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಅಂದಾಜು ವೆಚ್ಚ ಎಷ್ಟು;

ಇ) ಯಾವ ಕಾಲ ಮಿತಿಯಲ್ಲಿ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುತ್ತದೆ?

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)**

ಅ) ಕೃಷ್ಣಾ ಕೊಳ್ಳದಡಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ಕ್ಕೆ ದಿನಾಂಕ:24/01/2012 ರಂದು ತಾತ್ವಿಕ ಅನುಮೋದನೆ ನೀಡಲಾಗಿದ್ದು, ಹಂತ–3 ರಡಿ ಬರುವ 9 ಉಪ ಯೋಜನೆಗಳಲ್ಲಿ ಈ ಕೆಳಕಂಡ ಉಪ ಯೋಜನೆಗಳು ಸೇರಿರುತ್ತವೆ.

ರಾಯಚೂರು ಜಿಲ್ಲೆಯಲ್ಲಿ ರಾಂಪೂರ ಏತ ನೀರಾವರಿ ಯೋಜನೆಯ ಪೂರ್ವ ಶಾಖಾ ಕಾಲುವೆಯ ಕಿ.ಮೀ. 20.00 ರಿಂದ 62.00 ರವರೆಗೆ ವಿಸ್ತರಣೆ ಮತ್ತು ನಾರಾಯಣಪೂರ ಬಲದಂಡೆ ಕಾಲುವೆ ಕಿ.ಮೀ. 95.00 ರಿಂದ 178.00 ರವರೆಗಿನ ಯೋಜನೆಗಳು ಸೇರಿವೆ.

ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ ಏತ ನೀರಾವರಿ ಯೋಜನೆ.

ಆ) ರಾಂಪೂರ ಏತ ನೀರಾವರಿ ಯೋಜನೆ ಕಿ.ಮೀ. 20.00 ರಿಂದ 62.00 ರವರೆಗೆ ವಿಸ್ತರಣೆ ಕಾಮಗಾರಿಯ ಸರ್ವೆ ಕಾಮಗಾರಿ ಪೂರ್ಣಗೊಂಡಿದ್ದು, ಕಾಮಗಾರಿಯ ಅಂದಾಜು ಮೊತ್ತ ರೂ.168.00 ಕೋಟಿಗಳಾಗಿರುತ್ತದೆ.

ನಾರಾಯಣಪುರ ಬಲದಂಡೆ ಕಾಲುವೆ ಕಿಮೀ. 95.00 ರಿಂದ 178.00 ವರೆಗಿನ ಟೋಪೋಗ್ರಾಫಿಕಲ್ ಸರ್ವೆ ಮುಗಿದಿದ್ದು, ಅಂದಾಜು ಪತ್ರಿಕೆಗಳ ತಯಾರಿಕೆಗಾಗಿ ವಿವರವಾದ ಸರ್ವೆ ಮತ್ತು ತನಿಖಾ ಕಾರ್ಯಕ್ಕಾಗಿ ಟೆಂಡರನ್ನು ಆಹ್ವಾನಿಸಿದೆ.

ಕೊಪ್ಪಳ ಏತ ನೀರಾವರಿಯ ಟೋಪೋಗ್ರಾಫಿಕಲ್ ಸರ್ವೆ ಕಾರ್ಯ ಪ್ರಗತಿಯಲ್ಲಿದೆ.

ಇ) ನಾರಾಯಣಪುರ ಬಲದಂಡೆ ಕಾಲುವೆ ಕಿಮೀ. 95.00 ರಿಂದ 178.00 ವರೆಗೆ ಅಂದಾಜನ್ನು ತಯಾರಿಸಿಕೊಂಡು ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.

ಕೊಪ್ಪಳ ಏತ ನೀರಾವರಿ ಯೋಜನೆ ಮತ್ತು ರಾಂಪೂರ ಏತ ನೀರಾವರಿ ಯೋಜನೆಗಳ ಅಂದಾಜಿಗೆ ಅನುಮೋದನೆ ನೀಡಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.

**ತುಂಗಭದ್ರಾ ಕಾಡಾಕ್ಕೆ ನೀಡಿರುವ ಅನುದಾನ ಕುರಿತು**

**430; ಶ್ರೀ ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ)**

**ಅ)** ತುಂಗಭದ್ರ ಕಾಡಾಕ್ಕೆ ಕಳೆದ 2 ವರ್ಷಗಳಲ್ಲಿ ಎಷ್ಟು ಅನುದಾನ ನೀಡಲಾಗಿದೆ; ಯಾವ ಉದ್ದೇಶಗಳಿಗೆ ನೀಡಲಾಗಿದೆ;

**ಆ)** ಈ ಕಾಡಾ ವ್ಯಾಪ್ತಿಯಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳಿರುವುದೆಷ್ಟು; ಅದರಲ್ಲಿ ಎಷ್ಟು ನಿಷ್ಕ್ರೀಯ ಸಹಕಾರ ಸಂಘಗಳಿವೆ;

**ಇ)** ಕಾಡಾ ಅನುದಾನವನ್ನು ನಿಷ್ಕ್ರೀಯ ಸಹಕಾರಿ ಸಂಘಗಳಿಗೆ ನೀಡಲಾಗಿದೆಯೇ; ಹಾಗಿದ್ದರೆ, ಏಕೆ ನೀಡಲಾಗಿದೆ;

**ಈ)** ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕ ಮಾಡಿರುವ ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ; ಯಾವ ಏಜೆನ್ಸಿ ಈ ಪರಿಶೀಲನೆ ನಡೆಸಿದೆ? (ವಿವರ ನೀಡುವುದು)

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ) ತುಂಗಭದ್ರಾ ಕಾಡಾಗೆ 2009–10ನೇ ಸಾಲಿನಲ್ಲಿ ರೂ.1378.50 ಲಕ್ಷ ಹಾಗೂ 2010–11 ನೇ ಸಾಲಿನಲ್ಲಿ ರೂ.1878.51 ಲಕ್ಷಗಳ ಅನುದಾನವನ್ನು ನೀಡಲಾಗಿದೆ. ಈ ಅನುದಾನವನ್ನು ಕಾಡಾ ಕಾರ್ಯಕ್ರಮಗಳಾದ ಹೊಲಗಾಲುವೆ ನಿರ್ಮಾಣ, ಬಸಿಗಾಲುವೆ ನಿರ್ಮಾಣ, ಜೌಗು, ಸವಳು ಮತ್ತು ಜವಳು ಭೂಮಿ ಸುಧಾರಣೆ, ಅಳವಡಿಕೆ ಪ್ರಯೋಗ (Adoptive Trails) ಮತ್ತು ಬೆಳೆಗಳ ಪ್ರಾತ್ಯಕ್ಷತೆ, ತರಬೇತಿ, ನೀರು ನಿರ್ವಹಣೆಯಲ್ಲಿ ರೈತರ ಪಾಲ್ಗೊಳ್ಳುವಿಕೆ (PIM), ಆಯಕಟ್ಟು ರಸ್ತೆ ನಿರ್ಮಾಣ, ಗೋದಾಮು ನಿರ್ಮಾಣ, ವಸತಿ, ಪಿಕ್‌ಅಕ್ ನಿರ್ಮಾಣ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಚಟುವಟಿಕೆಗಳ ಅನುಷ್ಠಾನಕ್ಕಾಗಿ ನೀಡಲಾಗಿದೆ.

ಆ) ಈ ಕಾಡಾ ವ್ಯಾಪ್ತಿಯಲ್ಲಿ ಒಟ್ಟು 507 ನೀರು ಬಳಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದ್ದು, ಈ ಪೈಕಿ 142 ಸಂಘಗಳು ನಿಷ್ಕ್ರಿಯವಾಗಿದೆ.

ಇ) ನಿಷ್ಕ್ರಿಯ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಅನುದಾನ ಮಂಜೂರು ಮಾಡಿರುವುದಿಲ್ಲ.

ಈ) ಅನುಷ್ಠಾನಗೊಳಿಸುತ್ತಿರುವ ಸಂಬಂಧಪಟ್ಟ ಇಲಾಖೆಯ ಕೃಷಿ ತಾಂತ್ರಿಕ ಮತ್ತು ಸಹಕಾರ ಶಾಖೆಯ ಅಧಿಕಾರಿಗಳು ನೀತಿ ಸಂಹಿತೆಯಲ್ಲಿ ಗೊತ್ತುಪಡಿಸಿರುವ ಮಾನದಂಡವನ್ನು ಅನುಸರಿಸಿ ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕ ಮಾಡಿರುವ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸುತ್ತಿದ್ದಾರೆ.

## ಬನ್ನಹಳ್ಳಿ ಏತ ನೀರಾವರಿ ಬಗ್ಗೆ

## 428; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಮದ್ದೂರು ಮತ್ತು ಬನ್ನಹಳ್ಳಿ ಏತ ನೀರಾವರಿ 'ಎ' ಬಿಂದುಗಳ ರೈಸಿಂಗ್ ಮೈನ್ ಪೈಪ್ ಮತ್ತು ಮೋಟಾರ್ ಪ್ಯಾನಲ್ ಬೋರ್ಡ್‌ಗಳು ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅವುಗಳನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಕೂಳಗೆರೆ 'ಬಿ' ಬಿಂದು ಮೋಟಾರ್ ಸುಟ್ಟು ಹೋಗಿದ್ದು, ಹೊಸದಾಗಿ ಅಳವಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ, ಅಳವಡಿಸಲಾಗುವುದು?

## ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ) ಮದ್ದೂರು ತಾಲ್ಲೂಕಿನ ಬನಹಳ್ಳಿ ಗ್ರಾಮದ ಬಳಿ ಇರುವ ಇಗ್ಗಲೂರು ಬ್ಯಾರೆಜ್ ಯೋಜನೆಯ 'ಎ' ಬಿಂದು ಏತ ನೀರಾವರಿ ಯೋಜನೆಯ ರೈಸಿಂಗ್ ಮೈನ್ ಪೈಪ್ ಮತ್ತು ಮೋಟಾರ್ ಪ್ಯಾನಲ್ ಬೋರ್ಡ್‌ಗಳು ಶಿಥಿಲವಾಗಿರುವುದು ನಿಗಮದ ಗಮನಕ್ಜೆ ಬಂದಿರುತ್ತದೆ. ಶಿಥಿಲಗೊಂಡಿರುವ ರೈಸಿಂಗ್ ಮೈನ್ ಪೈಪ್ ಅನ್ನು ದುರಸ್ತಿಗೊಳಿಸುವ ಕಾಮಗಾರಿಯ ರೂ.2.00 ಲಕ್ಷ ಅಂದಾಜಿಗೆ ಮಂಜೂರಾತಿ ಆಗಿದ್ದು, ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದೆ.

ಅಲ್ಲದೆ, ಈ ಏತ ನೀರಾವರಿ ಯೋಜನೆಗೆ ಅಳವಡಿಸಿರುವ 100 ಹೆಚ್.ಪಿ ಸಾಮರ್ಥ್ಯದ 3 ಮೋಟಾರ್‌ಗಳ ಪೈಕಿ, ಎರಡು ಮೋಟಾರ್‌ಗಳು ಚಾಲನೆಯಲ್ಲಿದ್ದು, ಉಳಿದ ಒಂದು (Standby) ಮೋಟಾರ್‌ನ ಸ್ಟಾರ್ಟರ್ ದುರಸ್ತಿಗಾಗಿ ರೂ. 4.00 ಲಕ್ಷ ಅಂದಾಜಿಗೆ ಮಂಜೂರಾತಿ ಆಗಿದ್ದು, ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದೆ.

ಈ ಏತ ನೀರಾವರಿ ಯೋಜನೆಯಲ್ಲಿರುವ ಒಂದು ಪ್ಯಾನಲ್ ಬೋರ್ಡ್ ಸುಸ್ಥಿತಿಯಲ್ಲಿದ್ದು, ಉಳಿದ 2 ಪ್ಯಾನೆಲ್ ಬೋರ್ಡ್ ದುರಸ್ತಿಯನ್ನು 2011–12ನೇ ಸಾಲಿನ ವಾರ್ಷಿಕ ಕಾರ್ಯಕ್ರಮದ ನಿರ್ವಹಣಾ ಶೀರ್ಷಿಕೆ ಅಡಿಯಲ್ಲಿ ಅನುವು ಮಾಡಲಾಗಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕೂಳಗೆರೆ ಗ್ರಾಮದ ಬಳಿ ಇರುವ ಇಗ್ಗಲೂರು ಬ್ಯಾರೇಜ್ ಯೋಜನೆಯ 'ಬಿ' ಬಿಂದು ಏತ ನೀರಾವರಿ ಯೋಜನೆಗೆ ಅಳವಡಿಸಿರುವ 150 ಹೆಚ್.ಪಿ ಸಾಮರ್ಥ್ಯದ 2+1 ಮೋಟಾರ್‌ಗಳ ಪೈಕಿ, ಎರಡು ಮೋಟಾರ್‌ಗಳು ಸುಸ್ಥಿತಿಯಲ್ಲಿದ್ದು ಉಳಿದ ಒಂದು ಮೋಟಾರ್ ದುರಸ್ತಿಯನ್ನು 2011–12ನೇ ಸಾಲಿನ ವಾರ್ಷಿಕ ಕಾರ್ಯಕ್ರಮದ ನಿರ್ವಹಣಾ ಶೀರ್ಷಿಕೆ ಅಡಿಯಲ್ಲಿ ಅನುವು ಮಾಡಲಾಗಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಗ್ಗಲೂರು ಬ್ಯಾರೇಜ್ ಯೋಜನೆಯ 'ಎ' ಬಿಂದು ಮತ್ತು 'ಬಿ' ಬಿಂದು ಏತ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಿದ್ದು, ಮಾರ್ಚ್–2012 ರೊಳಗೆ ಪೂರ್ಣಗೊಳಿಸಲಾಗುವುದು.

**ಗರಕಹಳ್ಳಿ ಏತ ನೀರಾವರಿ ಯೋಜನೆ ಬಗ್ಗೆ**

**429; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಚನ್ನಪಟ್ಟಣ ತಾಲ್ಲೂಕು, ಗರಕಹಳ್ಳಿ ಏತ ನೀರಾವರಿ ಯೋಜನೆಗೆ ಅಳವಡಿಸಿರುವ ರೈಸಿಂಗ್ ಮೈನ್ ಪೈಪಿನಿಂದ ಹೆಚ್ಚುವರಿ 700 ಅಥವಾ 800 ಪೈಪ್‌ಲೈನ್ ಅಳವಡಿಸಿ ಮದ್ದೂರು ತಾಲ್ಲೂಕು ಅಂಕೇಗೌಡನದೊಡ್ಡಿ ಕೆರೆಗೆ ನೀರು ತುಂಬಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಈ ಭಾಗದ ಗ್ರಾಮಗಳಾದ ಅಂಕೇಗೌಡನದೊಡ್ಡಿ, ಮೇಲದಾಸನದೊಡ್ಡಿ,

ಹರಿವಿನಹಳ್ಳಿ, ಕೆಂಪೇಗೌಡನ ದೊಡ್ಡಿ ಮತ್ತು ಅರೆಕಲ್ಲು ದೊಡ್ಡಿ ಗ್ರಾಮಗಳಿಗೆ ಅಂತರ್ಜಲ ಪುನಶ್ಚೇತನಗೊಂಡು ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯಲು ನೀರಿಗೆ ಅನುಕೂಲವಾಗುವುದಿಲ್ಲವೇ?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

**ಅ)** ಚನ್ನಪಟ್ಟಣ ತಾಲ್ಲೂಕಿನ ಗರಕಹಳ್ಳಿ ಏತ ನೀರಾವರಿ ಯೋಜನೆಯಿಂದ ಈ ತಾಲ್ಲೂಕಿನ 11 ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸಲು ಉದ್ದೇಶಿಸಿದ್ದು ಈ ಯೋಜನೆಯಿಂದ ಮದ್ದೂರು ತಾಲ್ಲೂಕು ಅಂಕೇಗೌಡನದೊಡ್ಡಿ ಕೆರೆಗೆ ನೀರು ತುಂಬಿಸುವ ಪ್ರಸ್ತಾವನೆ ಇರುವುದಿಲ್ಲ.

**ಆ)** ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಮಂಡ್ಯ ಜಿಲ್ಲೆಯಲ್ಲಿ ಮತ್ತು ಮಂಡ್ಯ ಜಿಲ್ಲೆ ಕೃಷ್ಣರಾಜ ಪೇಟೆ ತಾಲ್ಲೂಕು ಸಂತೇಬಾಚ ಹಳ್ಳಿಯಲ್ಲಿ ಕೈಗಾರಿಕಾ ತರಬೇತಿ ಕೇಂದ್ರ (ಐ.ಟಿ.ಐ) ಸ್ಥಾಪನೆ ಬಗ್ಗೆ**

**557; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು (ಐ.ಟಿ.ಐ) ಸ್ಥಾಪಿಸಲು ಉದ್ದೇಶಿಸಲಾಗಿದೆ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು); ಈ ಐ.ಟಿ.ಐಗಳ ಪ್ರಾರಂಭಕ್ಕೆ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಲಾಗಿದೆಯೇ;

**ಆ)** ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆಯೇ; (ವಿವರಗಳನ್ನು ಒದಗಿಸುವುದು)

**ಇ)** ಕೃಷ್ಣರಾಜ ಪೇಟೆ ತಾಲ್ಲೂಕು ಸಂತೆಬಾಚಹಳ್ಳಿಯು, ಹೋಬಳಿ ಕೇಂದ್ರವಾಗಿದ್ದು ಸುಮಾರು 8–10 ಸಾವಿರ ಜನಸಂಖ್ಯೆಯಿಂದ ಕೂಡಿದ್ದು ಸುತ್ತಮುತ್ತಲ 15–20 ಹಳ್ಳಿಗಳಿಗೆ ಕೇಂದ್ರ ಸ್ಥಳದಲ್ಲಿರುವುದರಿಂದ ಈ ಊರಿನಲ್ಲಿ ಪ್ರಸಕ್ತ ವರ್ಷದಿಂದಲೇ ಸರ್ಕಾರಿ ಐ.ಟಿ.ಐ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು)**

ಅ) ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಯಾವುದೇ ನೂತನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವ ಪ್ರಸ್ತಾಪವಿರುವುದಿಲ್ಲ. ಅಲ್ಲದೇ, ಈ ಉದ್ದೇಶಕ್ಕಾಗಿ ಪ್ರಾರಂಭಿಸಲು ಪ್ರಸಕ್ತ ಸಾಲಿನಲ್ಲಿ ಆಯವ್ಯಯವನ್ನು ಒದಗಿಸಲಾಗಿರುವುದಿಲ್ಲ.

ಆ) ಮಂಡ್ಯ ಜಿಲ್ಲೆಯಲ್ಲಿ ಈಗಾಗಲೇ 10 ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸಧ್ಯದಲ್ಲಿ ನೂತನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವ ಪ್ರಸ್ತಾಪವಿರುವುದಿಲ್ಲ.

ಇ) ಪ್ರಸ್ತುತ ಕೃಷ್ಣರಾಜ ಪೇಟೆ ತಾಲ್ಲೂಕಿನಲ್ಲಿ ಒಂದು ಸರ್ಕಾರಿ ಮತ್ತು 8 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಕೃಷ್ಣರಾಜ ಪೇಟೆ ತಾಲ್ಲೂಕು ಸಂತೆಬಾಚಹಳ್ಳಿಯ ಹೋಬಳಿಯಲ್ಲಿ ನೂತನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಉದ್ದೇಶವಿರುವುದಿಲ್ಲ.

**ರಾಜ್ಯದಲ್ಲಿರುವ ಐ.ಟಿ.ಐ. ಕಾಲೇಜುಗಳ ಅನುದಾನ ಕುರಿತು**

**511; ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)**

ಅ) ರಾಜ್ಯದಲ್ಲಿರುವ ಐ.ಟಿ.ಐ ಕಾಲೇಜುಗಳಿಗೆ ಅನುದಾನ ನೀಡುವ ಪ್ರಶ್ನೆ ಸರ್ಕಾರದ ಮುಂದಿದೆಯೇ;

ಆ) ಕಳೆದ 02 ವರ್ಷದಲ್ಲಿ ಎಷ್ಟು ಕಾಲೇಜುಗಳಲ್ಲಿ ಯಾವ ಯಾವ ವಿಭಾಗಳಿಗೆ ಅನುದಾನ ನೀಡಲಾಗಿದೆ; (ವಿವರ ನೀಡುವುದು)

ಇ) ಅನುದಾನ ನೀಡಲು ಯಾವ ಮಾನದಂಡವನ್ನು ಅಳವಡಿಸಿಕೊಳ್ಳಲಾಗಿದೆ;

ಈ) ಇನ್ನು ಮುಂದೆ ನೀಡುವ ಕಾಲೇಜುಗಳಿಗೆ ಯಾವ ಮಾನದಂಡದೊಂದಿಗೆ ಅನುದಾನ ನೀಡಲಾಗುವುದು? (ವಿವರ ನೀಡುವುದು)

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು)**

**ಅ)** 1997ರ ಅನುದಾನ ಸಂಹಿತೆಯ ಅಡಿಯಲ್ಲಿ ಅನುದಾನ ನೀಡುವ ಪ್ರಸ್ತಾವನೆ ಇರುವುದಿಲ್ಲ. ಆದರೆ, **ವಿದ್ಯಾರ್ಥಿ ಕೇಂದ್ರೀಕೃತ ಅನುದಾನ"** ಯೋಜನೆಯನ್ನು ದಿನಾಂಕ: 30/08/2010 ರಿಂದ ಜಾರಿಗೆ ತರಲಾಗಿದೆ.

**ಆ)** 108 ಸಂಸ್ಥೆಗಳಿಗೆ ವೇತನ ಅನುದಾನ ನೀಡಲಾಗಿದೆ.

(ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.)

**ಇ)** ಕಳೆದ ಎರಡು ವರ್ಷಗಳಲ್ಲಿ 1997 ರ ಅನುದಾನ ಸಂಹಿತೆಯನ್ವಯ ಎನ್.ಸಿ.ವಿ.ಟಿ. ಯಿಂದ ಸಂಯೋಜನೆ ಹೊಂದಿ 7 ವರ್ಷ ಪೂರೈಸಿ ಅರ್ಜಿ ಸಲ್ಲಿಸಿದ ಸಂಸ್ಥೆಗಳ ಅರ್ಹ ಸಿಬ್ಬಂದಿಗಳಿಗೆ ಅನುದಾನ ಒದಗಿಸಲಾಗಿದೆ.

**ಈ)** ಸರ್ಕಾರದ ಆದೇಶ ಸಂ. ಕಾಇ 118 ಇಟಿಐ 2010 ದಿ:30-08-2010 ರಂತೆ ಸಂಯೋಜನೆ ಹೊಂದಿ 5 ವರ್ಷ ಪೂರೈಸಿರುವ ಸಂಸ್ಥೆಗಳಿಗೆ ವಿದ್ಯಾರ್ಥಿ ಕೇಂದ್ರೀಕೃತ ಅನುದಾನವನ್ನು ನೀಡಲಾಗುವುದು.

## ಕರ್ನಾಟಕ ಸರ್ಕಾರದ ನಡವಳಿಗಳು.

ಷಯ: ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಅರ್ಹ ವೃತ್ತಿ/ಘಟಕಗಳ ಸಿಬ್ಬಂದಿ ವರ್ಗದವರಿಗೆ ವೇತನ ಸಹಾಯಾನುದಾನ ಮಂಜೂರು ಮಾಡುವ ಬಗ್ಗೆ.

ಲಾಗಿದೆ: ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆರವರ ಪತ್ರ ಸಂ. ಉತಇ/ತ/ಸಂ-1/ವಿವ-09/01-02 ದಿನಾಂಕ: 05/08/2010 ಕ್ಕೆ ಅಂತ್ಯಗೊಂಡ ಪತ್ರ ವ್ಯವಹಾರ

ಾವನೆ:

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಡಿ.ಜಿ.ಇ.ಟಿ. ನವದೆಹಲಿ ವರು ನೀಡಿರುವ ಸಂಯೋಜನೆಯನ್ವಯ 108 ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ವೇತನ ಸಹಾಯಾನುದಾನ ನೀಡುವ ಗ್ಗೆ ವಿವರಗಳನ್ನು ಸಲ್ಲಿಸಿರುತ್ತಾರೆ. ಅಲ್ಲದೆ ಈ 108 ಸಂಸ್ಥೆಗಳಲ್ಲಿ 53 ಸಂಸ್ಥೆಗಳ ಕೆಲವು ವೃತ್ತಿ/ಘಟಕಗಳು ಈಗಾಗಲೇ ನುದಾನ ಪಡೆಯುತ್ತಿದ್ದು, ಉಳಿದ ಅರ್ಹತೆ ಹೊಂದಿರುವ ವೃತ್ತಿ/ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಗೂ 55 ಸಂಸ್ಥೆಗಳನ್ನು ಹೊಸದಾಗಿ ಅನುದಾನಕ್ಕೊಳಪಡಿಸಬಹುದಾಗಿದ್ದು, 108 ಸಂಸ್ಥೆಗಳ 329 ಘಟಕಗಳ 670 ಬ್ಬಂದಿಗಳಿಗೆ ವೇತನ ಸಹಾಯಾನುದಾನ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ ಕಾಇ 284 ಇಟಿಐ 2005 ಬೆಂಗಳೂರು, ದಿನಾಂಕ 21/08/2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ ವೇತನಾನುದಾನಕ್ಕೆ ಅರ್ಹತೆ ಹೊಂದಿರುವ ಅನುಬಂಧ-1 ರಲ್ಲಿ ತ್ತಿಸಿರುವ ಪಟ್ಟಿಯಲ್ಲಿನ 108 ಕೈಗಾರಿಕಾ ತರಬೇತಿ ಕೇಂದ್ರಗಳ 329 ಘಟಕಗಳ 670 ಸಿಬ್ಬಂದಿಗಳಿಗೆ 2010-11 ನೇ ಗೆ ದಿನಾಂಕ 01/06/2010 ರಿಂದ ಜಾರಿಗೆ ಬರುವಂತೆ, 1997 ರಲ್ಲಿ ಜಾರಿಗೆ ತಂದಿರುವ ವೇತನಾನುದಾನ ಂತೆಯಲ್ಲಿನ ಷರತ್ತುಗಳಿಗನುಸಾರ ವೇತನಾನುದಾನಕ್ಕೆ ಒಳಪಡಿಸಲು ಮಂಜೂರಾತಿ ನೀಡಲಾಗಿದೆ.

ಇನ್ನು ಮುಂದೆ ಯಾವುದೇ ಕೈಗಾರಿಕಾ ತರಬೇತಿ ಕೇಂದ್ರವನ್ನು 1997 ರ ಅನುದಾನ ಸಂಹಿತೆಗೆ ಒಳಪಡಿಸತಕ್ಕದ್ದಲ್ಲವೆಂದು ತ್ತ ವಿಧಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 292 ವೆಚ್ಚ-9/2010 ಆರ್.ಎಫ್. 42443 ದಿನಾಂಕ: 6/2010 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 284 ಇಟಿಐ 2005, ದಿನಾಂಕ 21/08/2010 ರ ಅನುಬಂಧ-1

| Sl. No. | Name & Adress of the ITI | Units | PPL | TO | JTO | OS | FDA | SDA | WA | Gr-D | TOTAL |
|---|---|---|---|---|---|---|---|---|---|---|---|
| 1 | Madwacharya ITC Bagalkote | 3 | | | 3 | | | | | | 3 |
| 2 | Dr.B,R.Ambedkar ITC Kamalapura Gulbarga Dist | 3 | | | 3 | | | | 1 | | 4 |
| 3 | Channabasaveshwara ITC Malagatti. | 4 | 1 | | 5 | | 1 | | 1 | 1 | 9 |
| 4 | Brahmasri Naraayanaguru ITC Katipalla D.K.Dist | 2 | | | 2 | 1 | | 1 | 1 | | 5 |
| 5 | Ranganatha ITC Baburayana koppalu Srirangapattana Tq. | 4 | 1 | | 5 | | 1 | | 1 | 1 | 9 |
| 6 | Maratha Mandala ITC Nippani. | 4 | 1 | | 5 | | 1 | | 1 | 1 | 9 |
| 7 | AshaKiran Rural ITC Dandeli | 3 | | | 3 | | | | 1 | | 4 |
| 8 | Maruthi ITC Magadi | 1 | | | 1 | | | | 1 | | 2 |
| 9 | Venkateshwara I.T.C. Huliyur Durga | 2 | | | 2 | | | | 1 | | 3 |
| 10 | Sri Guru Gorakshanath ITC Hubli | 1 | | | 1 | | | | 1 | | 2 |
| 11 | Kalidasa ITC Badami. | 4 | | 1 | 5 | | 1 | | 1 | 1 | 9 |
| 12 | Rural ITC Aurad. | 2 | | | 2 | 1 | | 1 | 1 | | 5 |
| 13 | Prof. P.S.Choudry ITC Gulburga | 7 | | 1 | 7 | | | 1 | 1 | 1 | 11 |
| 14 | Chandrashekara Bharathi ITC Malekal Thirupathi Arasikere | 3 | 1 | | 4 | | 1 | | | 1 | 7 |
| 15 | SJP ITC Shiralakoppa. | 2 | | | 2 | 1 | | 1 | 1 | | 5 |
| 16 | Nalvadi Krishnaraja Wadeyar ITC Mandya. | 5 | 1 | | 6 | | 1 | | 1 | 1 | 10 |
| 17 | Buvan ITC VenkatalaYalahanka Bangalore | 5 | 1 | | 6 | | 1 | | 1 | 1 | 10 |
| 18 | Dr.Shivabasava ITC Shivabasavanagar Belgaum | 2 | | | 2 | | | | 1 | | 3 |
| 19 | Allamaprabhu ITC Chikodi Belgaum Dt; | 4 | 1 | | 5 | | 1 | | 1 | 1 | 9 |
| 20 | Karnataka ITC Chikamagalore. | 1 | 1 | | 2 | | 1 | | | 1 | 5 |
| 21 | K.V.G. ITC Bagamandala | 6 | 1 | | 7 | 1 | 1 | 1 | 2 | 1 | 14 |
| 22 | Sri Renukamba Rural ITC Kukavada Davanagere Dist. | 2 | 1 | | 3 | | 1 | | | 1 | 6 |
| 23 | S N V V S ITC Bailahongala. Belgaum Dist. | 1 | | | 1 | | | | | | 1 |
| 24 | S.J.M.ITC Birur | 5 | 1 | | 6 | 1 | 1 | 1 | 1 | 1 | 12 |
| 25 | Sri Annadaneshwar ITC Gajendragad GadagDt: | 5 | 1 | | 6 | | 1 | | 1 | 1 | 10 |
| 26 | Sri Jagadguru Kotturu swamy ITC Bellary. | 5 | 1 | | 6 | | 1 | | 1 | 1 | 10 |
| 27 | St: Alloysius ITC Mangalore | 7 | 1 | 1 | 9 | 1 | 2 | 1 | 2 | 2 | 19 |
| 28 | Bethany ITC, Nelyadi, Puttur | 2 | | 1 | 3 | | 1 | | 1 | 1 | 7 |

| Sl. No. | Name & Adress of the ITI | Units | PPL | TO | JTO | OS | FDA | SDA | WA | Gr-D | TOTAL |
|---|---|---|---|---|---|---|---|---|---|---|---|
| 29 | SJP ITC K.R.Puram Road SHIMOGA | 3 | | 1 | 4 | | 1 | | 1 | 1 | 8 |
| 30 | Sri Valaballary Tatanavara ITC Sindhanur Raichur DT: | 4 | | 1 | 5 | 1 | 1 | 1 | 2 | 1 | 12 |
| 31 | Vishweshwaraiah ITC Alur Hassan Dist. | 1 | | | 1 | | | | 1 | | 2 |
| 32 | Sri M.V.ITC Chikkaballapur | 9 | | 1 | 9 | | 1 | 1 | 1 | 1 | 14 |
| 33 | Bibi Fathima ITC Kanakapura main road Bangalore. | 4 | 1 | | 5 | 1 | 1 | 1 | 1 | 1 | 11 |
| 34 | Sri Jagdguru Tontadarya ITC Dambal Mundargi Tq. | 3 | | 1 | 4 | | 1 | | 1 | 1 | 8 |
| 35 | Pushparavi National ITC Gandasi Hand Post | 4 | 1 | | 5 | | 1 | | 1 | 1 | 9 |
| 36 | Pushkarni ITC Hassan | 2 | | | 2 | | | | 1 | | 3 |
| 37 | Madara Channaiah ITC Shirol Naragund Tq Gadag Dt; | 3 | 1 | | 4 | | 1 | | | 1 | 7 |
| 38 | Siddeshwara I.T.C. Tanniruhalla Hassan | 2 | | | 2 | 1 | | 1 | 1 | | 5 |
| 39 | Acharya ITC Banneraghatta Road Bangalore-29 | 10 | 1 | 1 | 12 | 1 | 2 | 1 | 3 | 2 | 23 |
| 40 | Acharya ITC 1st cross Peenya Indl.AreaBangalore-58 | 4 | | | 4 | | | | | | 4 |
| 41 | Acharya ITC Bommasandra Indl.AreaBangalore-46 | 6 | 1 | | 7 | 1 | 1 | 1 | 2 | 1 | 14 |
| 42 | SDM ITC, Venur | 1 | | | 1 | | | | | | 1 |
| 43 | Sri Jagadguru Renukacharya ITC Balehonnur Chikkamagalore Dt. | 2 | 1 | | 3 | | 1 | | | 1 | 6 |
| 44 | Sri Byraveshwara ITC Baragur Hand Post Channarayapattana Tq. | 3 | | | 3 | | | | 1 | | 4 |
| 45 | Hasanamba ITC Kuvempunagar Hasan. | 2 | | | 2 | | | | 1 | | 3 |
| 46 | Sri Manjunatheshwara ITC Dasarakoppalu Hassan. | 5 | 1 | | 6 | | 1 | | 1 | 1 | 10 |
| 47 | Vivekananda Girijana Kalyanana Kendra ITC B.R. Hills Yelandur Tq. Chamarajanagara Dist. | 1 | | | 1 | | | | 1 | | 2 |
| 48 | ABSSK Samaj, Khode 'C' Venkusa I.T.C., Harihara | 1 | 1 | | 2 | | 1 | | | 1 | 5 |
| 49 | Hombegowda ITC, Kengal, Channapattana. | 9 | | 1 | 10 | 1 | 1 | 1 | 2 | 1 | 17 |
| 50 | Yagachi ITC Kandali Hassan Dist. | 5 | 1 | | 6 | | 1 | | 1 | 1 | 10 |
| 51 | Sri Ranga ITC Chikkakondagula Hassan Dist. | 1 | | | 1 | | | | 1 | | 2 |

Annexure-2

| | Name & Adress of the ITI | Units | PPL | TO | JTO | OS | FDA | SDA | WA | Gr-D | TOTAL |
|---|---|---|---|---|---|---|---|---|---|---|---|
| 52 | TMAE 's Thimmayyashetty ITC Hagaribommanahalli Ballary Dist. | 1 | | | 1 | | | | | | 1 |
| 53 | R V V S ITC Nittuvalli Davanagere | 3 | | | 3 | | | | 1 | | 4 |
| 54 | Sir M. Vishweshwariah I.T.C. Kunigal Tumkur Dist. | 7 | 1 | | 8 | 1 | 1 | 1 | 2 | 1 | 15 |
| 55 | Jagadguru Kotturuswamy ITC, Siraguppa | 2 | | 1 | 2 | | | | | | 3 |
| 56 | Most Rev.Y.P.Dandin ITC Dharwad | 3 | | | 3 | | | | 1 | | 4 |
| 57 | Sri Ranganatha ITC Haralahalli Holenarasipura Tq. | 1 | | | 1 | | | | 1 | | 2 |
| 58 | Malleshwari ITC Sakaleshpura Hassan Dist. | 1 | | | 1 | | | | 1 | | 2 |
| 59 | P E S ITC Arakalgud Hassan Dist. | 3 | | | 3 | | | | 1 | | 4 |
| 60 | Sangameshwara ITC Javerallimutt Hassan | 2 | | | 2 | | | | 1 | | 3 |
| 61 | CSI ITC Tumkur | 1 | | | 1 | | | | | | 1 |
| 62 | Ashrafee ITC Hubli. | 1 | | | 1 | | | | 1 | | 2 |
| 63 | Vishweshwaraiah ITC Kuvempu nagar Mysore | 2 | | | 2 | 1 | | 1 | 1 | | 5 |
| 64 | S.A.S ITC Dharwad | 2 | | | 2 | | | | | | 2 |
| 65 | Multi Tek ITC Shivaganga Building 2nd Floor New CBT Dharwad | 2 | | | 2 | | | | 1 | | 3 |
| 66 | Durga ITC, Hosadurga, Chitrdurga Dt: | 2 | | | 2 | 1 | | 1 | 1 | | 5 |
| 67 | Veerabhadreshwara ITC Humnabad | 5 | | 1 | 6 | 1 | 1 | 1 | 2 | 1 | 13 |
| 68 | Umachagi ITC Hassan | 1 | | | 1 | | | | 1 | | 2 |
| 69 | SM ITC Degulamatt, Kanakapura | 2 | | 1 | 3 | | 1 | | 1 | 1 | 7 |
| 70 | Adichunchanagiri ITC Channarayaptna Hassan Dist. | 2 | | | 2 | 1 | | 1 | 1 | | 5 |
| 71 | Sri Kolushanteshwara ITC Arasikere Hassan dist. | 2 | | | 2 | | | | 1 | | 3 |
| 72 | ANH ITC Nyamathi Davanagere Dist. | 2 | | 1 | 2 | | | | | | 3 |
| 73 | NIE ITCMysore | 2 | | 1 | 2 | | | 1 | 1 | 1 | 6 |
| 74 | Y.T.Miskin ITC Dajibanpet Hubli | 2 | 1 | | 3 | | 1 | | | 1 | 6 |
| 75 | Jame-ul-uloom ITCBannikuppe Ramanagar Tq. | 2 | | | 2 | | | | 1 | | 3 |
| 76 | Trinity ITC, Udayavara, Udupi. | 3 | | | 3 | | | | 1 | | 4 |
| 77 | SES Rural ITC, Siragupa, Bellary DT: | 6 | 1 | | 7 | 1 | 1 | 1 | 2 | 1 | 14 |
| 78 | Harshavardana I.T.C., Kunigal, Tumkur Dist. | 3 | | | 3 | 1 | | 1 | 1 | | 6 |
| 79 | SJGM ITC, Ilkal, Bagalkote Dt. | 2 | | | 4 | | 1 | | | | 5 |
| 80 | Janatha Shikshana Samithi I.T.C., Banahatti, Bagalkote Dist. | 2 | | | 2 | | | | 1 | | 3 |
| | | | | | | | | | | | |

| Sl. No. | Name & Adress of the ITI | Units | PPL | TO | JTO | OS | FDA | SDA | WA | Gr-D | TOTA |
|---|---|---|---|---|---|---|---|---|---|---|---|
| 81 | D.Banumaiah ITC, Mysore. | 6 | 1 | | 7 | 1 | 1 | 1 | 2 | 1 | 14 |
| 82 | Sri Banashankari ITC Cholachagudda Badami Tq. | 5 | | 1 | 6 | | 1 | | 1 | 1 | 10 |
| 83 | Sri Mahantheshwara ITC Afjalpur Gulbarga Dt. | 2 | | | 2 | | | | | | 2 |
| 84 | Channamallikarjuna ITC, Shiralakoppa. | 5 | 1 | | 6 | | 1 | | 1 | 1 | 10 |
| 85 | New Horizan ITC, Hassan | 1 | | | 1 | | | | 1 | | 2 |
| 86 | Jagadguru Sri Shivarathreeswara I.T.C., Mysore-Ooty Road, Nanjangud -571 302 | 2 | | | 2 | 1 | | 1 | 1 | | 5 |
| 87 | Sri Mahadeshwara ITC Konanur Arakalgud Tq. | 1 | | | 1 | | | | 1 | | 2 |
| 88 | SPGU ITC Kuduthini Bellary Dt. | 3 | | | 3 | | | | 1 | | 4 |
| 89 | Gurusiddeshwara I.T.C., Kalmata, Kampli -583 152 | 3 | | | 3 | | | | 1 | | 4 |
| 90 | K.R.E. Society I.T.C., Bidar | 1 | | | 2 | | 1 | | 1 | 1 | 5 |
| 91 | Loyala I.T.C., Mount St. Joseph, Bangalore-76 | 2 | | | 2 | | | | 1 | | 3 |
| 92 | Rev. Father Z.M. 'D' Souza I.T.C., Nada, Kundapur Tq., Udupi Dist. | 3 | | | 3 | 1 | | 1 | 1 | | 6 |
| 93 | Priyadarshini Indhira Gandhi ITC, Gulbarga. | 2 | | | 2 | | | | 1 | | 3 |
| 94 | Jagadguru Tontadarya ITC, Mandalagiri. | 1 | | | 1 | 1 | | 1 | 1 | | 4 |
| 95 | HKE Society ITC, Kamalapura. | 4 | | | 4 | | | | | | 4 |
| 96 | Tavaregere ITC, mandya. | 3 | | | 3 | | | | 1 | | 4 |
| 97 | Anjuman ITC, Bagalkote. | 3 | 1 | | 4 | 1 | 1 | 1 | 1 | 1 | 10 |
| 98 | HKE Society ITC, Nimbarga. | 5 | | 1 | 6 | | 1 | | 1 | 1 | 10 |
| 99 | Maruthi ITC, Kadur. | 1 | | | 1 | | | | 1 | | 2 |
| 100 | Bharath Liberal Education Trust ITC, Dandeli. | 3 | | | 3 | | | | 1 | | 4 |
| 101 | HKE Society ITC, Gulbarga | 4 | | 1 | 5 | | 1 | | 1 | 1 | 9 |
| 102 | Varma ITC, Kollegala, Chamarajanagar Dist. | 4 | 1 | | 5 | | 1 | | 1 | 1 | 9 |
| 103 | Anjuman ITC, Sindhagi, Bijapur | 1 | | | 1 | | | | | | 1 |
| 104 | Sadguru Seva Rural ITC, Akki Alur, Haveri Dist. | 2 | | | 2 | | | | 1 | | 3 |
| 105 | St. Philomina ITC, Mysore | 2 | | | 2 | | | | | | 2 |
| 106 | Adichunchanagiri ITC Melukote, Mandya Dist. | 2 | | 1 | | | | | | | 1 |

21/08/10

Annexure-1

| Name & Adress of the ITI | Units | PPL | TO | JTO | OS | FDA | SDA | WA | Gr-D | TOTAL |
|---|---|---|---|---|---|---|---|---|---|---|
| Sindagi Shanthaveera Pattadyakshara ITC, Moratagi, Sidagi Tq, Bijapur Dt. | 8 | | 1 | 9 | 1 | 1 | 1 | 2 | 1 | 16 |
| ndira Mahila Mandala ITC, Loni, Indi Tq. | 1 | | | 1 | | | | 1 | | 2 |
| Total | 329 | 30 | 20 | 374 | 25 | 47 | 28 | 98 | 48 | 670 |

**ಬಿಜಾಪುರ, ಬಾಗಲಕೋಟೆ, ಬೆಳಗಾಂ ಜಿಲ್ಲೆಯ ಕೈಗಾರಿಕಾಭಿವೃದ್ಧಿಗೆ ಭೂಸ್ವಾಧೀನದ ಕುರಿತು**

**514; ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)**

**ಅ)** ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಬೃಹತ್ ಕೈಗಾರಿಕೆಗಳಿಗಾಗಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಉದ್ದೇಶವಿದೆ? (ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು)

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)**

**ಅ)** ಕೆ.ಐ.ಎ.ಡಿ.ಬಿ. ವತಿಯಿಂದ ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶ ಮತ್ತು ಏಕ ಘಟಕ ಸಂಕೀರ್ಣಗಳಿಗಾಗಿ ಒಟ್ಟು 27837–33 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ.

ತಾಲ್ಲೂಕುವಾರು, ಗ್ರಾಮವಾರು ವಿವರಗಳನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ.

ಅನುಬಂಧ-1

ಕೆ.ಐ.ಎ.ಡಿ.ಬಿ. ವತಿಯಿಂದ ಬಾಗಲಕೋಟೆ, ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನುಗಳ ವಿವರ

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ | ಯೋಜನೆಯ ಹೆಸರು | ಭೂಸ್ವಾಧೀನಪಡಿಸುತ್ತಿರುವ ವಿಸ್ತೀರ್ಣ | |
|---|---|---|---|---|---|---|
| | | | | | ಕೈಗಾರಿಕಾ ಪ್ರದೇಶ ಎ-ಗು | ಏಕಘಟಕ ಸಂಕೀರ್ಣ ಎ-ಗು |
| 1 | ಬಾಗಲಕೋಟೆ | ಬಾಗಲಕೋಟೆ | ಜಮಖಂಡಿ, ರಬಕವಿ | ಪವರ್ ಲೂಮ್ ಪಾರ್ಕ್ | --- | 314-35 |
| 2 | ಬಾಗಲಕೋಟೆ | ಬಾಗಲಕೋಟೆ | ಬೀಳಗಿ | ಕೈಗಾರಿಕಾ ಪ್ರದೇಶ | 101-00 | --- |
| 3 | ಬಾಗಲಕೋಟೆ | ಬಾಗಲಕೋಟೆ | ಮುಧೋಳ, ಮಾಲಾಪೂರ | ನಿರಾಣಿ ಶುಗರ್ಸ್ | --- | 42-01 |
| 4 | ಬಾಗಲಕೋಟೆ | ಬಾಗಲಕೋಟೆ | ಬೀಳಗಿ | ಕೈಗಾರಿಕಾ ಪ್ರದೇಶ | 165-13 | --- |
| 5 | ಬಾಗಲಕೋಟೆ | ಬಾಗಲಕೋಟೆ | ಅಚನೂರ, ಹಳ್ಳೂರ & ಇತರೆ | ಸೂರ್ಯ ವಿಜಯನಗರ ಸ್ಟೀಲ್ಸ್ ಮತ್ತು ಪವರ್ ಲಿ., | --- | 4063-06 |
| 6 | ಬಾಗಲಕೋಟೆ | ಬಾಗಲಕೋಟೆ | ಅಚನೂರ, ಹಳ್ಳೂರ | ಸೂರ್ಯ ವಿಜಯನಗರ ಸ್ಟೀಲ್ಸ್ ಮತ್ತು ಪವರ್ ಲಿ., (ವಸತಿ ಯೋಜನೆಗಾಗಿ) | --- | 514-00 |
| 7 | ಬಾಗಲಕೋಟೆ | ಬಾಗಲಕೋಟೆ | ಭಗವತಿ & ಹಳ್ಳೂರ | ಸೂರ್ಯ ವಿಜಯನಗರ ಸ್ಟೀಲ್ಸ್ ಮತ್ತು ಪವರ್ ಲಿ., (ಸಿಮೆಂಟ್ ಯೋಜನೆಗಾಗಿ) | --- | 312-20 |
| 8 | ಬಾಗಲಕೋಟೆ | ಬಾಗಲಕೋಟೆ | ಹುನಗುಂದ, ಬಲಕುಂದಿ | ಕೈಗಾರಿಕಾ ಪ್ರದೇಶ | 106-01 | --- |
| 9 | ಬಾಗಲಕೋಟೆ | ಬಾಗಲಕೋಟೆ | ಕೆರೂರು, ನೆರೆನೂರು | ಕೈಗಾರಿಕಾ ಪ್ರದೇಶ | 3209-09 | --- |
| | | | | ಒಟ್ಟು | 3581-23 | 5246-22 |

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ | ಯೋಜನೆಯ ಹೆಸರು | ಭೂಸ್ವಾಧೀನಪಡಿಸುತ್ತಿರುವ ವಿಸ್ತೀರ್ಣ | |
|---|---|---|---|---|---|---|
| | | | | | ಕೈಗಾರಿಕಾ ಪ್ರದೇಶ ಎ-ಗು | ಏಕಘಟಕ -ಸಂಕೀರ್ಣ ಎ-ಗು |
| 1 | ಬಿಜಾಪುರ | ಬಿಜಾಪುರ | ಅಲಿಯಾಬಾದ್ | ಕೈಗಾರಿಕಾ ಪ್ರದೇಶ | 433-16 | --- |
| 2 | ಬಿಜಾಪುರ | ಬಿಜಾಪುರ | ಬಿಜಾಪುರ, ಅಲಿಯಾಬಾದ್ ಬುರಣಾಪುರ, ಮದಬಾವಿ | ಐ.ಟಿ.ಬಿ.ಟಿ. ಪಾರ್ಕ್ ಕಾರ್ಗೋ ಕಾಂಪ್ಲೆಕ್ಸ್ | 194-35 | --- |
| 3 | ಬಿಜಾಪುರ | ಬಿಜಾಪುರ | ಬಸವನಬಾಗೇವಾಡಿ ಮಸೂತಿ, ಮುತ್ತಗಿ & ಕೂಡಗಿ | ಕೂಡಗಿ ಸೂಪರ್ ಥರ್ಮಲ್ ಪವರ್ ಪ್ರಾಜೆಕ್ಟ್ | --- | 240-32 |
| 4 | ಬಿಜಾಪುರ | ಬಿಜಾಪುರ | ಬಿಜಾಪುರ, ಇಟ್ಟಂಗಿಹಾಳ | ಕೈಗಾರಿಕಾ ಪ್ರದೇಶ (ಲ್ಯಾಂಡ್ ಬ್ಯಾಂಕ್) | 369-00 | |
| 5 | ಬಿಜಾಪುರ | ಬಿಜಾಪುರ | ಇಂಡಿ, ನಾಡ ಕೆ.ಡಿ | ಮೆ: ಜಮಖಂಡಿ ಶುಗರ್ಸ್ ಲಿ., ಯುನಿಟ್-2 | --- | 98-15 |
| 6 | ಬಿಜಾಪುರ | ಬಿಜಾಪುರ | ಬಸವನಬಾಗೇವಾಡಿ ಮುಳವಾಡ | ಕೈಗಾರಿಕಾ ಪ್ರದೇಶ (ಲ್ಯಾಂಡ್ ಬ್ಯಾಂಕ್) | 4456-01 | --- |
| 7 | ಬಿಜಾಪುರ | ಬಿಜಾಪುರ | ಮುದ್ದೇಬಿಹಾಳ, ಮಟಕಲ್ ದೇವನಹಳ್ಳಿ | ಮೆ: ಅಂಜನಿ ಪೋರ್ಟ್ & ಸಿಮೆಂಟ್ ಲಿ., ಹೈದರಾಬಾದ | --- | 684-07 |
| 8 | ಬಿಜಾಪುರ | ಬಿಜಾಪುರ | ಬಸವನಬಾಗೇವಾಡಿ ಕೂಡಗಿ, ತೆಲಗಿ & ಗೊಳಸಂಗಿ | ಕೂಡಗಿ ಸೂಪರ್ ಥರ್ಮಲ್ ಪವರ್ ಪ್ರಾಜೆಕ್ಟ್ ಎನ್.ಟಿ.ಪಿ.ಸಿ. 1ನೇ ಹಂತ | --- | 1923-29 |
| 9 | ಬಿಜಾಪುರ | ಬಿಜಾಪುರ | ಬಸವನಬಾಗೇವಾಡಿ ತೆಲಗಿ & ಮಸೂತಿ | ಕೂಡಗಿ ಸೂಪರ್ ಥರ್ಮಲ್ ಪವರ್ ಪ್ರಾಜೆಕ್ಟ್ ಎನ್.ಟಿ.ಪಿ.ಸಿ. 2ನೇ ಹಂತ | --- | 1015-07 |
| 10 | ಬಿಜಾಪುರ | ಬಿಜಾಪುರ | ಬಸವನಬಾಗೇವಾಡಿ | ಮೆ: ಸಿದ್ದೇಶ್ವರ ಶುಗರ್ಸ್ ಲಿ., ತೆಲಗಿ | --- | 130-05 |
| | | | | ಒಟ್ಟು | 5453-12 | 4092-15 |

-3-

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ | ಯೋಜನೆಯ ಹೆಸರು | ಭೂಸ್ವಾಧೀನಪಡಿಸುತ್ತಿರುವ ವಿಸ್ತೀರ್ಣ | |
|---|---|---|---|---|---|---|
| | | | | | ಕೈಗಾರಿಕಾ ಪ್ರದೇಶ ಎ-ಗು | ಏಕಘಟಕ ಸಂಕೀರ್ಣ ಎ-ಗು |
| 1 | ಬೆಳಗಾವಿ | ಬೆಳಗಾವಿ | ಹುಕ್ಕೇರಿ, ವಂಟಮುರಿ-1 | ಕೈಗಾರಿಕಾ ಪ್ರದೇಶ | 2497-00 | --- |
| 2 | ಬೆಳಗಾವಿ | ಬೆಳಗಾವಿ | ಹುಕ್ಕೇರಿ, ಜೀರನಹೊಳಿ | ಕೈಗಾರಿಕಾ ಪ್ರದೇಶ | 732-25 | --- |
| 3 | ಬೆಳಗಾವಿ | ಬೆಳಗಾವಿ | ಬೆಳಗಾವಿ, ಮುಚಿವಾಡ | ಕೈಗಾರಿಕಾ ಪ್ರದೇಶ | 1422-16 | --- |
| 4 | ಬೆಳಗಾವಿ | ಬೆಳಗಾವಿ | ಬೆಳಗಾವಿ, ಖಾನಾಪುರ, ಮುಚಿವಾಡ | ಕೈಗಾರಿಕಾ ಪ್ರದೇಶ | 958-20 | --- |
| 5 | ಬೆಳಗಾವಿ | ಬೆಳಗಾವಿ | ಕಮಕರಾಟ್ಟಿ, ಕೊಂಡಸಕೊಪ್ಪ | ಕೈಗಾರಿಕಾ ಪ್ರದೇಶ | 610-39 | --- |
| 6 | ಬೆಳಗಾವಿ | ಬೆಳಗಾವಿ | ಬೈಲಹೊಂಗಲ, ಕಿತ್ತೂರ & ಡೊಂಬರಕೊಪ್ಪ | ಕೈಗಾರಿಕಾ ಪ್ರದೇಶ | 648-17 | --- |
| 7 | ಬೆಳಗಾವಿ | ಬೆಳಗಾವಿ | ಬೆಳಗಾವಿ ಪೀರನವಾಡಿ, ಕುಣೀಲವಾಡಿ | ಕೈಗಾರಿಕಾ ಪ್ರದೇಶ | 382-04 | --- |
| 8 | ಬೆಳಗಾವಿ | ಬೆಳಗಾವಿ | ಪೀರನವಾಡಿ (ಹೆಚ್ಚುವರಿ) | ಕೈಗಾರಿಕಾ ಪ್ರದೇಶ | 357-09 | --- |
| 9 | ಬೆಳಗಾವಿ | ಬೆಳಗಾವಿ | ಬೆಳಗಾವಿ, ಕಾಕತಿ, ಯಮನಾಪುರ & ಕಣಬರಗಿ | ಕೈಗಾರಿಕಾ ಪ್ರದೇಶ | 17-13 | --- |
| 10 | ಬೆಳಗಾವಿ | ಬೆಳಗಾವಿ | ಹುಕ್ಕೇರಿ, ಮಾಸ್ತಿಹೊಳಿ & ಮಣಗುತ್ತಿ | ಕೈಗಾರಿಕಾ ಪ್ರದೇಶ | 1078-08 | --- |
| 11 | ಬೆಳಗಾವಿ | ಬೆಳಗಾವಿ | ಗೋಕಾಕ, ಹುಣಶ್ಯಾಳ ಪಿ.ಜಿ. ಜೀರನಹೊಳಿ | ಮೆ: ಸತೀಶ್ ಶುಗರ್ಸ್ ಲಿ., | --- | 135-05 |
| 12 | ಬೆಳಗಾವಿ | ಬೆಳಗಾವಿ | ಸವದತ್ತಿ, ಗೊರವನಕೊಳ್ಳ | ಮೆ: ಎನಾರ್ಕಾನ್ ಇಂಡಿಯಾ ಲಿ., | --- | 76-03 |

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ | ಯೋಜನೆಯ ಹೆಸರು | ಭೂಸ್ವಾಧೀನಪಡಿಸುತ್ತಿರುವ ವಿಸ್ತೀರ್ಣ | |
|---|---|---|---|---|---|---|
| | | | | | ಕೈಗಾರಿಕಾ ಪ್ರದೇಶ ಎ-ಗು | ಏಕಘಟಕ ಸಂಕೀರ್ಣ ಎ-ಗು |
| 13 | ಬೆಳಗಾವಿ | ಬೆಳಗಾವಿ | ಸವದತ್ತಿ, ಗೊರವನಕೊಳ್ಳ | ಮೆ: ಎನಾರ್ಕಾನ್ ಇಂಡಿಯಾ ಅ., | --- | 41-01 |
| 14 | ಬೆಳಗಾವಿ | ಬೆಳಗಾವಿ | ಅಥಣಿ, ಕಾಗವಾಡ | ಮೆ: ಶಿರಗುಪ್ಪಿ ಶುಗರ್ಸ್ ಅ., | --- | 125-01 |
| 15 | ಬೆಳಗಾವಿ | ಬೆಳಗಾವಿ | ರಾಯಬಾಗ ಯಡ್ರಾವಿ, ಸವದತ್ತಿ | ಮೆ: ಶಿವಶಕ್ತಿ ಶುಗರ್ಸ್ ಅ., | --- | 32-03 |
| 16 | ಬೆಳಗಾವಿ | ಬೆಳಗಾವಿ | ಬೆಳಗಾವಿ ಕಾಕತಿ | ಮೆ: ಪ್ರಿಮಿಯಂ ಫಾರಂ ಫ್ರೆಶ್ ಪ್ರೊಡ್ಯೂಸ್ ಅ., | --- | 71-10 |
| 17 | ಬೆಳಗಾವಿ | ಬೆಳಗಾವಿ | ಬೆಳಗಾವಿ ಕಳಖಾಂಬ | ಮೆ: ಜುವಾರಿ ಇಂಡಸ್ಟ್ರೀಸ್ ಅ., | --- | 156-11 |
| 18 | ಬೆಳಗಾವಿ | ಬೆಳಗಾವಿ | ರಾಯಬಾಗ, ದೇವಪುರಹಟ್ಟಿ | ಮೆ: ಸಂಗಮೇಶ್ವರ ಶುಗರ್ಸ್ ವರ್ಕ್ಸ್ ಅ., | --- | 158-06 |
| | | | | ಒಟ್ಟು | 8704-31 | 795-00 |
| | | | | ಜುಮ್ಲಾ | 17739-26 | 10133-37 |

## ಶಿವಯೋಗಿ ಮಂದಿರದ ದೇವಸ್ಥಾನ ಪ್ರವಾಹ ಸಂರಕ್ಷಣೆ ಕಾಮಗಾರಿ ಕುರಿತು

## 541; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)

ಅ) ಪ್ರವಾಹ ಸಮಯದಲ್ಲಿ ಶಿವಯೋಗಿ ಮಂದಿರದ ದೇವಸ್ಥಾನದ ಆವರಣದಲ್ಲಿನ ಕಟ್ಟಡಕ್ಕೆ ನೀರು ನುಗ್ಗಿ ಕಟ್ಟಡ ಶಿಥಿಲಗೊಳ್ಳುತ್ತಿರುವುದನ್ನು ತಪ್ಪಿಸಲು ಈ ಹಿಂದೆ ನೀಡಿದ ಭರವಸೆಯಂತೆ 2011–12ನೇ ಸಾಲಿನಲ್ಲಿ ಪ್ರವಾಹ ಸಂರಕ್ಷಣೆ ಕಾಮಗಾರಿ ಯೋಜನೆ ಅಡಿಯಲ್ಲಿ ಪ್ರಾರಂಭಿಸಬೇಕಾದ ಕಟ್ಟಡದ ಕಾಮಗಾರಿಯನ್ನು ಇನ್ನೂ ಪ್ರಾರಂಭಿಸದಿರಲು ಕಾರಣವೇನು;

ಆ) ಸಣ್ಣ ನೀರಾವರಿ ಇಲಾಖೆಯಲ್ಲಿ ಹಣದ ಕೊರತೆಯಿರುವುದರಿಂದ ಕೆಲಸಗಳು ನಿಧಾನವಾಗಿ ಸಾಗುತ್ತಿರುವ ಸಂಗತಿ ನಿಜವೇ;

ಇ) ಹಾಗಿಲ್ಲದಿದ್ದಲ್ಲಿ, ಸದರಿ ಕಾಮಗಾರಿ ವೆಚ್ಚವನ್ನು ಅವಶ್ಯವಿರುವ ರೂ.25 ಲಕ್ಷದಿಂದ 30 ಲಕ್ಷಕ್ಕೆ ಹೆಚ್ಚಿಸಿ ಈ ವರ್ಷದ ಮಳೆಗಾಲದೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

## ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಅನುದಾನದ ಲಭ್ಯತೆಯ ಅನುಸಾರ ಪರಿಶೀಲಿಸಲಾಗುವುದು.

ಆ) ಇಲ್ಲ.

ಇ) ಪರಿಶೀಲಿಸಲಾಗುವುದು.

**ಬೆಳಗಾವಿಯಲ್ಲಿ ಸಿದ್ಧ ಉಡುಪು ತರಬೇತಿ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ**

**544; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

ಅ) ಕೇಂದ್ರ ಜವಳಿ ಮಂತ್ರಾಲಯದವರು ರಾಜ್ಯದಲ್ಲಿ ಸಿದ್ಧ ಉಡುಪು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿರುವುದು ನಿಜವೇ;

ಆ) ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರು ಸೂಚಿಸಿದ ಸ್ಥಳದಲ್ಲಿ ಈ ತರಬೇತಿ ಕೇಂದ್ರವನ್ನು ಪ್ರಾರಂಭಿಸುವುದಾಗಿ ತಿಳಿಸಿದ ಸಂಗತಿ ನಿಜವೇ; ಹಾಗೂ ಈ ಬಗ್ಗೆ ರಾಜ್ಯ ಸರ್ಕಾರದವರು ಸೂಕ್ತವಾದ ಸ್ಥಳವನ್ನು ಹುಡುಕುತ್ತಿರುವ ಸಂಗತಿ ನಿಜವೇ;

ಇ) ಬೆಳಗಾವಿ ಜಿಲ್ಲೆಯಲ್ಲಿ ಸಿದ್ಧ ಉಡುಪು ತರಬೇತಿ ಕೇಂದ್ರ ಸ್ಥಾಪಿಸಲು ಸಾಕಷ್ಟು ಸ್ಥಳ ಲಭ್ಯವಿದ್ದು, ಬೆಳಗಾವಿಯಲ್ಲಿ ಈ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಪರಿಶೀಲಿಸುವರೇ?

**ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು)**

ಅ) ಹೌದು

ಆ) ಹೌದು, ಜವಳಿ ಮಂತ್ರಾಲಯ, ಕೇಂದ್ರ ಸರ್ಕಾರದ ವತಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿದ್ಧ ಉಡುಪು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

ಇ) ಹೌದು, ಸೂಕ್ತ ಪ್ರಸ್ತಾವನೆ ಬಂದಲ್ಲಿ ಅಪೇರೆಲ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ (ಜವಳಿ ಮಂತ್ರಾಲಯ, ಕೇಂದ್ರ ಸರ್ಕಾರದಿಂದ ಪ್ರಾಯೋಜಿತ) ಮುಖಾಂತರ ಪರಿಶೀಲಿಸಲಾಗುವುದು.

## ಕನಕದಾಸ ಸಾಹಿತ್ಯ ಅಧ್ಯಯನ ಕೇಂದ್ರ ಸ್ಥಾಪಿಸಲು ಹಾಗೂ ಕಾಗಿನೆಲೆಯನ್ನು ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ

**540; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

**ಅ)** ದಾಸ ಶ್ರೇಷ್ಠ ಕನಕದಾಸರ ಸಾಹಿತ್ಯ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೆ;

**ಆ)** ಅಧ್ಯಯನ ಕೇಂದ್ರವನ್ನು ಕನಕರ ತಪೋಭೂಮಿ ಕಾಗಿನೆಲೆಯಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

**ಇ)** ಕನಕರ ತಪೋಭೂಮಿ ಕಾಗಿನೆಲೆಯನ್ನು ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ;

**ಈ)** ಕಾಗಿನೆಲೆ ಪ್ರಾಧಿಕಾರ ಈವರೆಗೆ ಯಾವ-ಯಾವ ಕೆಲಸಗಳನ್ನು ಕೈಗೊಂಡಿದೆ; (ಬಿಡುಗಡೆಯಾದ ಹಣ ಹಾಗೂ ಕೆಲಸಗಳ ವೆಚ್ಚ ವಿವರ ನೀಡುವುದು)

**ಉ)** ಇನ್ನೂ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಹಾಗೂ ಎಂದು ಹಮ್ಮಿಕೊಳ್ಳಲಾಗುವುದು?

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು)**

**ಅ)** ಹೌದು.

**ಆ)** ಇಲ್ಲ.

**ಇ)** ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರವು ಕ್ರಮ ತೆಗೆದುಕೊಳ್ಳುತ್ತಿದೆ.

**ಈ)**

1) ಕನಕದಾಸರು ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ವೈಚಾರಿಕ ಕಾಣಿಕೆ ಕುರಿತಂತೆ ಸಂಶೋಧನೆ ಮಾಡಲು 04 ಜನ ಯುವ ವಿದ್ವಾಂಸರಿಗೆ ಅನುದಾನ ನೀಡಿಕೆ.

2) ಕನಕದಾಸರ ಜನ್ಮ ಸ್ಥಳ ಬಾಡ ಆಡಳಿತ ಕೇಂದ್ರವಾಗಿದ್ದು ಬಂಕಾಪುರ, ಕಾಗಿನೆಲೆಯು ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಅನುದಾನ ನೀಡಿಕೆ.

3) ಕನಕದಾಸರು ಮತ್ತು ಭಾರತದಲ್ಲಿ ಭಕ್ತಿ ಪರಂಪರೆ

4) ಕನಕದಾಸರು ಮತ್ತು ಅವರ ಕೃತಿಗಳ ಆಧರಿಸಿ ಶಿಲ್ಪ ಶಿಬಿರ

5) ರಾಷ್ಟ್ರಮಟ್ಟದ ಕನಕ ಕೀರ್ತನೆಗಳ ಸಂಗೀತ–ಸಂಕಿರಣ ಉತ್ಸವ

6) ಬಹು ಭಾಷಾ ವಿಚಾರ ಸಂಕಿರಣ

7) ಕನಕದಾಸರ 'ಹರಿಭಕ್ತಿಸಾರ' ಹಾಗೂ 'ಮೋಹನತರಂಗಿಣಿ' ಯನ್ನು ತೆಲುಗು, ಹಿಂದಿ, ಮರಾಠಿ ಭಾಷೆಗಳಿಗೆ ಅನುವಾದಿಸಲು ಅನುಮತಿ ನೀಡಿ ಅನುದಾನ ಬಿಡುಗಡೆ ಮಾಡಲಾಗಿದೆ.

**ಒಟ್ಟು ಅಂದಾಜು ವೆಚ್ಚ ರೂ. 77.32 ಲಕ್ಷ**

**ಉ)** ಕನಕದಾಸರ ಸಮಗ್ರ ಚಿಂತನೆಯನ್ನೊಳಗೊಂಡಂತೆ ವಿಸ್ತೃತ ಅಧ್ಯಯನ/ ಸಂಶೋಧನೆ ನಡೆಸಲು ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಆದೇಶ ಹೊರಡಿಸಿ 25 ಲಕ್ಷ ರೂ.ಗಳ ಅನುದಾನಕ್ಕೆ ಮಂಜೂರಾತಿ ನೀಡಲಾಗಿದೆ.

**ಕನ್ನಡ ಸಾಹಿತ್ಯ ಸಮ್ಮೇಳನಗಳ ಬಗ್ಗೆ**

**555; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ರಾಜ್ಯದ ಕಳೆದ 5 ವರ್ಷಗಳಿಂದ ಕನ್ನಡ ಸಾಹಿತ್ಯ ಸಮ್ಮೇಳನ ಸಮಾರಂಭಗಳು ಯಾವ ಸ್ಥಳಗಳಲ್ಲಿ ನಡೆದಿವೆ; (ವರ್ಷಾವಾರು ವಿವರ ನೀಡುವುದು)

**ಆ)** ಪ್ರತಿ ವರ್ಷದ ಸಮಾರಂಭದಲ್ಲಿ ತೆಗೆದುಕೊಂಡ ನಿರ್ಣಯಗಳೇನು; (ಸಮಾರಂಭವಾರು ವಿವರಗಳನ್ನು ನೀಡುವುದು)

**ಇ)** ಪ್ರತಿ ಸಮಾರಂಭದಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಸಂಬಂಧಿಸಿದಂತೆ ಯಾವ ನಿರ್ಧಾರಗಳನ್ನು ಅನುಷ್ಟಾನಕ್ಕೆ ತರಲಾಗಿದೆ;

**ಈ)** ಅನುಷ್ಟಾನಕ್ಕೆ ತರಲಾಗದಿರುವ ನಿರ್ಣಯಗಳಾವುವು?

**ಶ್ರಿ ಗೋವಿಂದ ಎಂ. ಕಾರಜೋಳ (ಸಣ್ಣನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು)**

**ಅ)** 2007 – ಉಡುಪಿ

2009 – ಚಿತ್ರದುರ್ಗ

2010 – ಗದಗ

2011 **–** ಬೆಂಗಳೂರು

2012 – ಗಂಗಾವತಿ

**ಆ)** ಅನುಬಂಧದಲ್ಲಿ ನೀಡಿದೆ.

**ಇ)** ಅನುಬಂಧದಲ್ಲಿ ನೀಡಿದೆ

**ಈ)** ಉದ್ಭವಿಸುವುದಿಲ್ಲ.

## ಅನುಬಂಧ

**ಕಳೆದ 5 ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳು:**

1. ಕರ್ನಾಟಕದ ಮಕ್ಕಳಲ್ಲಿ ಕನ್ನಡ ಭಾಷೆ ಹಾಗೂ ಕನ್ನಡದ ಬಗ್ಗೆ ಆಸಕ್ತಿ ಉಂಟಾಗುವಂತೆ ಅವರನ್ನು ಪ್ರಭಾವಿಸಲು ಮಕ್ಕಳ ಸಾಹಿತ್ಯ ಅಕಾಡೆಮಿ ಸ್ಥಾಪನೆ ಗೊಳ್ಳುವಂತೆ ಕ್ರಮ ಕೈಗೊಳ್ಳುವುದು.
2. ಕನ್ನಡ ಭಾಷೆಗೆ ಮತ್ತು ಅಭಿವೃದ್ಧಿಗೆ ಅನುಕೂಲ ವಾಗುವುದರಿಂದ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವಂತೆ ಭಾರತ ಸರ್ಕಾರವನ್ನು ಒತ್ತಾಯಿಸುವುದು.
3. ಹಾಲಿ ಮಂಜೂರಾಗಿರುವ ಮುಂಬಯಿ ಮಹಾನಗರದ ನಿವೇಶನದಲ್ಲಿ ಕರ್ನಾಟಕ ಭವನವನ್ನು ಶೀಘ್ರವೇ ನಿರ್ಮಾಣ ಮಾಡುವುದು.
4. ಜನ್ಮ ಶತಮಾನೋತ್ಸವ ಆಚರಿಸುತ್ತಿರುವ ಸಾಹಿತಿಗಳ ಹುಟ್ಟೂರಿನಲ್ಲಿ ಅವರ ನೆನಪನ್ನು ಶಾಶ್ವತಗೊಳಿಸುವಂತೆ ಸೂಕ್ತ ಸ್ಮಾರಕಗಳನ್ನು ನಿರ್ಮಿಸುವುದು.
5. ಸುವರ್ಣ ಕರ್ನಾಟಕ ಆಚರಣೆಯ ಸಂದರ್ಭದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ತಿಗೆ ಉಚಿತ ನಿವೇಶನಗಳನ್ನು ನೀಡಿ ಅಲ್ಲಿ ಕನ್ನಡ ಸಾಹಿತ್ಯ ಭವನಗಳನ್ನು ನಿರ್ಮಿಸಲು ಆರ್ಥಿಕ ನೆರವನ್ನು ನೀಡುವುದು.
6. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳಿಗೆ ಹಾಗೂ ತಾಲ್ಲೂಕು ಘಟಕಗಳಿಗೆ ಕ್ರಮವಾಗಿ 5 ಲಕ್ಷ ಹಾಗೂ 1 ಲಕ್ಷ ರೂ.ಗಳ ಶಾಶ್ವತ ಆರ್ಥಿಕ ನೆರವನ್ನು ಒದಗಿಸುವುದು.

**ಮೇಲಿನ ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳು:**

1. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ ಬಾಲ ವಿಕಾಸ ಅಕಾಡೆಮಿಯನ್ನು 2009 ರಲ್ಲಿ ರಚಿಸಿ ಆದೇಶ ಹೊರಡಿಸಲಾಗಿದೆ.
2. ಕನ್ನಡ ಭಾಷೆಗೆ ಮತ್ತು ಅಭಿವೃದ್ಧಿಗೆ ನೆರವಾಗುವುದರಿಂದ ಈಗಾಗಲೇ ಭಾರತ ಸರ್ಕಾರವು ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಿ ಆದೇಶಿಸಿದೆ.
3. 2011ರ ಮಾರ್ಚ್ ತಿಂಗಳಿನಲ್ಲಿ ಬೆಳಗಾವಿಯಲ್ಲಿ ವಿಶ್ವಕನ್ನಡ ಸಮ್ಮೇಳನ ಆಚರಿಸಲಾಗಿದೆ.
4. ಈಗಾಗಲೇ ಜನ್ಮ ಶತಮಾನೋತ್ಸವವನ್ನು ಆಚರಿಸುತ್ತಿರುವ ನಾಡಿನ ಪ್ರಮುಖ ಕವಿಗಳಾದ ಬೇಂದ್ರೆ, ಕುವೆಂಪು, ಕಾರಂತರು, ಮಾಸ್ತಿ ವೆಂಕಟೇಶ ಐಯ್ಯಂಗಾರ್, ಪುತಿನ ಹಾಗೂ ವಿ.ಕೃ.ಗೋಕಾಕ್, ಇವರುಗಳ ಹುಟ್ಟೂರಿನಲ್ಲಿ ಸ್ಮಾರಕಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದ್ದು ಹಾಗೂ ಇವರ ಹೆಸರಿನಲ್ಲಿ ಸರ್ಕಾರವು ಟ್ರಸ್ಟ್ ರಚಿಸಿ, ಈ ಟ್ರಸ್ಟ್‌ಗಳಿಗೆ ಸರ್ಕಾರವು ಆರ್ಥಿಕ ನೆರವನ್ನು ಪ್ರತಿವರ್ಷ ನೀಡುತ್ತಾ ಬರುತ್ತಿದೆ.
5. ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ವಾರ್ಷಿಕ ಸಮ್ಮೇಳನಕ್ಕೆ 1 ಕೋಟಿ ರೂ.ಗಳ ಆರ್ಥಿಕ ನೆರವನ್ನು ನೀಡುತ್ತಾ ಬರುತ್ತಿದೆ ಹಾಗೂ ಜಿಲ್ಲಾ ಸಾಹಿತ್ಯ ಪರಿಷತ್ತಿನ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರೂ. 5.00 ಲಕ್ಷಗಳಂತೆ 29 ಜಿಲ್ಲೆಗಳಿಗೆ ರೂ. 145.00 ಲಕ್ಷ ಬಿಡುಗಡೆ ಮಾಡಲಾಗಿದೆ. ತಾಲ್ಲೂಕು ಮಟ್ಟದ ಸಾಹಿತ್ಯ ಪರಿಷತ್ತಿನ ಸಮ್ಮೇಳನಕ್ಕೆ ರೂ. 1.00 ಲಕ್ಷ ನೀಡಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ.
6. ಹೊರ ರಾಜ್ಯಗಳಲ್ಲಿ ಹಾಗೂ ಹೊರ ದೇಶಗಳಲ್ಲಿ ಕನ್ನಡಕ್ಕಾಗಿ ದುಡಿಯುತ್ತಿರುವ ಸಂಘ-ಸಂಸ್ಥೆಗಳು ನಿರ್ಮಿಸುತ್ತಿರುವ ಕನ್ನಡ ಭವನ ಗಳಿಗೆ ಸರ್ಕಾರದಿಂದ ಆರ್ಥಿಕ ಧನಸಹಾಯ ನೀಡಲಾಗಿದೆ. ಇತ್ತೀಚೆಗೆ ಬಹರೇನ್ ಕನ್ನಡ ಸಂಘದ ಕನ್ನಡ ಭವನದ ನಿರ್ಮಾಣಕ್ಕೆ ರೂ. 1.00 ಕೋಟಿ ಆರ್ಥಿಕ ಸಹಾಯವನ್ನು ನೀಡಲಾಗಿದೆ.

**ಶಿವಮೊಗ್ಗದಲ್ಲಿ ಹೆಚ್.ಎ.ಎಲ್.ನ ಹೆಲಿಕಾಪ್ಟರ್ ಘಟಕ ಸ್ಥಾಪಿಸುವ ಬಗ್ಗೆ**

**560; ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಶಿವಮೊಗ್ಗ ನಗರದಲ್ಲಿ ಹೆಚ್.ಎ.ಎಲ್ ನವರು ಹೆಲಿಕಾಪ್ಟರ್ ತಯಾರಿಕಾ ಘಟಕವನ್ನು ಸ್ಥಾಪಿಸಲು ಸ್ಥಳ ಪರಿಶೀಲನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹಾಗಿದ್ದಲ್ಲಿ, ಸದರಿ ಪ್ರಕ್ರಿಯೆ ಯಾವ ಹಂತದಲ್ಲಿದೆ?

**ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)**

**ಅ)** ಹೌದು.

**ಆ)** ಕರ್ನಾಟಕ ಸರ್ಕಾರದ ಆಹ್ವಾನದ ಮೇರೆಗೆ ಹೆಚ್.ಎ.ಎಲ್ ಅಧಿಕಾರಿಗಳ ತಂಡವು ಶಿವಮೊಗ್ಗಕ್ಕೆ ಭೇಟಿ ನೀಡಿದ್ದು ಆ ಸಮಯದಲ್ಲಿ ಕೆ.ಐ.ಎ.ಡಿ.ಬಿ ಯವರು ಉದ್ದೇಶಿತ ಶಿವಮೊಗ್ಗ ವಿಮಾನ ನಿಲ್ದಾಣದ ಎದುರು ಭೂ ಸ್ವಾಧೀನಪಡಿಸುತ್ತಿರುವ ಸ್ಥಳ ಹಾಗೂ ಭೂ ಬ್ಯಾಂಕ್‌ಗಾಗಿ ಸ್ವಾಧೀನಪಡಿಸುತ್ತಿರುವ ಎರಡು ಸ್ಥಳಗಳಿಗೆ ಜಿಲ್ಲಾಧಿಕಾರಿಗಳು ಶಿವಮೊಗ್ಗ, ಕೆ.ಐ.ಎ.ಡಿ.ಬಿ ಹಾಗೂ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಅಧಿಕಾರಿಗಳೊಂದಿಗೆ ತೆರಳಿ ಸ್ಥಳ ಪರಿಶೀಲನೆ ಮಾಡಿಸಿರುತ್ತಾರೆ. ನಂತರ ಜಿಲ್ಲಾಧಿಕಾರಿಗಳು ಶಿವಮೊಗ್ಗ ಇವರು ಕಛೇರಿ ಸಭಾಂಗಣದಲ್ಲಿ ಶಿವಮೊಗ್ಗ ಜಿಲ್ಲೆಯ ಬಗ್ಗೆ ಪರಿಚಯಿಸಲು Power Point Presentation ಮಾಡಿ ವಿವರ ನೀಡಿದರು.

ಹೆಚ್.ಎ.ಎಲ್ ಸಂಸ್ಥೆಯು ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿರುವುದಿಲ್ಲ.

## ಕೋಲಾರ ಜಿಲ್ಲೆಯಲ್ಲಿರುವ ಒಟ್ಟು ನೀಲಗಿರಿ ತೋಪುಗಳ ಬಗ್ಗೆ

**642; ಡಾ॥ ಎಸ್.ಆರ್. ಲೀಲಾ (ನಾಮನಿರ್ದೇಶನ ಹೊಂದಿದವರು)**

**ಅ)** ನೀಲಗಿರಿ ಅಂತರ್ಜಲವನ್ನು ಒಣಗಿಸುವ ಸಸ್ಯಜಾತಿ ಎಂದು ತಿಳಿದಿದ್ದರೂ ಅರಣ್ಯ ಇಲಾಖೆಯ ಅಧಿಕಾರಿಗಳು ಇನ್ನೂ ನೀಲಗಿರಿ, ಅಕೇಶಿಯಾ ಸಸ್ಯಗಳನ್ನು ನಿರ್ಮೂಲನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹಾಗಿದ್ದರೆ, ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಕೋಲಾರ ಜಿಲ್ಲೆಯಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು;

**ಇ)** ಯಾವ ಯಾವ ಜಾತಿಯ ಸಸ್ಯಗಳು ಕೋಲಾರ ಜಿಲ್ಲೆಯಲ್ಲಿ ಪ್ರಧಾನವಾಗಿವೆ; ಅವುಗಳಲ್ಲಿ ಇರುವ ನೀಲಗಿರಿ ತೋಪುಗಳೆಷ್ಟು ವಿವಿಧ ಸಸ್ಯಗಳ ತೋಪುಗಳೆಷ್ಟು? (ವಿವರ ನೀಡುವುದು)

**ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು)**

**ಅ)** ಬಂದಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಅಪಜೀ 29 ಎಫ್ಎಪಿ 2011, ದಿನಾಂಕ: 19-03-2011 ಹಾಗೂ ಅಪಜೀ 31 ಎಫ್ಎಪಿ 2011, ದಿನಾಂಕ: 18-05-2011ರ ಪ್ರಕಾರ ಅರಣ್ಯ ವಿಭಾಗದಲ್ಲಿ ನೀಲಗಿರಿ ಮತ್ತು ಆಕೇಶಿಯಾ ಗಿಡಗಳನ್ನು ಬೆಳೆಸಲು ಹಾಗೂ ನಡೆಲು ನಿರ್ಬಂಧಿಸಲಾಗಿದೆ.

**ಆ)** ಕೋಲಾರ ಅರಣ್ಯ ವಿಭಾಗದಲ್ಲಿನ ನೀಲಗಿರಿ ಮತ್ತು ಅಕೇಶಿಯಾ ಜಾತಿಯ ಗಿಡಗಳನ್ನು ಕಟಾವು ಮಾಡಿ ಆ ಪ್ರದೇಶದಲ್ಲಿ ಉತ್ತಮ ಜಾತಿಯ ನೇರಳೆ, ಹಲಸು, ಮಾವು, ಹಿಪ್ಪೆ, ಹೊಂಗೆ ಗ್ಲಿರಿಸೀಡಿಯಾ ಬಿದಿರು, ಆಲ ಅರಳಿ, ಗೋಣಿ ಇತ್ಯಾದಿ ಜಾತಿಯ ಗಿಡಗಳನ್ನು ನಡೆಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಒಟ್ಟು 42699.31 ಹೆಕ್ಟೇರ್ ಅರಣ್ಯ ಪ್ರದೇಶವಿರುತ್ತದೆ.

ಇ) ಕೋಲಾರ ಜಿಲ್ಲೆಯಲ್ಲಿ ಹುಣಸೆ, ಆಲ, ಅರಳಿ, ಬೇವು, ಚಿಗರೆ, ನೇರಳೆ, ಮಾವು, ಬಿದಿರು, ಹಲಸು, ಗ್ಲಿರಿಸೀಡಿಯಾ, ಸೀಮೆತಂಗಡಿ, ಕಗ್ಗಲಿ, ಕಮರ, ತಪಸಿ, ಹೂವರಸಿ, ಸೀಗೆ, ಬಿಲ್ವಾರ, ಊಡಗ, ಜಾಲಾರಿ, ಬಾಗೆ, ಹೆಬ್ಬೇವು, ಹೊಂಗೆ, ಶ್ರೀಗಂಧ, ಬೆಟ್ಟದನೆಲ್ಲಿ, ಸೀತಾಫಲ, ಮುತ್ತುಗ, ಹಾಲೆ, ದಿಂಡಿಗ, ಹಿನ್ನೆ, ತೊರೆಮತ್ತಿ, ರಕ್ತಚಂದನ, ಬನ್ನಿ, ಬಿಳಿಜಾಲಿ, ಕಕ್ಕೆ ಇತ್ಯಾದಿ ಜಾತಿಯ ಸಸಿಗಳು ಕೋಲಾರ ಜಿಲ್ಲೆಯಲ್ಲಿ ಪ್ರಧಾನವಾಗಿರುತ್ತವೆ.

ಕೋಲಾರ ಜಿಲ್ಲೆಯ ಒಟ್ಟು **42699.31** ಹೆಕ್ಟೇರ್ ಅರಣ್ಯ ಪ್ರದೇಶದ ಪೈಕಿ **3639** ಹೆಕ್ಟೇರ್ ಪ್ರದೇಶದಲ್ಲಿ ನೀಲಗಿರಿ ನೆಡುತೋಪುಗಳು ಇರುತ್ತದೆ. ಹಾಗೂ **1487** ಹೆಕ್ಟೇರ್ ಪ್ರದೇಶದಲ್ಲಿ **ಅಕೇಶಿಯಾ** ನೆಡುತೋಪು ಇರುತ್ತದೆ. ಉಳಿದಂತೆ **37573.31** ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಮಿಶ್ರ ಜಾತಿಯ ಅರಣ್ಯ ಪ್ರದೇಶವಿರುತ್ತದೆ.

## ಬೀದಿನಾಯಿಗಳ ಹಾವಳಿ ಬಗ್ಗೆ

**563; ಶ್ರೀ ಅಬ್ದುಲ್ ಅಜೀಂ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** 2011ರಲ್ಲಿ ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳ ಕಡಿತಕ್ಕೆ ಒಳಗಾದವರ ಸಂಖ್ಯೆ ಎಷ್ಟು;

**ಆ)** ನಾಯಿ ಕಡಿತದಿಂದ ಭಾದಿತರಾದ ಗಾಯಾಳುಗಳಿಗೆ ಸರ್ಕಾರದಿಂದ ಯಾವುದಾದರೂ ಪರಿಹಾರ ನೀಡಲಾಗಿದೆಯೇ; (ವಿವರ ನೀಡುವುದು)

**ಇ)** ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿರುವ ನಾಯಿಗಳ ಮಾಲೀಕರ ವಿರುದ್ಧ ಯಾವುದಾದರೂ ಪ್ರಕರಣಗಳು ದಾಖಲಾಗಿದೆಯೇ;

**ಈ)** ಹಾಗಿದ್ದಲ್ಲಿ, ಇಂತಹ ಮಾಲೀಕರ ವಿರುದ್ಧ ಯಾವ ರೀತಿಯ ಕ್ರಮ ತೆಗದುಕೊಳ್ಳಲಾಗಿದೆ;

ಉ) ಕಳೆದ 3 ವರ್ಷಗಳಲ್ಲಿ ಎಷ್ಟು ಬೀದಿ ನಾಯಿಗಳಿಗೆ ಸ್ಟರಲೈಜೇಶನ್ ಮಾಡಲಾಗಿದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು)**

ಅ) 2011–12ನೇ ಸಾಲಿನಲ್ಲಿ ಡಿಸೆಂಬರ್ 2011ರ ಅಂತ್ಯದವರೆಗೂ ನಾಯಿ ಕಚ್ಚಿರುವ ಸಂಖ್ಯೆ: 13,945

ಆ)

1. ದಿನಾಂಕ:12.01.2011ರಂದು ಬಾಗಲೂರಿನಲ್ಲಿ ಬೀದಿ ನಾಯಿಗಳ ಕಡಿತದಿಂದ ಸಾವನ್ನಪ್ಪಿರುವ ಬಗ್ಗೆ ಶಂಕಿಸಲಾಗಿರುವ **ಪ್ರಶಾಂತೊ,** ಎಂಬ ಬಾಲಕನ ಪೋಷಕರಿಗೆ ರೂ.1.00 ಲಕ್ಷ ಮೊತ್ತವನ್ನು ಪರಿಹಾರವನ್ನಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವತಿಯಿಂದ ಪಾವತಿಸಲಾಗಿದೆ.

2. ದಿ: 01.07.2011ರಂದು ಯಲಹಂಕ ನ್ಯೂಟೌನ್‌ನಲ್ಲಿ ಬೀದಿ ನಾಯಿ ಕಡಿತದಿಂದ ಸಾವನ್ನಪ್ಪಿರುವ ಬಗ್ಗೆ ಶಂಕಿಸಲಾಗಿರುವ **ಸಂದೀಪ್** ಎಂಬ ಬಾಲಕನ ಪೋಷಕರಿಗೆ ರೂ. 1.00 ಲಕ್ಷ ಮೊತ್ತವನ್ನು ಪರಿಹಾರವನ್ನಾಗಿ ಪಾಲಿಕೆವತಿಯಿಂದ ಪಾವತಿಸಲಾಗಿದೆ.

ಇ) –ಇಲ್ಲ–

ಈ) ಅನ್ವಯಿಸುವುದಿಲ್ಲ.

ಉ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ **2008–09ನೇ** ಸಾಲಿನಲ್ಲಿ 42,695, **2009–10ನೇ** ಸಾಲಿನಲ್ಲಿ 29,349 ಮತ್ತು **2010–11ನೇ** ಸಾಲಿನಲ್ಲಿ 69,141 ಬೀದಿನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

## ಬೆಂಗಳೂರು ನಗರದ R.M.V. 2ನೇ ಹಂತದ ಪೂಜಾರಿ ಲೇಔಟ್‌ನ ರಸ್ತೆ ಅಗಲೀಕರಣ ಕುರಿತು

### 417; ಶ್ರೀ ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ)

**ಅ)** ಬೆಂಗಳೂರು ನಗರದ ಆರ್.ಎಂ.ವಿ (ರಾಜಮಹಲ್ ವಿಲಾಸ್) ಬಡಾವಣೆಯ 2ನೇ ಹಂತದ ಪೂಜಾರಿ ಲೇಔಟ್‌ನ ಮುಖ್ಯರಸ್ತೆ ಅಗಲೀಕರಣದ ಯೋಜನೆ ಸರ್ಕಾರದ ಮುಂದಿದೆಯೇ;

**ಆ)** ಈ ರಸ್ತೆಯ ಅಗಲೀಕರಣಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;

**ಇ)** ಈ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಬೃಹತ್ ಅಪಾರ್ಟ್‌ಮೆಂಟ್‌ಗಳು (ವೈಷ್ಣವಿ, ಪೂರ್ವಾಂಕರ, ಎಸ್ಟೀಮ್) ನಿರ್ಮಾಣಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ಅಲ್ಲಿನ ಜನಸಂಖ್ಯೆಗೆ ಸಾಕಾಗುವಷ್ಟು ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ ಪ್ರಸ್ತುತ ಇದೆಯೆ; ಇಲ್ಲವಾದಲ್ಲಿ ಅಂತಹ ವ್ಯವಸ್ಥೆ ಕಲ್ಪಿಸಲು ಯಾವ ಕಾಲಮಿತಿಯ ಯೋಜನೆ ರೂಪಿಸಲಾಗಿದೆ?

### ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಯವರು)

**ಅ)** ಈ ರಸ್ತೆ ಅಗಲೀಕರಣದ ಪ್ರಸ್ತಾವನೆಯು ಆರ್.ಎಂ.ಪಿ–2015 ರಲ್ಲಿ ಸೇರಿರುವುದಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ಸ್ಥಳೀಯ ಪಾಲಿಕೆ ಸದಸ್ಯರು ಈ ರಸ್ತೆಯನ್ನು ಅಗಲೀಕರಣ ಮಾಡಲು ಕೋರಿರುತ್ತಾರೆ. ವಾಹನ ದಟ್ಟಣೆಯನ್ನು ಸುಗಮಗೊಳಿಸುವ ದೃಷ್ಟಿಯಿಂದ ರಸ್ತೆಯನ್ನು ಅಗಲೀಕರಣಗೊಳಿಸುವುದು ಸ್ಥಳಪರಿವೀಕ್ಷಣೆಯಿಂದ ತಿಳಿದು ಬಂದಿರುತ್ತದೆ.

**ಆ)** ರಸ್ತೆ ಅಗಲೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಾಥಮಿಕ ಸರ್ವೆ ಕಾರ್ಯ ಮಾಡಲಾಗುತ್ತಿದೆ. ಈ ಪ್ರಸ್ತಾವನೆಯು ಇನ್ನೂ ಪ್ರಾಥಮಿಕ ಹಂತದಲ್ಲಿರುತ್ತದೆ.

ಇ) ಬಂದಿದೆ

**ಈ)** ಆರ್.ಎಂ.ವಿ. ಬಡಾವಣೆಯ ಪೂಜಾರಿ ಲೇಔಟ್‌ಗೆ ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಪೂರ್ವಾಂಕರ, ಎಸ್ಟೀಮ್ ಅಪಾರ್ಟ್‌ಮೆಂಟ್ ಕಟ್ಟಡಕ್ಕೆ ಮಂಡಳಿಯಿಂದ ನೀರು ಸರಬರಾಜು ಹಾಗೂ ಒಳಚರಂಡಿ ಸಂಪರ್ಕ ಮಂಜೂರಾತಿ ನೀಡಿರುವುದಿಲ್ಲ.

ಬೆಂಗಳೂರು ಜಲಮಂಡಳಿಯು ಹೆಚ್ಚುವರಿಯಾಗಿ 500 ದಶಲಕ್ಷ ನೀರು ತರುವ ಕಾವೇರಿ ನಾಲ್ಕನೇ ಹಂತದ 2ನೇ ಫೇಸ್ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಂಡಿದ್ದು, ಇದು ತ್ವರಿತಗತಿಯಲ್ಲಿ ಪ್ರಗತಿಯಲ್ಲಿದ್ದು, ಈ ಯೋಜನೆ ಪೂರ್ಣಗೊಂಡ ನಂತರ ಮೇಲ್ಕಂಡ ಬಡಾವಣೆಗೆ ನೀರಿನ ವ್ಯವಸ್ಥೆ ಉತ್ತಮಪಡಿಸಲಾಗುವುದು.

**ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಅವ್ಯವಹಾರದ ಬಗ್ಗೆ**

**517; ಶ್ರೀ ಹಾಲಪ್ಪ ಬಸಪ್ಪ ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ರಾಜ್ಯಾದ್ಯಂತ ಶುದ್ಧ ಕುಡಿಯುವ ನೀರಿನ (ಪ್ಯಾಕೇಜ್ ಡ್ರಿಂಕಿಂಗ್ ವಾಟರ್) ಅವ್ಯವಹಾರ ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;

ಆ) ಕೊಪ್ಪಳ ಜಿಲ್ಲೆಯಲ್ಲಿರುವ ನೊಂದಾಯಿತ ಶುದ್ಧ ಕುಡಿಯುವ ನೀರಿನ ಕಂಪನಿಗಳ ಸಂಖ್ಯೆ ಎಷ್ಟು ಮತ್ತು ನೊಂದಣಿ ಮಾಡದೆ ಇರುವ ಅಂದರೆ ಐ.ಎಸ್.ಐ ಮಾನ್ಯತೆ ಪಡೆಯದೆ ಇರುವ ಶುದ್ಧ ಕುಡಿಯುವ ನೀರಿನ ಕಂಪನಿಗಳೆಷ್ಟು;

ಇ) ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಐ.ಎಸ್.ಐ ಮಾನ್ಯತೆ ಪಡೆಯದೆ ಇರುವ ಕಂಪನಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

**ಅ)** ಭಾರತೀಯ ಗುಣಮಟ್ಟ ಮಾಪಕ (Bureau of India Standards) ದಲ್ಲಿ ನೊಂದಾಯಿಸದೆ ಅನಧಿಕೃತವಾಗಿ ಪ್ಯಾಕೇಜ್ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಿ ನೀರು ಸರಬರಾಜು ಮಾಡುತ್ತಿರುವ ಕುರಿತಂತೆ ಸರ್ಕಾರದ ಗಮನಕ್ಕೆ ಬಂದಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಕಾಯ್ದೆಯಡಿ ಇದುವರೆವಿಗೆ ರಾಜ್ಯಾದ್ಯಂತ 92 ಘಟಕಗಳನ್ನು ಪರಿವೀಕ್ಷಿಸಲಾಗಿದೆ. ಆ ಪೈಕಿ ಕಲಬೆರಕೆ / ಮಿಸ್ ಬ್ರ್ಯಾಂಡ್ ಎಂದು ಕಂಡು ಬಂದ 5 ಘಟಕಗಳನ್ನು ಮುಚ್ಚಿಸಲಾಗಿದೆ ಹಾಗೂ ಅವುಗಳ ವಿರುದ್ಧ ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಉಳಿದ 87 ಘಟಕಗಳಿಗೆ ಸಂಬಂಧಿಸಿದಂತೆ 15 ಘಟಕಗಳನ್ನು ಮುಚ್ಚಿಸಲಾಗಿದೆ ಹಾಗೂ 72 ಘಟಕಗಳಿಗೆ ನೋಟಿಸ್‌ಗಳನ್ನು ಜಾರಿ ಮಾಡಲಾಗಿದೆ.

**ಆ) ಮತ್ತು ಇ)** ಕೊಪ್ಪಳ ಜಿಲ್ಲೆಯ 25 ಘಟಕಗಳನ್ನು ಪರಿವೀಕ್ಷಿಸಲಾಗಿದ್ದು, ಆ ಪೈಕಿ ಬಿ.ಐ.ಎಸ್. ನಿಂದ ನೊಂದಾಯಿಸಲ್ಪಟ್ಟ 06 ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಉಳಿದ 19 ಘಟಕಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಆ ಪೈಕಿ ಈವರೆಗೆ ಒಂದು ಘಟಕವನ್ನು ಮುಚ್ಚಿಸಲಾಗಿದೆ.

**ಬೆಂಗಳೂರು ಮಹಾನಗರದ ರಾಜಕಾಲುವೆ ಒತ್ತುವರಿ ತೆರವಿಗೆ ಕೋರ್ಟ್ ಆದೇಶ**

**777; ಶ್ರೀ ಕೆ.ಸಿ. ಕೊಂಡಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಬೆಂಗಳೂರು ಮಹಾನಗರದಲ್ಲಿ ರಾಜಕಾಲುವೆ ಒತ್ತುವರಿ ತೆರವುಗೊಳಿಸುವಲ್ಲಿ ಯಾವುದೇ ನೋಟೀಸ್ ನೀಡದೆ ಒತ್ತುವರಿ ತೆರವುಗೊಳಿಸುವ ಅಧಿಕಾರವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಹೈಕೋರ್ಟ್ ತೀರ್ಪಿತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ತೀರ್ಪಿನ ಪ್ರತಿಯೊಂದಿಗೆ ವಿವರ ನೀಡುವುದು)

ಆ) ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ ಚಿನ್ನಪ್ಪನಹಳ್ಳಿ ಗ್ರಾಮದ ಒತ್ತುವರಿಯಾದ ರಾಜಕಾಲುವೆಯ ವಿಷಯವಾಗಿ ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆಯ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 07–06–2010 ರಂದು ನಡೆದ ಸಭೆಯಲ್ಲಿ ಪಾಲಿಕೆ ಅಧಿಕಾರಿಗಳು ಭಾಗವಹಿಸಿದರೆ, ಸಭೆಯಲ್ಲಿ ಕೈಗೊಂಡ ನಿರ್ಣಯಗಳೇನು: (ಭಾಗವಹಿಸಿದ ಅಧಿಕಾರಿಗಳ ಹೆಸರು, ಸಭೆಯ ನಡವಳಿಯ ಪ್ರತಿಯೊಂದಿಗೆ ವಿವರ ಒದಗಿಸುವುದು)

ಇ) ಚಿನ್ನಪ್ಪನಹಳ್ಳಿ ಗ್ರಾಮದ ರಾಜಕಾಲುವೆ ಹಳ್ಳಗಳ ಒತ್ತುವರಿ ಜಾಗವನ್ನು ತೆರವುಗೊಳಿಸಲು ಪಾಲಿಕೆ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

**ಈ)** ಸದರಿ ಗ್ರಾಮದ ಒತ್ತುವರಿ ಜಾಗದ ಅಳತೆ ಕಾರ್ಯ ಯಾವ ಹಂತದಲ್ಲಿದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು)**

ಅ) ರಿಟ್ ಪಿಟಿಷನ್ ಸಂಖ್ಯೆ 31394/2009 ಪ್ರಕಾರ ಘನ ಉಚ್ಚನ್ಯಾಯಾಲಯ ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸಲು ತೀರ್ಪು ನೀಡಿರುತ್ತದೆ.

ತೀರ್ಪಿನ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕ ಒದಗಿಸಲಾಗಿದೆ

ಆ) ಹೌದು,

ನಡವಳಿಯ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗಿದೆ.

ಇ) **ಮತ್ತು ಈ)** ದಿನಾಂಕ 07–06–2010ರಂದು ನಡೆದ ಸಭೆಯಲ್ಲಿ ಸರ್ವೆ ಕಾರ್ಯವನ್ನು ಒಂದು ವಾರದೊಳಗಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಈ ರಾಜಕಾಲುವೆಯ ಸರ್ವೆಯನ್ನು ನಡೆಸುವ ಮುನ್ನ ಹೆಬ್ಬಾಳ ಕಣಿವೆಯ ದೊಡ್ಡಮೋರಿಗಳ ಸರಹದ್ದನ್ನು ಗುರ್ತಿಸಿದ ನಂತರ

ಸರ್ವೆ ಮಾಡಬೇಕಾಗಿರುತ್ತದೆ. ಪ್ರಸ್ತುತ ಸರಹದ್ದುಗಳನ್ನು ಗುರ್ತಿಸುವ ರೆವಿನ್ಯೂ ಸರ್ವೆ ಕಾರ್ಯ ನಡೆಯುತ್ತಿರುತ್ತದೆ. ಈ ಕಾರ್ಯ ಮುಗಿದ ನಂತರ ಚಿನ್ನಪ್ಪನಹಳ್ಳಿಯಲ್ಲಿರುವ ರಾಜಕಾಲುವೆಗಳ ರೆವಿನ್ಯೂ ಸರ್ವೆಯನ್ನು ಸಹ ಮಾಡಲಾಗುವುದು ಸರ್ವೆ ಮಾಡಿದ ನಂತರ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಜರುಗಿಸಲಾಗುವುದು.

## ಕಾರವಾರ ಜಿಲ್ಲೆ ಜೋಯಿಡಾ ತಾಲ್ಲೂಕಿನಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರುಗಳ ಬಗ್ಗೆ

**672; ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕಾರವಾರ ಜಿಲ್ಲಾ ಜೋಯಿಡಾ ತಾಲ್ಲೂಕಿನಲ್ಲಿರುವ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿರುವ ವೈದ್ಯರೆಷ್ಟು ಹಾಗೂ ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಬೇಕಾದ ಸಕಲ ಸವಲತ್ತುಗಳು ಇವೆಯೇ ಹಾಗೂ ಅಲ್ಲಿನ ವೈದ್ಯರು ರೋಗಿಗಳಿಗೆ ಸರಿಯಾಗಿ ಸ್ಪಂದಿಸುತ್ತಾರೆಯೇ; (ವಿವರ ನೀಡುವುದು)

**ಆ)** ಜೋಯಿಡಾ ತಾಲ್ಲೂಕಿನ ರೋಗಿಗಳು ಅಲ್ಲಿ ಸರಿಯಾದ ಚಿಕಿತ್ಸೆಯ ವ್ಯವಸ್ಥೆ ಇಲ್ಲದೆ ಇರುವುದರಿಂದ ಹಾಗೂ ವೈದ್ಯಾಧಿಕಾರಿಗಳು ಸರಿಯಾದ ಸಮಯದಲ್ಲಿ ಸಿಗದೆ ಇರುವುದರಿಂದ ಜೋಯಿಡಾದಿಂದ ದಾಂಡೇಲಿಗೆ ಬರುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಇ)** ಈ ಪ್ರಸಂಗದಿಂದ ಆ ಭಾಗದ ಸಾರ್ವಜನಿಕರು ಮೇಲಿಂದ ಮೇಲೆ ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

**ಈ)** ಜೋಯಿಡಾ ತಾಲ್ಲೂಕಿಗೆ ಜಿಲ್ಲಾ ಆರೋಗ್ಯ ಅಧಿಕಾರಿಗಳು ಈ ವರ್ಷದ ಅವಧಿಯಲ್ಲಿ ಎಷ್ಟು ಭಾರಿ ಭೇಟಿ ನೀಡಿರುತ್ತಾರೆ. ಅಲ್ಲಿ ರೋಗಿಗಳಿಗೆ ಆಗುವ ಯಾವ ಯಾವ ಸಮಸ್ಯೆ ಬಗೆಹರಿಸಿರುತ್ತಾರೆ; ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರುವ ವೈದ್ಯಾಧಿಕಾರಿ ಅಥವಾ ಸಿಬ್ಬಂದಿ ಮೇಲೆ ಇಲ್ಲಿಯವರೆಗೆ ಯಾವುದಾದರೂ ಕ್ರಮ ಕೈಗೊಂಡಿರುವರೇ? (ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

ಅ) ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕು ಆಸ್ಪತ್ರೆಯು 30 ಹಾಸಿಗೆಗಳ ಸಾಮರ್ಥ್ಯದ ಕಾರ್ಯನಿರ್ವಹಿಸುತ್ತಿದೆ. ಈ ಆಸ್ಪತ್ರೆಗೆ 4 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಒಂದು ಸ್ತ್ರೀರೋಗ ತಜ್ಞತೆ ಹುದ್ದೆ ಭರ್ತಿಯಾಗಿದೆ ಹಾಗೂ 3 ಹುದ್ದೆಗಳು ಖಾಲಿಯಿವೆ. ಸ್ತ್ರೀರೋಗ ತಜ್ಞತೆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವೈದ್ಯರೂ ಸಹ ದಿನಾಂಕ: 27–01–2012 ರಿಂದ ರಜೆ ಮೇಲೆ ತೆರಳಿರುತ್ತಾರೆ. ಆದುದರಿಂದ, ಈ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಲು ಜಿಲ್ಲೆಯ ಇತರೇ ಆಸ್ಪತ್ರೆಗಳಿಂದ ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ಜೋಯಿಡಾ ತಾಲ್ಲೂಕಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ:

1) ಕುಂಬಾರವಾಡ

2) ಗುಂದ

3) ಜಗಲಪೇಟ

4) ಉಳವಿ

5) ಡಿಗ್ಗಿ

6) ಕ್ಯಾಸಲರಾಕ

ಇವುಗಳಲ್ಲದೆ, ಕ್ಯಾಸಲರಾಕದಲ್ಲಿ ಒಂದು ಸಂಚಾರಿ ಆರೋಗ್ಯ ಘಟಕ ಕಾರ್ಯನಿರ್ವಹಿಸುತ್ತಿದೆ.

ಕ್ಯಾಸಲರಾಕ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಆರೋಗ್ಯ ಬಂಧು ಯೋಜನೆಯಡಿ ನಿರ್ವಹಣೆಗಾಗಿ ಕರುಣಾ ಟ್ರಸ್ಟ್ ರವರಿಗೆ ವಹಿಸಲಾಗಿದೆ. ಉಳಿದ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 5 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ಹುದ್ದೆಗಳು ಮಂಜೂರಾಗಿವೆ. ಆ ಪೈಕಿ 3 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ 2 ಹುದ್ದೆಗಳು ಅಂದರೆ ಡಿಗ್ಗಿ ಮತ್ತು ಜಗಲಪೇಟೆ ಕೇಂದ್ರಗಳಲ್ಲಿ ಖಾಲಿ ಇವೆ.

ಈ ಐದು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಟ್ಟು 41 ಇತರೇ ಸಿಬ್ಬಂದಿ ಹುದ್ದೆಗಳು ಮಂಜೂರಾಗಿದ್ದು, 25 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ 16 ಹುದ್ದೆಗಳು ಖಾಲಿಯಿವೆ.

ಉಳವಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ವಂತ ಕಟ್ಟಡ ನಿರ್ಮಾಣ ತೆಗೆದುಕೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಗುಂದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ವಂತ ಕಟ್ಟಡ ಒದಗಿಸಬೇಕಾಗಿದೆ. ಉಳಿದ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡವನ್ನು ಒದಗಿಸಲಾಗಿದೆ.

**ಆ)** ಬಂದಿದೆ.

**ಇ)** ಪ್ರತಿಭಟನೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

**ಈ)** ಜೋಯಿಡಾ ತಾಲ್ಲೂಕಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು 2012 ನೇ ಸಾಲಿನಲ್ಲಿ 5 ಬಾರಿ ಭೇಟಿ ನೀಡಿರುತ್ತಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತ್ರೈಮಾಸಿಕ ಸಭೆ ನಡೆಸಿ ಹಾಗೂ ಸ್ಥಳ ಭೇಟಿ ಸಮಯದಲ್ಲಿ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳು ಸಮಯಕ್ಕೆ ಸರಿಯಾಗಿ ಆಸ್ಪತ್ರೆಯಲ್ಲಿ ಹಾಜರಿದ್ದು ರೋಗಿಗಳಿಗೆ ಅಗತ್ಯ ಚಿಕಿತ್ಸೆ ನೀಡುವಂತೆ ಸೂಚಿಸಿರುತ್ತಾರೆ.

## ಅನುಬಂಧ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ವೈದ್ಯರ, ತಜ್ಞ ವೈದ್ಯರ ಮತ್ತು ಇತರೇ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು:**

1. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.) ಮತ್ತು ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ.) ಅಡಿಯಲ್ಲಿ ಸ್ತ್ರೀರೋಗ್ಯ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹. 70,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹. 50,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

ಇ) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನೀಡುವಂತೆ ಆದಿವಾಸಿ ಮಕ್ಕಳಿಗೂ ವಿದ್ಯಾರ್ಥಿ ವೇತನವನ್ನು ಹಾಗೂ 7ನೇ ತರಗತಿ ಮತ್ತು 10ನೇ ತರಗತಿಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ಆದಿವಾಸಿ ಮಕ್ಕಳಿಗೆ ಅನುಕ್ರಮವಾಗಿ ರೂ.2500/- ಮತ್ತು ರೂ.500/- ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

ಅಲ್ಲದೆ ಆದಿವಾಸಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸಲು ಸದರಿ ಮಕ್ಕಳ ಪೋಷಕರಿಗೆ ವಾರ್ಷಿಕವಾಗಿ ರೂ.200/– ಗಳನ್ನು ಪ್ರೋತ್ಸಾಹ ಧನವಾಗಿ ಜೊತೆಗೆ ಮಕ್ಕಳ ಲೇಖನ ಸಾಮಾಗ್ರಿಗಳನ್ನು ಖರೀದಿಸಲು ವಾರ್ಷಿಕವಾಗಿ ರೂ.150/–ಗಳನ್ನು ನೀಡಲಾಗುತ್ತಿದೆ.

**ಮೆಟ್ರೋ ರೈಲು ಕುರಿತು**

**28; ಪ್ರೊ: ಎಂ.ಆರ್. ದೊರೆಸ್ವಾಮಿ (ನಾಮನಿರ್ದೇಶಿತರು)**

ಅ) ಬೆಂಗಳೂರು ನಗರದ ಹಾಲಿ ಜನಸಂಖ್ಯೆ ಮತ್ತು ಹೆಚ್ಚುತ್ತಿರುವ ಎಲ್ಲ ಬಗೆಯ ವಾಹನಗಳ ಸಂಖ್ಯೆಗಳ ಸಂಚಾರದ ಹಿನ್ನೆಲೆಯಲ್ಲಿ, ಮೆಟ್ರೋ ರೈಲಿನ ಎರಡನೇ ಹಂತವನ್ನು ತುರ್ತುಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಆ) ಮೆಟ್ರೋ ರೈಲಿನ ಎರಡನೇ ಹಂತವನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಮಿತಿಯನ್ನು ತಿಳಿಸುವುದು;

ಇ) ಈ ಎರಡನೇ ಹಂತಕ್ಕೆ ಖರ್ಚಾಗುವ ಒಟ್ಟು ಹಣವೆಷ್ಟು

ಈ) ಈ ಮೊತ್ತದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಪಾಲು ಎಷ್ಟು? ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಬೆಂಗಳೂರು ಮೆಟ್ರೋ ರೈಲು ಯೋಜನೆ ಎರಡನೇ ಹಂತದ (Phase-2) 72.095 ಕಿ.ಮೀ ಉದ್ದ ಮತ್ತು 61 ನಿಲ್ದಾಣಗಳನ್ನು ಹೊಂದಿದೆ. 2ನೇ ಹಂತಕ್ಕೆ ಕರ್ನಾಟಕ ಸರ್ಕಾರವು ಈಗಾಗಲೇ ತಾತ್ವಿಕ ಅನುಮೋದನೆಯನ್ನು ನೀಡಿದ್ದು, ಪ್ರಸ್ತಾವನೆಯನ್ನು ಭಾರತ ಸರ್ಕಾರದ ಹಣಕಾಸಿನ ಸಹಭಾಗಿತ್ವ ಮತ್ತು ಅನುಮೋದನೆಗಾಗಿ ಕಳುಹಿಸಲಾಗುತ್ತಿದೆ.

ಆ) ಎರಡನೇ ಹಂತದ ಅನುಷ್ಠಾನವನ್ನು 2012ರಲ್ಲಿ ಆರಂಭಿಸಿ 2017–18ರಲ್ಲಿ ಪೂರ್ಣಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ. ಹಂತ–2ರ ಅನುಷ್ಠಾನಕ್ಕೆ, ಭಾರತ ಸರ್ಕಾರದ ಅನುಮೋದನೆಯ ನಂತರ, 5 ವರ್ಷಗಳ ಕಾಲಾವಕಾಶ ಬೇಕಾಗುತ್ತದೆ.

ಇ) ಎರಡನೇ ಹಂತಕ್ಕೆ ಒಟ್ಟಾರೆ ಅಂದಾಜು ಯೋಜನಾ ವೆಚ್ಚ ರೂ. 26,405.14 ಕೋಟಿಗಳು.

ಈ) ಎರಡನೇ ಹಂತಕ್ಕೆ ಖರ್ಚಾಗುವ ಒಟ್ಟು 26,405.14 ಕೋಟಿಗಳಲ್ಲಿ ಕೇಂದ್ರ ಸರ್ಕಾರವು ರೂ. 6601.28 ಕೋಟಿಗಳನ್ನು ಮತ್ತು ರಾಜ್ಯ ಸರಕಾರವು ರೂ. 7921.54 ಕೋಟಿಗಳನ್ನು ಭರಿಸುವ ಪ್ರಸ್ತಾವನೆ ಇದೆ.

**ಬೆಂಗಳೂರಿನ 'ಟಾಗೂರ್ ವೃತ್ತದ' ಬಳಿ ಕೆ.ಆರ್. ರಸ್ತೆಯ "ಗ್ರೇಡ್ ಸಪರೇಟರ್" ಕುರಿತು**

**26; ಎಂ.ಆರ್. ದೊರೆಸ್ವಾಮಿ (ನಾಮ ನಿರ್ದೇಶಿತರು)**

ಅ) ಬೆಂಗಳೂರು ಬಸವನಗುಡಿಯ ಕೇಂದ್ರ ಪ್ರದೇಶದಲ್ಲಿರುವ ಟಾಗೂರ್ ವೃತ್ತದ ಬಳಿ ಕೆ.ಆರ್. ರಸ್ತೆಯಲ್ಲಿ ನಿಯೋಜಿಸಿರುವ ಗ್ರೇಡ್ ಸಪರೇಟರ್ ಕಾರ್ಯವು ಹಲವು ಕಾಲದಿಂದಲೂ ಸ್ಥಗಿತಗೊಂಡಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಕಾರ್ಯ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು;

ಇ) ಇದರಿಂದ ಸಾರ್ವಜನಿಕರಿಗೆ ಹಾಗೂ ದಿನನಿತ್ಯದ ಸಂಚಾರಿ ವ್ಯವಸ್ಥೆಗೆ ಹೆಚ್ಚಿನ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಕಾಮಗಾರಿಯು ಸ್ಥಗಿತಗೊಂಡಿರುವುದರಿಂದ ಸರ್ಕಾರದ ಹಣ ಮತ್ತು ಕಾಲ ವ್ಯಯವಾಗುತ್ತಿರುವುದರಿಂದ ಇದಕ್ಕೆ ಕಾಲಮಿತಿಯನ್ನೇನಾದರೂ ನಿಗಧಿಪಡಿಸಲಾಗಿದೆಯೇ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಬಸವನಗುಡಿಯ ಕೇಂದ್ರ ಪ್ರದೇಶದಲ್ಲಿರುವ 'ಟ್ಯಾಗೋರ್ ವೃತ್ತದ' ಬಳಿ ಕೆ.ಆರ್. ರಸ್ತೆಯಲ್ಲಿ ಕೆಳಸೇತುವೆ ನಿರ್ಮಾಣ ಮಾಡುತ್ತಿರುವ ಕಾಮಗಾರಿಯು ವಿಳಂಬವಾಗಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಈ ಕಾಮಗಾರಿಯನ್ನು ಜೆ.ಎನ್.ಎನ್.ಯು.ಆರ್.ಎಂ. ಯೋಜನೆ ಅಡಿಯಲ್ಲಿ ರೂ.1951.00 ಲಕ್ಷಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಕಾಮಗಾರಿಗೆ ದಿನಾಂಕ: 11–7–2008 ರಂದು ಕಾರ್ಯಾದೇಶ ನೀಡಲಾಗಿದೆ. ಆದರೆ ಸ್ಥಳೀಯ ಸಾರ್ವಜನಿಕರ ಪ್ರತಿಭಟನೆಯಿಂದ ಕಾಮಗಾರಿಯು ವಿಳಂಬವಾಗಿ ದಿನಾಂಕ: 25–10–2009 ರಲ್ಲಿ ಪ್ರಾರಂಭಿಸಲಾಗಿದೆ. ಕಾಮಗಾರಿಯ ಸ್ಥಳದಲ್ಲಿ ಬರುವ ನಾಗರಿಕ ಸೌಲಭ್ಯಗಳಾದ ನೀರು ಮತ್ತು ಒಳಚರಂಡಿ ಕೊಳವೆ, ವಿದ್ಯುತ್ ಕೇಬಲ್, ಟೆಲಿಫೋನ್ ಕೇಬಲ್‌ಗಳನ್ನು ಹಂತ ಹಂತವಾಗಿ ಸಂಬಂಧಪಟ್ಟ ಇಲಾಖೆಗಳ ಸಹಕಾರದೊಂದಿಗೆ ಸ್ಥಳಾಂತರ ಮಾಡಿದ ನಂತರ ಬದಲಿ ವಾಹನ ಸಂಚಾರವನ್ನು ಸಹ ಹಂತ ಹಂತವಾಗಿ ಮಾಡಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಈ ಕಾರಣಗಳಿಂದ ಕಾಮಗಾರಿಯು ವಿಳಂಬವಾಗಿರುತ್ತದೆ.

ಇ) ಸಾರ್ವಜನಿಕರಿಗೆ ಹಾಗೂ ದಿನನಿತ್ಯದ ವಾಹನ ಸಂಚಾರಿ ವ್ಯವಸ್ಥೆಗೆ ಹೆಚ್ಚಿನ ಹಾನಿ ಉಂಟಾಗದಂತೆ ಬದಲಿ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಿ ಬೆಂಗಳೂರು ಟ್ರಾಫಿಕ್ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಸಾರ್ವಜನಿಕರಿಗೆ ಹೆಚ್ಚಿನ ಅನಾನುಕೂಲತೆ ಆಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಸಹ ಕೈಗೊಳ್ಳಲಾಗಿರುತ್ತದೆ. ಈಗಾಗಲೇ ಒಂದು ಭಾಗದ ಅಂಡರ್‌ಪಾಸ್ ಕಾಮಗಾರಿಯ ಎರಡು ಬದಿ ಸರ್ವೀಸ್ ರಸ್ತೆಗಳನ್ನು ಪೂರ್ಣಗೊಳಿಸಿ ಸಾರ್ವಜನಿಕ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

**ಈ)** ಸದರಿ ಕಾಮಗಾರಿಯನ್ನು ಲಂಪ್‌ಸಂ ಟರ್ನ್‌ಕೀ ಆಧಾರದ ಮೇಲೆ ವಹಿಸಲಾಗಿರುವುದರಿಂದ ವಿಳಂಬದಿಂದಾಗಿ ಪಾಲಿಕೆಗೆ ಹೆಚ್ಚುವರಿ ಆರ್ಥಿಕ ಹೊರೆ ಇರುವುದಿಲ್ಲ. ವಿಳಂಬಕ್ಕೆ ಕಾರಣವಾಗಿರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಿಕೊಂಡು ಕಾಮಗಾರಿಯನ್ನು ತ್ವರಿತಗತಿಯಲ್ಲಿ ನಿರ್ವಹಿಸಲಾಗುತ್ತಿದೆ. ಕಾಮಗಾರಿಯು ಹಾಲಿ ಪ್ರಗತಿಯಲ್ಲಿದ್ದು, ಶೇಕಡ 80 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಉಳಿದ ಕಾಮಗಾರಿಯನ್ನು ಮಾರ್ಚ್ 2012ರ ಅಂತ್ಯದೊಳಗೆ ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ನೀಡಲು ಕಾಲಮಿತಿಯನ್ನು ನಿಗಧಿಪಡಿಸಿಕೊಳ್ಳಲಾಗಿದೆ.

**ಆಯುಷ್ ವೈದ್ಯರ ಅಲೋಪತಿ ಔಷಧಿಗಳನ್ನು ಬಳಸುವ ಬಗ್ಗೆ**

**54; ಶ್ರೀ ಮೋಹನ್ ಎ. ಲಿಂಬೀಕಾಯಿ (ಪದವೀಧರರ ಕ್ಷೇತ್ರ)**

**ಅ)** ರಾಜ್ಯದ ಆಯುಷ್ ಫೆಡರೇಷನ್ ಆಫ್ ಇಂಡಿಯಾ(ರಿ) ಸಂಘ, ಪದವೀಧರ ನೋಂದಾಯಿತ ಆಯುಷ್ ವೈದ್ಯರಿಗೆ ಮಹಾರಾಷ್ಟ್ರ ಸೇರಿ ಇತರೆ ರಾಜ್ಯಗಳಲ್ಲಿರುವಂತೆ ಆಲೋಪಥಿ ಔಷಧಗಳನ್ನು ಬಳಸಲು ಅನುಕೂಲವಾಗುವಂತೆ ಡ್ರಗ್ಸ್ ಮತ್ತು ಕಾಸ್ಮೆಟಿಕ್ಸ್ ಆಕ್ಟ್ 1940 ಅಂಡ್ 1945 ನಿಯಮ 2(ಇಇ) (iii)ಕ್ಕೆ ತಿದ್ದುಪಡಿ ಮಾಡಲು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದೆಯೇ;

**ಆ)** ಸರ್ಕಾರ ಈ ಬೇಡಿಕೆಯ ಬಗ್ಗೆ ತೀರ್ಮಾನಿಸಲು ಸಮಿತಿಯನ್ನೇನಾದರೂ ರಚಿಸಿದೆಯೇ; ಆ ಸಮಿತಿಯು ಸರ್ಕಾರಕ್ಕೆ ವರದಿಯನ್ನೇನಾದರೂ ಸಲ್ಲಿಸಿದೆಯೇ; ಸಲ್ಲಿಸಿರದಿದ್ದರೆ ಕಾರಣಗಳೇನು?

**ಇ)** ಪ್ರಸ್ತುತ ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಈವರೆಗೆ ಕೈಗೊಂಡ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** – ಹೌದು –

**ಆ)** – ಇಲ್ಲ –

ಉದ್ಭವಿಸುವುದಿಲ್ಲ.

**ಇ)** ದಿನಾಂಕ: 19.11.2011 ರಂದು ಈ ಬಗ್ಗೆ ಆಯುಷ್ ಫೆಡರೇಷನ್ ಆಫ್ ಇಂಡಿಯಾ(ರಿ) ಸಂಘ, ಇದರ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಚರ್ಚಿಸಲಾಗಿದೆ.

**ನಗರ ಪ್ರದೇಶದ ಖಾಲಿ ನಿವೇಶನ ತೆರಿಗೆ ಸಂಗ್ರಹಣೆ ಬಗ್ಗೆ**

**53; ಶ್ರೀ ಮೋಹನ್ ಎ. ಲಿಂಬೀಕಾಯಿ (ಪದವೀಧರರ ಕ್ಷೇತ್ರ)**

**ಅ)** ನಗರ ಪ್ರದೇಶಗಳಲ್ಲಿನ ಖಾಲಿ ನಿವೇಶನಗಳಿಗೆ ತೆರಿಗೆ ವಿಧಿಸಲಾಗುತ್ತಿದೆಯೇ; ಆ ಮೂಲದಿಂದ ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು ವಸೂಲಿ ಮಾಡಿದ ಹಣವೆಷ್ಟು;

**ಆ)** ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ಖಾಲಿ ನಿವೇಶನದ ಒತ್ತುವರಿ ಅಕ್ರಮವಾಗಿ ಕಟ್ಟಡ ನಿರ್ಮಾಣ, ಸ್ವಚ್ಛತೆ ಮತ್ತು ಭದ್ರತೆ ಕುರಿತು ಯಾವ ಕ್ರಮ ಕೈಗೊಳ್ಳುತ್ತಿದೆ.

**ಇ)** ನಿವೇಶನದ ಮಾಲೀಕರಿಗೆ ತಮ್ಮ ನಿವೇಶನ ಸುರಕ್ಷಿತವಿರುವ ಕುರಿತು ಸರ್ಕಾರದ ಬದ್ಧತೆಯೇನು?

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)**

**ಅ)** ಸರ್ಕಾರದ ಅಧಿಸೂಚನೆ ಸಂ:44 ದಿನಾಂಕ:7.3.2005 ರಂತೆ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ನಿವೇಶನಗಳಿಗೆ ತೆರಿಗೆ ವಸೂಲಿ ಮಾಡುವಂತಿರುವುದಿಲ್ಲ. ಒಂದು ಲಕ್ಷಕ್ಕೂ ಮೇಲ್ಪಟ್ಟು ಜನಸಂಖ್ಯೆಯಿರುವ (2001 ರ ಜನಗಣತಿ ಪ್ರಕಾರ) ಮಹಾನಗರ

ಪಾಲಿಕೆಗಳು ಹಾಗೂ ನಗರಸಭೆಗಳು ಕಳೆದ ಮೂರು ವರ್ಷಗಳಿಂದ ಖಾಲಿ ನಿವೇಶನಗಳಿಗೆ ವಸೂಲಿ ಮಾಡಿದ ತೆರಿಗೆ ವಿವರ ಈ ಕೆಳಕಂಡಂತೆ ಇದೆ.

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಮಹಾನಗರ ಪಾಲಿಕೆಗಳು | 3 ವರ್ಷಗಳಲ್ಲಿ ಖಾಲಿ ನಿವೇಶನಗಳಿಗೆ ವಸೂಲಿಸಿದ ಒಟ್ಟು ತೆರಿಗೆ | ನಗರಸಭೆಗಳು | 3 ವರ್ಷಗಳಲ್ಲಿ ಖಾಲಿ ನಿವೇಶನಗಳಿಗೆ ವಸೂಲಿಸಿದ ಒಟ್ಟು ತೆರಿಗೆ |
|---|---|---|---|---|
| 1. | ಮೈಸೂರು | 758.00 | ಬೀದರ್ | 27.16 |
| 2. | ಗುಲ್ಬರ್ಗಾ | 612.00 | ರಾಯಚೂರು | 68.15 |
| 3. | ಬಳ್ಳಾರಿ | 260.50 | ಚಿತ್ರದುರ್ಗ | 29.35 |
| 4. | ಹುಬ್ಬಳ್ಳಿ-ಧಾರವಾಡ | 604.69 | ತುಮಕೂರು | 82.51 |
| 5. | ದಾವಣಗೆರೆ | 58.69 | ಹಾಸನ | 68.60 |
| 6. | ಮಂಗಳೂರು | 61.54 | ಬಿಜಾಪುರ | 9.74 |
| 7. | ಬೆಳಗಾವಿ | 161.75 | ಚಿಕ್ಕಮಗಳೂರು | 21.43 |
| 8. | | | ಉಡುಪಿ | 19.84 |
| 9. | | | ಮಂಡ್ಯ | 56.39 |
| 10. | | | ಶಿವಮೊಗ್ಗ | 182.45 |
| 11. | | | ಕೋಲಾರ | 144.12 |
| 12. | | | ಕೆ.ಜಿ.ಎಫ್ | 17.15 |
| 13. | | | ಗದಗಬೆಟಗೇರಿ | 24.25 |
| 14. | | | ಭದ್ರಾವತಿ | 169.05 |
| 15. | | | ಹೊಸಪೇಟೆ | 9.82 |

ಆ) ಒತ್ತುವರಿ, ಅಕ್ರಮವಾಗಿ ಕಟ್ಟಡ ನಿರ್ಮಾಣ ಕಂಡು ಬಂದಲ್ಲಿ ನಗರ ಸ್ಥಳೀಯ ಸಂಸ್ಥೆಯಿಂದ ನೋಟೀಸ್ ಜಾರಿ ಮಾಡಿ ಕಾನೂನಿನ ರೀತ್ಯಾ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ನಗರಸಭೆಯ ನಿವೇಶನಗಳಿಗೆ ನಾಮಫಲಕಗಳನ್ನು ಅಳವಡಿಸಿ ಸ್ವಚ್ಛತೆಯನ್ನು ಕಾಪಾಡಲಾಗುತ್ತದೆ.

ಇ) ಖಾಸಗಿ ಖಾಲಿ ನಿವೇಶನಗಳನ್ನು ಸುರಕ್ಷಿತವಾಗಿಡಲು ನಿವೇಶನಗಳ ಮಾಲೀಕರೇ ಜವಾಬ್ದಾರರಾಗಿರುತ್ತಾರೆ.

**ಗ್ರಾಮ ಸಹಾಯಕರಿಗೆ ಕನಿಷ್ಟ ವೇತನಕ್ಕೊಳಪಡಿಸುವ ಬಗ್ಗೆ**

**136; ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ, ಕಂದಾಯ ಇಲಾಖೆಗಳಲ್ಲಿ ಗ್ರಾಮ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಕನಿಷ್ಟ ವೇತನಕ್ಕೊಳಪಡಿಸಲು ಸರ್ಕಾರ ವಿಳಂಬ ಮಾಡುತ್ತಿರುವುದು ನಿಜವೇ;

**ಆ)** ಕಡು ಬಡವರ ಮಧ್ಯೆ ದಿನನಿತ್ಯ ಕೆಲಸ ಮಾಡುವ ಗ್ರಾಮ ಸಹಾಯಕರಿಗೆ ಕನಿಷ್ಟ ವೇತನಕ್ಕೊಳಪಡಿಸಲು ಸರ್ಕಾರ ನಿರ್ಧಾರ ಕೈಗೊಳ್ಳುತ್ತಿದೆಯೇ; ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

**ಅ)** ಗ್ರಾಮಸಹಾಯಕ ಸಿಬ್ಬಂದಿಗಳನ್ನು ಕನಿಷ್ಟ ವೇತನಕ್ಕೆ ಒಳಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಆ)** ಗ್ರಾಮ ಸಹಾಯಕರ ಹುದ್ದೆಗಳು ಮಾಸಿಕ ಮಿತವೇತನದ ಆಧಾರದ ಮೇಲೆ ಮುಂದುವರೆದ ಹುದ್ದೆಗಳಾಗಿದ್ದು, ಇವರ ಮಾಸಿಕ ಮಿತವೇತನವನ್ನು ರೂ. 3000/-ದಿಂದ ರೂ.3500/-ಗಳಿಗೆ ದಿನಾಂಕ:01.04.2011 ರಿಂದ ಹೆಚ್ಚಿಸಲಾಗಿರುತ್ತದೆ.

**ಆಯುಷ್ ವೈದ್ಯಾಧಿಕಾರಿಗಳ ಖಾಯಂತಿ ಕುರಿತು**

**135; ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕರ್ನಾಟಕ ರಾಜ್ಯ ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಯುಷ್ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು

**ಆ)** ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳ ಕೊರತೆ ಇರುವ ಈ ಸಂದರ್ಭದಲ್ಲಿ ಕನಿಷ್ಟ 02 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿರುವ ಆಯುಷ್ ವೈದ್ಯಾಧಿಕಾರಿಗಳನ್ನು ಖಾಯಂಗೊಳಿಸುವ ನಿರ್ಧಾರ ಸರ್ಕಾರ ಕೈಗೊಳ್ಳಲಿದೆಯೇ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಸರ್ಕಾರಿ ಆಯುಷ್ ಚಿಕಿತ್ಸಾಲಯಗಳಲ್ಲಿ 138, ಎನ್.ಆರ್. ಹೆಚ್.ಎಂ. ಯೋಜನೆಯಡಿ 563, ಎಂ.ಬಿ.ಬಿ.ಎಸ್ ಎದುರು ಹುದ್ದೆಗಳಲ್ಲಿ 130 ಮತ್ತು ಕೇಂದ್ರ ಪುರಸ್ಕೃತ ಯೋಜನೆಯಡಿ 26 ಗುತ್ತಿಗೆ ಆಯುಷ್ ವೈದ್ಯರುಗಳು ಸೇರಿದಂತೆ ಒಟ್ಟು 857 ಗುತ್ತಿಗೆ ಆಯುಷ್ ವೈದ್ಯಾಧಿಕಾರಿಗಳು ಕರ್ನಾಟಕ ರಾಜ್ಯ ಸರ್ಕಾರಿ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯ 'ಉಮಾದೇವಿ' ಪ್ರಕರಣದಲ್ಲಿ ನೀಡಿದ ತೀರ್ಪಿನನ್ವಯ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

**ಕರಾವಳಿಗೆ ಜಿಲ್ಲೆಯ ಗೇರು ಲೀಸ್ ರೈತರ ಸಮಸ್ಯೆ ಕುರಿತು**

**487; ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಕರಾವಳಿ ಜಿಲ್ಲೆಗಳಲ್ಲಿ ಗೇರು ಲೀಸ್‌ನ ರೈತರು ಭೂಮಿಯ ಹಕ್ಕನ್ನು ಪಡೆದುಕೊಳ್ಳಲು ಒಂದು ಸಾವಿರ ಪಟ್ಟಾ ತೆರಿಗೆ ಹಣ ನೀಡಲು ಒಪ್ಪಿಗೆ ಸೂಚಿಸಿದ್ದು ಸದರಿ ಗೇರು ಲೀಸ್‌ನ ಅವಧಿ ಮುಗಿದು 25 ವರ್ಷಗಳಾದರೂ ಸರ್ಕಾರ ಸಂಬಂಧಿಸಿದ ರೈತರಿಗೆ ಭೂ ಹಕ್ಕು ನೀಡದಿರಲು ಕಾರಣವೇನು;

ಆ) ಹಾಗೆ ಭೂ ಹಕ್ಕು ನೀಡುವುದಾದರೆ ಸದರಿ ರೈತರಿಗೆ ಯಾವುದೇ ಷರತ್ತು ವಿಧಿಸಬಾರದೆಂಬ ರೈತರ ಮನವಿಗೆ ಸರ್ಕಾರದ ನಿಲುವೇನು;

ಇ) ಗೇರು ಲೀಸ್‌ದಾರರಿಗೆ ಪಟ್ಟಾ ನೀಡಲು ಸರ್ಕಾರ ಎಂದು ಕ್ರಮ ಕೈಗೊಳ್ಳಲಿದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು)**

ಅ) ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 23ರಡಿ ಗೇರು ಕೃಷಿಗಾಗಿ ಗುತ್ತಿಗೆ ಆಧಾರದ ಮೇಲೆ ನೀಡಲಾದ ಜಮೀನುಗಳನ್ನು ಗುತ್ತಿಗೆ ಅವಧಿ ಮುಗಿದ ನಂತರ, ಗುತ್ತಿಗೆ ಷರತ್ತುಗಳು ಪೂರೈಸಿದಲ್ಲಿ ಅಂತಹ ಜಮೀನುಗಳ ಮಂಜೂರಾತಿಯನ್ನು ಖಾಯಂಗೊಳಿಸುವ ವಿಷಯ ಮತ್ತು ಗೇರು ಕೃಷಿ ನಿಯಮಾವಳಿಯಲ್ಲಿ ನಮೂದಿಸಿರುವಂತೆ, ಇತ್ತೀಚಿನ ಮಾರುಕಟ್ಟೆ ದರ ವಿಧಿಸಬೇಕೆ ಅಥವಾ ಗೇರು ಲೀಸ್‌ಗೆ ನೀಡಿದ ಅವಧಿಯಲ್ಲಿದ್ದ, ಮಾರುಕಟ್ಟೆ ದರ ವಿಧಿಸಬೇಕೆ ಎಂಬ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

**ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ದರಕಾಸ್ತು ಭೂಮಿಯಲ್ಲಿ ವಾಸ್ತವ್ಯವಿರುವವರಿಗೆ ಭೂ ಹಕ್ಕು ನೀಡದಿರುವ ಬಗ್ಗೆ**

**488; ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಕುಮ್ಕಿ ಹಕ್ಕಿನ ದರಕಾಸ್ತು ಜಮೀನು ಅನುಭವ ಹೊಂದಿರುವ ಸಣ್ಣ ರೈತರಿಗೆ ಭು ಹಕ್ಕು ನೀಡುವ ಸರ್ಕಾರದ ಯೋಜನೆ ವಿಳಂಬವಾಗುತ್ತಿರುವುದೇಕೆ;

ಆ) ಭೂ ಹಕ್ಕು ನೀಡುವಾಗ ಕುಮ್ಕಿ ಹಕ್ಕಿನ ಭೂಮಿಯ ಬೇಡಿಕೆ ಹೊಂದಿದ ರೈತರಿಗೆ ಅನುಕೂಲವಾಗುವಂತೆ ಸರ್ಕಾರ ನಿಯಮಗಳನ್ನು ಸರಳೀಕರಣ ಮಾಡಲು ಕ್ರಮಕ್ಕೈಗೊಳ್ಳುವುದೇ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು)**

ಅ) ಕುಮ್ಕಿ ಜಮೀನು ಮಂಜೂರಾತಿ ಬಗ್ಗೆ ಅರ್ಜಿದಾರರು "ನಮೂನೆ 53" ರಲ್ಲಿ ದಿನಾಂಕ:30.04.99 ರೊಳಗೆ ಅರ್ಜಿ ಸಲ್ಲಿಸಿದವರಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 94 "ಬಿ" ರಂತೆ ಅಕ್ರಮ ಸಕ್ರಮ ಸಮಿತಿಯಲ್ಲಿ ಮಂಜೂರು ಮಾಡಲಾಗುತ್ತಿದೆ. ಆದರೆ, ಕೆಲವು ಪ್ರಕರಣಗಳು ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿರುವುದರಿಂದ ಅಂತಹ ಪ್ರಕರಣಗಳಲ್ಲಿ ಮಂಜೂರಾತಿಗೆ ವಿಳಂಬವಾಗುತ್ತಿದೆ.

ಇದಲ್ಲದೇ ಕುಮ್ಕಿ ಹಕ್ಕಿನ ಜಮೀನುಗಳನ್ನು ಮಂಜೂರು ಮಾಡದಂತೆ ಶ್ರೀ ಜಿ.ಕೆ. ಮಹಾಬಲೇಶ್ವರ ಭಟ್, ಅಧ್ಯಕ್ಷರು, ದಕ್ಷಿಣ/ಉಡುಪಿ ಜಿಲ್ಲೆಗಳ ಕಾನ, ಬಾಣೆ, ಕುಮ್ಕಿ ಜಮೀನುಗಳ ಹಕ್ಕುಗಳ ಅಧಿಬೋಗದಾರರ ವೇದಿಕೆ ಇವರು, ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:202/1995 ರಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ:2172–2174/2007 ಸಲ್ಲಿಸಿ ತಡೆಯಾಜ್ಞೆ ತಂದಿರುತ್ತದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

**ಬಡವರ ಮನೆಗೆ ಹಕ್ಕು ಪತ್ರ ನೀಡದಿರುವ ಬಗ್ಗೆ**

**489; ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿವಿಧ ಮಾದರಿ ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡು ಹಲವಾರು ವರ್ಷಗಳಿಂದ ಮನೆ ಕಟ್ಟಿಕೊಂಡು ಹಲವಾರು ವರ್ಷಗಳಿಂದ ವಾಸ್ತವ್ಯ ಮಾಡಿಕೊಂಡಿದ್ದರೂ ಹಕ್ಕು ಪತ್ರ ಸಿಗದೆ ಕಾಯುತ್ತಿರುವ ಬಡವರ ಸಂಖ್ಯೆ ಎಷ್ಟು; (ಪ್ರತಿ ತಾಲ್ಲೂಕುವಾರು ವಿವರ ನೀಡುವುದು)

ಆ) ಸದರಿ ಫಲಾನುಭವಿಗಳಿಗೆ ಎಷ್ಟು ದಿನಗಳಲ್ಲಿ ನಿವೇಶನದ ಹಕ್ಕು ಪತ್ರ ನೀಡಲಾಗುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು)**

**ಅ)** ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಹಲವಾರು ವರ್ಷಗಳಿಂದ ವಾಸ್ತವ್ಯ ಮಾಡಿಕೊಂಡಿದ್ದರೂ ಹಕ್ಕು ಪತ್ರ ಸಿಗದೆ ಕಾಯುತ್ತಿರುವ ಬಡವರ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

| **ತಾಲ್ಲೂಕು** | **ಬಡವರ ಸಂಖ್ಯೆ** |
|---|---|
| ಕುಂದಾಪುರ | 2866 |
| ಉಡುಪಿ | 534 |
| ಕಾರ್ಕಳ | 3083 |
| ಬ್ರಹ್ಮಾವರ | 2050 |
| ಬೈಂದೂರು | 439 |
| **ಒಟ್ಟು** | 8772 |

ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ, ಈ ಬಗ್ಗೆ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ.

**ಆ)** ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 94 “ಸಿ” ರಂತೆ ದಿನಾಂಕ:01.01.2002 ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ಕಲ್ಪಿಸಲಾಗಿತ್ತು. ಈ ದಿನಾಂಕದೊಳಗೆ ಸಲ್ಲಿಸಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಲಾಗುತ್ತದೆ.

**ಸ್ಥಳೀಯ ಸಂಸ್ಥೆಗಳ ಚುನಾವಣಾ ಸುಧಾರಣೆಗಳ ಕುರಿತು**

**252; ಶ್ರೀ ವಿ.ಆರ್. ಸುದರ್ಶನ್ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಸುಧಾರಣೆಯನ್ನು ತರುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ

ಆ) ಹಾಗಿದಲ್ಲಿ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ? (ಸ್ಥಳೀಯ ಸಂಸ್ಥೆಗಳು ಅಂದರೆ ಗ್ರಾಮ ಪಂಚಾಯತಿ/ತಾಲ್ಲೂಕ್ ಪಂಚಾಯಿತಿ/ ಜಿಲ್ಲಾ ಪಂಚಾಯಿತಿ/ಮಹಾನಗರ ಪಾಲಿಕೆಗಳು/ ನಗರಸಭೆಗಳು / ಪುರಸಭೆಗಳು ಇತ್ಯಾದಿ

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು)**

ಅ) ಹೌದು

ಆ) **ಈ ಕೆಳಕಂಡ ಸುಧಾರಣೆಗಳನ್ನು ತರಲಾಗಿದೆ**

1. ಮಹಾನಗರ ಪಾಲಿಕೆಗಳ ಮೇಯರ್ ಹಾಗೂ ಉಪಮೇಯರ್ ಚುನಾವಣೆಗಳನ್ನು ನಿಗಧಿತ ಸಮಯದಲ್ಲಿ ನಡೆಸಲು ನಿಯಮಗಳಿಗೆ ಸೂಕ್ತ ತಿದ್ದುಪಡಿ ತಂದು ಪ್ರಾದೇಶಿಕ ಆಯುಕ್ತರುಗಳಿಗೆ ಅಧಿಕಾರ ಪ್ರತಿಯೋಜಿಸಲಾಗಿದೆ.

2. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

3. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಚುನಾವಣೆಯ ವೆಚ್ಚದ ಬಗ್ಗೆ ಮಾಹಿತಿ ನೀಡಲು ಕ್ರಮ ವಹಿಸಲಾಗಿದೆ.

**ಈ ಕೆಳಕಂಡ ಸುಧಾರಣೆಗಳನ್ನು ತರಲು ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ.**

1. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚುನಾವಣಾ ವೆಚ್ಚ ಮಿತಿ ನಿಗಧಿಪಡಿಸುವ ಬಗ್ಗೆ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ.
2. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಸಭೆಗಳನ್ನು ಮತದಾನ ಮುಕ್ತಾಯವಾಗುವ 48 ಗಂಟೆಗಳೊಳಗೆ ಸಾರ್ವಜನಿಕ ಸಭೆ, ಸಮಾರಂಭ ನಡೆಸಬಾರದೆಂಬ ಬಗ್ಗೆ ತಿದ್ದುಪಡಿ ತರಲು ನಿಯಮಾನುಸಾರ ಕ್ರಮ ವಹಿಸಿದೆ.
3. ರಾಜ್ಯ ಚುನಾವಣಾ ಆಯೋಗಕ್ಕೆ ಹೆಚ್ಚುವರಿ ಸಿಬ್ಬಂದಿಯನ್ನು ನೀಡಲು ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.
4. ಆಗಿಂದಾಗಿ ರಾಜ್ಯ ಚುನಾವಣಾ ಆಯೋಗದಿಂದ ಸುಧಾರಣೆ ಬಗ್ಗೆ ಪ್ರಸ್ತಾಪಿಸುವ ವಿಷಯವನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುತ್ತಿದೆ.

## ಕ್ರೀಡಾಂಗಣ ನಿರ್ಮಾಣ ಕುರಿತು

**251; ಶ್ರೀ ವಿ.ಆರ್. ಸುದರ್ಶನ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಕೋಲಾರ ಜಿಲ್ಲೆಯ ವೇಮಗಲ್‌ನಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸರ್ಕಾರದ ಆದೇಶವಾಗಿದೆಯೇ

**ಆ)** ಈ ಕಾಮಗಾರಿಗೆ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನವೇನು? ಹಾಗೂ ಕಾಮಗಾರಿಯು ಯಾವ ಹಂತದಲ್ಲಿದೆ? (ವಿವರ ನೀಡುವುದು);

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಹೌದು

**ಆ)** ರೂ. 85.20 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಿಸಲು ದಿನಾಂಕ: 08–09–2011ರ ಸರ್ಕಾರದ ಆದೇಶದ ಮೂಲಕ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಮತ್ತು ರೂ. 25.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆ ಆರಂಭವಾಗಬೇಕಿದೆ.

**2011–12ನೇ ಸಾಲಿನ ಆಯವ್ಯಯದ ಪ್ರಗತಿ ಬಗ್ಗೆ**

**249; ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** 2011–12ನೇ ಸಾಲಿನ ಆಯವ್ಯಯದಲ್ಲಿ ಇಲ್ಲಿಯವರೆಗೆ ಆದ ಪ್ರಗತಿ ಏನು; ಈ ಬಗ್ಗೆ ಪೂರ್ಣ ವಿವರ ಒದಗಿಸುವುದು;

**ಆ)** ಪ್ರತಿಯೊಂದು ಇಲಾಖೆಯಲ್ಲಿ ಪ್ರತಿಶತ ಎಷ್ಟು ಕಾರ್ಯಗತಗೊಂಡಿದೆ; (ಪ್ರತಿಯೊಂದು ಇಲಾಖೆಯ ವಿವರಗಳನ್ನು ಒದಗಿಸುವುದು)

**ಇ)** 2011–12ನೇ ಸಾಲಿನಲ್ಲಿ ಆಯವ್ಯಯದ ಪೂರ್ತಿ ಹಣವನ್ನು ಹಣಕಾಸು ವರ್ಷ ಮುಗಿಯುವುದರ ಒಳಗೆ ವೆಚ್ಚ ಮಾಡುವ ವಿಶ್ವಾಸ ಸರ್ಕಾರಕ್ಕೆ ಇದೆಯೇ; (ಪೂರ್ಣ ವಿವರ ಒದಗಿಸುವುದು)

**ಈ)** ಆಯವ್ಯಯದಲ್ಲಿ ಮೀಸಲಿಟ್ಟ ಹಣವನ್ನು ಪೂರ್ತಿಯಾಗಿ ವೆಚ್ಚ ಮಾಡುವುದಕ್ಕೆ ಸರ್ಕಾರ ಕಾಲಕಾಲಕ್ಕೆ ತೆಗೆದುಕೊಂಡ ಕ್ರಮಗಳೇನು? (ಪೂರ್ಣ ವಿವರ ಒದಗಿಸುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

**ಅ) ಮತ್ತು ಆ)** ಅನುಬಂಧದಲ್ಲಿ ನೀಡಲಾಗಿದೆ.

**ಇ)** ಹೌದು. 2012–13ನೇ ಸಾಲಿನ ಆಯವ್ಯಯ ಮಂಡನೆಯ ವೇಳೆಗೆ ಅಂತಿಮಗೊಳ್ಳುವ ಪರಿಷ್ಕೃತ ಅಂದಾಜಿನಂತೆ, 2011–12ರ ಯೋಜನಾ ವೆಚ್ಚವನ್ನು ಮಾಡಲಾಗುವುದು.

**ಈ)** ಪ್ರತಿ ತಿಂಗಳ ಎಂಎಂಆರ್ ಮತ್ತು ಎಂಪಿಕ್ ಸಭೆಗಳಲ್ಲಿ ಯೋಜನೆಗಳ ಆರ್ಥಿಕ ಮುನ್ನಡೆ ಮತ್ತು ಭೌತಿಕ ಪ್ರಗತಿ ಇವುಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

| ಬೇಡಿಕೆಯ ವಿವರ | 11-12 ಆಯವ್ಯಯ ಯೋಜನೆ | ನವಂಬರ್ 11 ರ ಅಂತ್ಯಕ್ಕೆ ವೆಚ್ಚ - ಯೋಜನೆ | ಶೇಕಡಾವಾರು ಯೋಜನಾ ವೆಚ್ಚ | 11-12 ಆಯವ್ಯಯ ಯೋಜನೇತರ | ನವಂಬರ್ 11 ರ ಅಂತ್ಯಕ್ಕೆ ವೆಚ್ಚ - ಯೋಜನೇತರ | ಶೇಕಡಾವಾರು ಯೋಜನೇತರ ವೆಚ್ಚ |
|---|---|---|---|---|---|---|
| ಕೃಷಿ ಮತ್ತು ತೋಟಗಾರಿಕೆ | 2628 | 684 | 26 | 552 | 333 | 60 |
| ಪಶು ಸಂಗೋಪನೆ ಮತ್ತು ಮೀನುಗಾರಿಕೆ | 813 | 332 | 41 | 264 | 180 | 68 |
| ಆರ್ಥಿಕ ಇಲಾಖೆ | 18 | 9 | 52 | 6936 | 3829 | 55 |
| ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 80 | 28 | 36 | 447 | 244 | 55 |
| ಒಳಾಡಳಿತ ಮತ್ತು ಸಾರಿಗೆ | 378 | 117 | 31 | 2840 | 1603 | 56 |
| ಮೂಲಭೂತ ಸೌಕರ್ಯ ಅಭಿವೃದ್ಧಿ | 494 | 187 | 38 | 0 | 0 | 0 |
| ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ | 3045 | 1616 | 53 | 1340 | 522 | 39 |
| ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 207 | 81 | 39 | 769 | 309 | 40 |
| ಸಹಕಾರ | 433 | 281 | 65 | 125 | 78 | 62 |
| ಸಮಾಜ ಕಲ್ಯಾಣ | 2713 | 1087 | 40 | 551 | 397 | 72 |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 1687 | 980 | 58 | 712 | 593 | 83 |
| ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 367 | 130 | 35 | 61 | 37 | 60 |
| ಆಹಾರ ಮತ್ತು ನಾಗರೀಕ ಸರಬರಾಜು | 3 | 0 | 4 | 931 | 446 | 48 |
| ಕಂದಾಯ | 651 | 577 | 89 | 1764 | 1280 | 73 |
| ಮಾಹಿತಿ ತಂತ್ರಜ್ಞಾನ | 92 | 40 | 44 | 6 | 3 | 42 |
| ವಸತಿ | 1068 | 495 | 46 | 126 | 63 | 50 |
| ಶಿಕ್ಷಣ | 3051 | 1728 | 57 | 9233 | 6380 | 69 |
| ವಾಣಿಜ್ಯ ಮತ್ತು ಕೈಗಾರಿಕೆ | 674 | 200 | 30 | 783 | 196 | 25 |
| ನಗರಾಭಿವೃದ್ಧಿ | 3960 | 1067 | 27 | 2943 | 1007 | 34 |
| ಲೋಕೋಪಯೋಗಿ | 2502 | 1360 | 54 | 1246 | 779 | 63 |
| ಜಲ ಸಂಪನ್ಮೂಲ | 5988 | 2481 | 41 | 811 | 463 | 57 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 1617 | 789 | 49 | 1682 | 948 | 56 |
| ಕಾರ್ಮಿಕ | 400 | 115 | 29 | 152 | 93 | 61 |
| ಇಂದನ | 951 | 527 | 55 | 4334 | 2951 | 68 |
| ಕನ್ನಡ ಮತ್ತು ಸಂಸ್ಕೃತಿ | 213 | 57 | 27 | 49 | 30 | 61 |
| ಯೋಜನೆ, ಸಾಂಖ್ಯಿಕ ವಿಜ್ಞಾನ ಮತ್ತು ತಂತ್ರಜ್ಞಾನ | 579 | 257 | 44 | 53 | 24 | 45 |
| ಕಾನೂನು | 31 | 24 | 79 | 457 | 267 | 59 |
| ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | 0 | 0 | 0 | 96 | 62 | 64 |
| ಋಣ ಮೇಲುಸ್ತುವಾರಿ | 0 | 0 | 0 | 11412 | 5180 | 45 |
| ಒಟ್ಟು | **34643** | **15250** | **44** | **50675** | **28298** | **56** |

ಟಿಪ್ಪಣಿ: ನವೆಂಬರ್ 2011ರ ಅಂತ್ಯದ ಲೆಕ್ಕವು ಮಹಾಲೇಖಪಾಲರು ಒದಗಿಸಿರುವ ಮಾಸಿಕ ಸಿವಿಲ್ ಲೆಕ್ಕವನ್ನಾಧರಿಸಿದೆ.

## ನೆರಹಾವಳಿಯಿಂದ ಹಾನಿಗೀಡಾದ ಗ್ರಾಮಗಳ ಸ್ಥಳಾಂತರದ ಬಗ್ಗೆ

**253; ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ನೆರೆ ಹಾವಳಿಯಿಂದ ಹಾನಿಗೀಡಾದ ಎಷ್ಟು ಗ್ರಾಮಗಳನ್ನು ಸ್ಥಳಾಂತರಿಸಲು ತೀರ್ಮಾನಿಸಲಾಗಿದೆ ಹಾಗೂ ಎಷ್ಟು ಗ್ರಾಮಗಳನ್ನು ಇದುವರೆಗೂ ಸಂಪೂರ್ಣವಾಗಿ ಸ್ಥಳಾಂತರಿಸಲಾಗಿದೆ;

**ಆ)** ಇದರಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಗ್ರಾಮವನ್ನು ಸ್ಥಳಾಂತರಿಸಲಾಗಿದೆ;

**ಇ)** ಭಾಗಶ: ಸ್ಥಳಾಂತರಿಸಲು ಎಷ್ಟು ಗ್ರಾಮಗಳನ್ನು ಗುರುತಿಸಲಾಗಿದೆ ಹಾಗೂ ಸ್ಥಳಾಂತರಿಸುವ ಗ್ರಾಮಗಳ ಸಂಖ್ಯೆ ಎಷ್ಟು;

**ಈ)** ಗ್ರಾಮಗಳ ಸ್ಥಳಾಂತರಕ್ಕಾಗಿ ಇದುವರೆವಿಗೂ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಬಿಡುಗಡೆಯಾದ ಹಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** 289 ಸ್ಥಳಾಂತರಿಸುವ ಗ್ರಾಮಗಳು

149 ಪೂರ್ಣವಾಗಿ ಸ್ಥಳಾಂತರಿಸುವ ಗ್ರಾಮಗಳು

140 ಭಾಗಶ:ವಾಗಿ ಸ್ಥಳಾಂತರಿಸುವ ಗ್ರಾಮಗಳು

147 ಫಲಾನುಭವಿಗಳಿಗೆ ಹಸ್ತಾಂತರಿಸಿರುವ ಗ್ರಾಮಗಳು

**ಆ)** 3 ಪೂರ್ಣ ಸ್ಥಳಾಂತರಿಸುವ ಗ್ರಾಮಗಳು

17 ಬಾಗಶ: ಸ್ಥಳಾಂತರಿಸುವ ಗ್ರಾಮಗಳು

**ಇ)** 17 ಗ್ರಾಮಗಳನ್ನು ಭಾಗಶ: ಸ್ಥಳಾಂತರಿಸಲು ಗುರುತಿಸಲಾಗಿದೆ.

20 ಸ್ಥಳಾಂತರಿಸುವ ಗ್ರಾಮಗಳು.

**ಈ)** ಬಿಡುಗಡೆ ಮಾಡಲಾದ ಹಣ – ರೂ. 4538.65 ಲಕ್ಷ

ಖರ್ಚು ಮಾಡಲಾದ ಹಣ – ರೂ. 4383.96 ಲಕ್ಷ

## ಆರೋಗ್ಯ ಇಲಾಖೆಯಿಂದ ವಿವಿಧ ಯೋಜನೆಗಳಿಂದ ಲಾಭ ಪಡೆದಿರುವ ಫಲಾನುಭವಿಗಳ ಬಗ್ಗೆ

**320; ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಆರೋಗ್ಯ ಇಲಾಖೆಯಲ್ಲಿರುವ ವಿವಿಧ ಯೋಜನೆಗಳಾವುವು;

ಆ) ಯಾವ ಯಾವ ಯೋಜನೆಗಳಿಂದ ಎಷ್ಟು ಫಲಾನುಭವಿಗಳು ಪ್ರಯೋಜನವನ್ನು ಪಡೆದಿದ್ದಾರೆ;

ಇ) ಇದರಡಿ ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳು ಇದರ ಪ್ರಯೋಜನವನ್ನು ಪಡೆದಿದ್ದಾರೆ? (ತಾಲ್ಲೂಕುವಾರು ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

ಅ) **ಮತ್ತು ಆ)** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಫಲಾನುಭವಿಗಳಿಗೆ ನೇರವಾಗಿ ತಲುಪುತ್ತಿರುವ 12 ಪ್ರಮುಖ ಕಾರ್ಯಕ್ರಮಗಳಿವೆ. ಅವುಗಳ ವಿವರಗಳು ಹಾಗು ಫಲಾನುಭವಿಗಳ ಸಂಖ್ಯೆ ಕೆಳಕಂಡಂತಿವೆ:

| ಯೋಜನೆ | ಫಲಾನುಭವಿಗಳ ಸಂಖ್ಯೆ (ಡಿಸೆಂಬರ್ 2011 ರ ವರೆಗೆ) |
|---|---|
| 1. ಪ್ರಸೂತಿ ಆರೈಕೆ | 3,67,269 |
| 2. ಮಡಿಲು | 2,34,724 |
| 3. ತಾಯಿಭಾಗ್ಯ | 30,121 |
| 4. ಜನನಿ ಸುರಕ್ಷಾ | 3,08,809 |
| 5. ಸುವರ್ಣ ಆರೋಗ್ಯ ಚೈತನ್ಯ | 777 (ಶಸ್ತ್ರ ಚಿಕಿತ್ಸೆಗಳು) |
| 6. ಆರೋಗ್ಯ ಕವಚ | 4,01,889 |
| 7. ಡಯಾಲಿಸೀಸ್ | 430 |
| 8. ಟೆಲಿಮೆಡಿಸನ್ | 10,219 |
| 9. ವಾಜಪೇಯಿ ಆರೋಗ್ಯಶ್ರೀ | 8,465 |
| 10. ಹಿರಿಯ ನಾಗರಿಕರಿಗೆ ಚಿಕಿತ್ಸೆ | 6,122 |
| 11. ಸುಟ್ಟಗಾಯಕ್ಕೆ ಚಿಕಿತ್ಸೆ | 862 |
| 12. ಹೆಚ್ಚುವರಿ ತಾಯಿಭಾಗ್ಯ | 7,819 |

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಆಸ್ಪತ್ರೆಗಳು/ಸಂಸ್ಥೆಗಳಡಿ ಬೆಳಗಾಂ ಜಿಲ್ಲೆಯಲ್ಲಿ ಪ್ರಸೂತಿ ಆರೈಕೆ, ಮಡಿಲು, ಜನನಿ ಸುರಕ್ಷಾ ಯೋಜನೆ, ಸುವರ್ಣ ಆರೋಗ್ಯ ಚೈತನ್ಯ, ಆರೋಗ್ಯ ಕವಚ, ವಾಜಪೇಯಿ ಆರೋಗ್ಯಶ್ರೀ ಮತ್ತು ಹೆಚ್ಚುವರಿ ತಾಯಿಭಾಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಗಳಡಿ ಪ್ರಯೋಜನ ಪಡೆದ ಫಲಾನುಭವಿಗಳ ತಾಲ್ಲೂಕು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಬೆಳಗಾಂ ಜಿಲ್ಲೆಯಲ್ಲಿ ಕೆಳಕಂಡ ಯೋಜನೆಗಳ ಸದುಪಯೋಗವನ್ನು ಫಲಾನುಭವಿಗಳು ಪಡೆದಿದ್ದಾರೆ (ತಾಲ್ಲೂಕುವಾರು ವಿವರ ನೀಡಲಾಗಿದೆ)

| ಅ.ಸಂ | ತಾಲ್ಲೂಕು | ಪ್ರಸೂತಿ ಆರೈಕೆ | ತಾಯಿಭಾಗ್ಯ ಪ್ಲಸ್ | ಮಡಿಲು | ಜನನಿ ಸುರಕ್ಷಾ ಯೋಜನೆ | ಸುವರ್ಣ ಆರೋಗ್ಯ ಚೈತನ್ಯ | ವಾಜಪೇಯಿ ಆರೋಗ್ಯ ಶ್ರೀ | ಆರೋಗ್ಯ ಕವಚ |
|---|---|---|---|---|---|---|---|---|
| 1. | ಅಥಣಿ | 6495 | 0 | 740 | 2358 | 16 | – | – |
| 2. | ಬೈಲಹೊಂಗಲ | 8120 | 104 | 1322 | 2814 | 13 | – | – |
| 3. | ಬೆಳಗಾವಿ | 7500 | 239 | 500 | 3126 | 21 | 5034 | 34569 |
| 4. | ಚಿಕ್ಕೋಡಿ | 11211 | 368 | 920 | 4732 | 7 | – | – |
| 5. | ಗೋಕಾಕ | 8172 | 821 | 1035 | 4277 | 10 | – | – |
| 6. | ಹುಕ್ಕೇರಿ | 6988 | 211 | 815 | 2708 | 9 | – | – |
| 7. | ಖಾನಾಪುರ | 2766 | 16 | 549 | 1353 | 5 | – | – |
| 8. | ರಾಮದುರ್ಗ | 4759 | 170 | 524 | 1887 | 7 | – | – |
| 9. | ರಾಯಭಾಗ | 4794 | 89 | 613 | 2001 | 9 | – | – |
| 10. | ಸವದತ್ತಿ | 7444 | 112 | 1005 | 2017 | 5 | – | – |
| | ಒಟ್ಟು | 68249 | 2130 | 8023 | 27273 | 102 | 5034 | 34569 |

## ಮಹಾನಗರಪಾಲಿಕೆ, ನಗರಸಭೆ, ಪುರಸಭೆಯಲ್ಲಿ ತ್ಯಾಜ್ಯ ನಿರ್ವಹಣೆಯ ಕುರಿತು

## 412; ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)

ಅ) ಮಹಾನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯ್ತಿ ಈ ಎಲ್ಲಾ ಜನನಿಬಿಡ ಪ್ರದೇಶಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ನಿರ್ವಹಣೆಯ ಕುರಿತಾಗಿ ಸರ್ಕಾರ ಸಿದ್ದಪಡಿಸಿರುವ ಯೋಜನೆ ಏನು;

ಆ) ಘನತ್ಯಾಜ್ಯದ ಅಸಮರ್ಪಕ ನಿರ್ವಹಣೆಯಿಂದ ಉಂಟಾಗುತ್ತಿರುವ ವಿವಿಧ ಸಮಸ್ಯೆಗಳೇನು;

ಇ) ಮಹಾನಗರಪಾಲಿಕೆಗಳಲ್ಲಿ ಮತ್ತು ನಗರಸಭೆಗಳಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿನ ದೊಡ್ಡ ಪ್ರಮಾಣದ ಅವ್ಯವಹಾರ ಸರ್ಕಾರದ ಗಮನದಲ್ಲಿದೆಯೇ;

ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮ ಏನು;

ಉ) ವೈಜ್ಞಾನಿಕವಾಗಿ ಘನ ತ್ಯಾಜ್ಯ ನಿರ್ವಹಣೆಯಿಂದ ಘನ ತ್ಯಾಜ್ಯ ಒಂದು ಇಂಧನ ಮೂಲವಾಗಿ ಸಾವಯವ ಸಂಪನ್ಮೂಲವಾಗಿ ಪರಿವರ್ತಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳೇನು?

### ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

ಅ) ರಾಜ್ಯದ ಎಲ್ಲಾ ನಗರಸ್ಥಳೀಯ ಸಂಸ್ಥೆಗಳು, ತಮ್ಮ ತಮ್ಮ ವ್ಯಾಪ್ತಿಯಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಪೌರಘನತ್ಯಾಜ್ಯ ವಸ್ತುಗಳನ್ನು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಭಾರತ ಸರ್ಕಾರವು ಜಾರಿಗೆ ತಂದಿರುವ ಪೌರಘನತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು 2000 ರೀತ್ಯಾ ವ್ಯವಸ್ಥಿತವಾಗಿ ಹಾಗೂ ವೈಜ್ಞಾನಿಕವಾಗಿ ನಿರ್ವಹಿಸಲು ರಾಜ್ಯ ಸರ್ಕಾರವು 2004ರಲ್ಲಿ 'ಕರ್ನಾಟಕ ಪೌರ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ರಾಜ್ಯನೀತಿ'ಯನ್ನು ಜಾರಿಗೊಳಿಸಿರುತ್ತದೆ. ಅದರಂತೆ, ರಾಜ್ಯದ ವಿವಿಧ ನಗರಸ್ಥಳೀಯ

ಸಂಸ್ಥೆಗಳ ವ್ಯಾಪ್ತಿಯಲ್ಲಿ, ಮೂಲದಲ್ಲಿಯೇ ತ್ಯಾಜ್ಯ ವಸ್ತುಗಳನ್ನು ಹಸಿಕಸ ಮತ್ತು ಒಣಕಸ ಎಂದು ಕನಿಷ್ಟ ಎರಡು ವಿಧವಾಗಿ ವಿಂಗಡಿಸಿಡಲು, ಮನೆ–ಮನೆಗಳಿಂದಲೇ ನೇರವಾಗಿ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಲು, ನಂತರ ತ್ಯಾಜ್ಯ ವಸ್ತುಗಳ ದ್ವಿತೀಯ ಹಂತದ ಸಾಗಾಣಿಕೆಗಾಗಿ 3.0 ಘ.ಮೀ. ಮತ್ತು 4.5 ಘ.ಮೀ. ಇತ್ಯಾದಿ ಸಾಮರ್ಥ್ಯದ ಕಂಟೈನರ್‌ಗಳಲ್ಲಿ ಸಂಗ್ರಹಿಸಲು ಹಾಗೂ ಅವುಗಳನ್ನು ಡಂಪರ್ ಪ್ಲೇಸರ್/ಟ್ರ್ಯಾಕ್ಟರ್ ಪ್ಲೇಸರ್ ವಾಹನಗಳನ್ನು ಬಳಸಿ ಯಾಂತ್ರಿಕೃತವಾಗಿ ನೆಲಭರ್ತಿ ಜಾಗಕ್ಕೆ ಕೊಂಡೊಯ್ಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ಪೌರಘನತ್ಯಾಜ್ಯ ವಸ್ತು ನಿಯಮಗಳ ರೀತ್ಯಾ ಪ್ರತಿಯೊಂದು ನಗರಸ್ಥಳೀಯ ಸಂಸ್ಥೆಗಳೂ ಅಗತ್ಯ ನೆಲಭರ್ತಿ ಜಾಗವನ್ನು ಹೊಂದಬೇಕಾಗಿದ್ದು, ಅದರಂತೆ ರಾಜ್ಯದಲ್ಲಿರುವ ಒಟ್ಟು 213 ನಗರಸ್ಥಳೀಯ ಸಂಸ್ಥೆಗಳ ಪೈಕಿ ಈಗಾಗಲೇ 206 ನಗರಸ್ಥಳೀಯ ಸಂಸ್ಥೆಗಳು ತ್ಯಾಜ್ಯ ವಿಲೇವಾರಿಗಾಗಿ ಅಗತ್ಯ ನೆಲಭರ್ತಿ ಜಾಗಗಳನ್ನು ಹೊಂದಿರುತ್ತವೆ. ವಿಜಯಪುರ ಪುರಸಭೆ, ಉಳ್ಳಾಲ ಪುರಸಭೆ ಹಾಗೂ ಸಾಲಿಗ್ರಾಮ ಪಟ್ಟಣ ಪಂಚಾಯಿತಿಗಳು ಕ್ರಮವಾಗಿ ಸಮೀಪವಿರುವ ದೇವನಹಳ್ಳಿ ಪುರಸಭೆ, ಮಂಗಳೂರು ಮಹಾನಗರ ಪಾಲಿಕೆ ಮತ್ತು ಉಡುಪಿ ನಗರಸಭೆಗಳ ನೆಲಭರ್ತಿ ಜಾಗದಲ್ಲಿ ಜಂಟಿಯಾಗಿ ತ್ಯಾಜ್ಯ ವಿಲೇವಾರಿಯನ್ನು ಮಾಡುತ್ತಿವೆ. ಇನ್ನುಳಿದಂತೆ ತುಮಕೂರು, ದಾಂಡೇಲಿ, ಶಿಗ್ಗಾಂವ್ ಮತ್ತು ಕುಮಟಾ, ಈ 4 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಗತ್ಯ ನೆಲಭರ್ತಿ ಜಾಗವನ್ನು ಹೊಂದಲು ಕ್ರಮ ಕೈಗೊಳ್ಳಲಾಗುತ್ತಿದೆ. ನೆಲಭರ್ತಿ ಜಾಗದಲ್ಲಿ ಅಗತ್ಯ ಸಂಪರ್ಕ ರಸ್ತೆ, ಕಾಂಪೌಂಡ್ ಗೋಡೆ, ಜಾಗದ ಸುತ್ತಲೂ ಮರಗಿಡಗಳನ್ನು ಬೆಳೆಸುವುದು, ಕಾವಲುಗಾರರ ಮನೆ, ಬೋರ್‌ವೆಲ್/ನೀರಿನ ಸಂಪರ್ಕ ಆಂತರಿಕ ರಸ್ತೆ ನಿರ್ಮಾಣ, ಇತ್ಯಾದಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗಿರುತ್ತದೆ.

ಹಸಿಕಸ ಅಥವಾ ಮಿಶ್ರಿತ ತ್ಯಾಜ್ಯ ವಸ್ತುಗಳನ್ನು ವಿಂಡ್‌ರೋ ವಿಧಾನ ಹಾಗೂ ಎರೆಹುಳು ವಿಧಾನ ಅನುಸರಿಸಿ ಸಂಸ್ಕರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದಕ್ಕಾಗಿ ವಿಂಡರೋ ಕಾಂಕ್ರೀಟ್ ಪ್ಲಾಟ್‌ಫಾರ್ಮ್ ಹಾಗೂ ಎರೆಹುಳು ಗೊಬ್ಬರದ ಶೆಡ್‌ಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಅಂತಿಮವಾಗಿ ಉಳಿಯುವ ನಿರುಪಯುಕ್ತ ತ್ಯಾಜ್ಯ ವಸ್ತುಗಳನ್ನು, ಲೀಚೆಟ್ ದ್ರವವು ಅಂತರ್ಜಲದೊಂದಿಗೆ ಬೆರೆಯದಂತೆ ತಡೆಯಲು ಹೆಚ್.ಡಿ.ಪಿ.ಇ. ಲೈನರ್‌ವುಳ್ಳ ಲ್ಯಾಂಡ್‌ಫಿಲ್ ಪಿಟ್‌ಗಳನ್ನು ನಿರ್ಮಿಸಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಲೀಚೆಟ್ ಟ್ಯಾಂಕ್‌ಗಳನ್ನು ನಿರ್ಮಿಸಿ ದ್ರವವನ್ನು ಸಂಗ್ರಹಿಸಿ ಸಂಸ್ಕರಣೆಗೊಳಿಸಲಾಗುತ್ತಿದೆ.

**ಆ)** ಘನತ್ಯಾಜ್ಯದ ಅಸಮರ್ಪಕ ನಿರ್ವಹಣೆಯಿಂದಾಗಿ ಈ ಕೆಳಕಂಡ ಸಮಸ್ಯೆಗಳು ಉಂಟಾಗಬಹುದಾಗಿದೆ;

ತ್ಯಾಜ್ಯ ವಸ್ತುಗಳಿಂದ ಉತ್ಪತ್ತಿಯಾಗುವ ಲೀಚೆಟ್ ದ್ರವವು ಅಂತರ್ಜಲದೊಂದಿಗೆ ಬೆರೆತಲ್ಲಿ ಪರಿಸರ ಮಾಲಿನ್ಯವುಂಟಾಗುತ್ತದೆ.

ನೊಣ, ಸೊಳ್ಳೆಗಳ ಉತ್ಪತ್ತಿ ಅಧಿಕವಾಗಿ ಇದರಿಂದ ರೋಗ-ರುಜಿನಗಳು ಹರಡುವ ಸಾಧ್ಯತೆ ಹೆಚ್ಚಾಗುತ್ತದೆ.

ತ್ಯಾಜ್ಯ ವಸ್ತುಗಳು, ಹಂದಿ, ನಾಯಿ ಇತ್ಯಾದಿ ಪ್ರಾಣಿಗಳನ್ನು ಆಕರ್ಷಿಸುತ್ತವೆ ಹಾಗೂ ಇದರಿಂದ ಸಾರ್ವಜನಿಕರಿಗೆ ಅನಗತ್ಯ ಉಪಟಳವುಂಟಾಗುತ್ತದೆ.

ತ್ಯಾಜ್ಯ ವಸ್ತುಗಳನ್ನು ಬಹಳ ದಿನಗಳವರೆಗೆ ವಿಲೇವಾರಿ ಮಾಡದಿದ್ದಲ್ಲಿ ಇದರಿಂದ ದುರ್ನಾತ ಹಬ್ಬಿ ಸಾರ್ವಜನಿಕರಿಗೆ ಉಪಟಳವುಂಟಾಗುತ್ತದೆ.

ಅಸಮರ್ಪಕ ತ್ಯಾಜ್ಯ ವಸ್ತುಗಳ ನಿರ್ವಹಣೆಯಿಂದಾಗಿ ತ್ಯಾಜ್ಯ ವಸ್ತುಗಳಿಂದ ಗಳಿಸಬಹುದಾದ ಆರ್ಥಿಕ ಸಂಪನ್ಮೂಲವು ನಷ್ಟವಾಗುತ್ತದೆ.

ಇ) ರಾಜ್ಯದಲ್ಲಿರುವ ಮಹಾನಗರಪಾಲಿಕೆಗಳು (ಬಿ.ಬಿ.ಎಂ.ಪಿ. ಹೊರತುಪಡಿಸಿ) ಹಾಗೂ ನಗರಸಭೆಗಳಿಂದ ಘನತ್ಯಾಜ್ಯ ನಿರ್ವಹಣೆಯಲ್ಲಿ ಯಾವುದೇ ಅವ್ಯವಹಾರವಾಗಿರುವ ಬಗ್ಗೆ ಪೌರಾಡಳಿತ ನಿರ್ದೇಶನಾಲಯಕ್ಕೆ ವರದಿಯಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಈಗಾಗಲೇ ರಾಜ್ಯದ 8 ನಗರಸ್ಥಳೀಯ ಸಂಸ್ಥೆಗಳಲ್ಲಿ ಪೌರಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳ ರೀತ್ಯಾ ವೈಜ್ಞಾನಿಕ ತ್ಯಾಜ್ಯ ವಸ್ತುಗಳ ವಿಲೇವಾರಿ ಸೌಲಭ್ಯಗಳನ್ನು ಸ್ಥಾಪಿಸಲಾಗಿರುತ್ತದೆ. ಇನ್ನುಳಿದಂತೆ 11 ಪ್ರಮುಖ ನಗರಸ್ಥಳೀಯ ಸಂಸ್ಥೆಗಳಲ್ಲಿ ಸಮಗ್ರ ತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ವಿಲೇವಾರಿ ಸೌಲಭ್ಯಗಳನ್ನು ಬಿ.ಓ.ಟಿ. ಆಧಾರದ ಮೇಲೆ ನಿರ್ವಹಿಸಲು 'ಎಕ್ಸ್‌ಪ್ರೆಶನ್ ಆಫ್ ಇಂಟರೆಸ್ಟ್' ನ್ನು ಆಹ್ವಾನಿಸಿದ್ದು ಅರ್ಹ ಹಾಗೂ ಸೂಕ್ತ ಸೇವೆ ಒದಗಿಸುವವರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

**ಒಳಚರಂಡಿ ವ್ಯವಸ್ಥೆ ಇರದ ನಗರಗಳ ಬಗ್ಗೆ**

**413; ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)**

ಅ) ರಾಜ್ಯದಲ್ಲಿ ಒಳಚರಂಡಿ ವ್ಯವಸ್ಥೆ ಇರುವ ನಗರಗಳ ಸಂಖ್ಯೆ ಎಷ್ಟು;

ಆ) ಇನ್ನುಳಿದ ನಗರಗಳಲ್ಲಿ ನಾಗರೀಕ ಸೌಲಭ್ಯಗಳಲ್ಲಿ ಅತ್ಯಂತ ಪ್ರಮುಖ ಸೌಲಭ್ಯವಾದ ಈ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮ ಏನು ಃ ಮತ್ತು ಇದಕ್ಕೆ ಅಗತ್ಯವಿರುವ ಸಂಪನ್ಮೂಲ ಒದಗಿಸಲು ಸರ್ಕಾರದ ಮುಂದಿರುವ ಯೋಜನೆಗಳೇನು?

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)**

**ಅ)** ರಾಜ್ಯದ 42 ನಗರ/ ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ.

**ಆ)** ರಾಜ್ಯದ ಇನ್ನುಳಿದ 171 ನಗರ/ಪಟ್ಟಣಗಳ ಪೈಕಿ 38 ನಗರ/ಪಟ್ಟಣಗಳ ಒಳಚರಂಡಿ ಯೋಜನೆಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 2011–12 ನೇ ಸಾಲಿನಲ್ಲಿ 9 ನಗರ/ ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರದಿಂದ ಅನುಮೋದನೆ ದೊರೆತಿರುತ್ತದೆ. ಅದರಂತೆ ಸದರಿ ನಗರ / ಪಟ್ಟಣಗಳ ಒಳಚರಂಡಿ ಯೋಜನೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇನ್ನುಳಿದ 124 ನಗರ/ಪಟ್ಟಣಗಳ ಒಳಚರಂಡಿ ಯೋಜನೆಗಳನ್ನು ಮುಂದಿನ ಹತ್ತು ವರ್ಷಗಳಲ್ಲಿ ಹಣಕಾಸಿನ ಸೌಲಭ್ಯದ ಆಧಾರದ ಮೇಲೆ ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

**ಯಳಂದೂರು ಪಟ್ಟಣದಲ್ಲಿ ಹೊಸ ನೀರಿನ ಟ್ಯಾಂಕ್ ನಿರ್ಮಾಣದ ಬಗ್ಗೆ**

**507; ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಯಳಂದೂರು ಪಟ್ಟಣದಲ್ಲಿರುವ ಹಳೆಯ ನೀರಿನ ಟ್ಯಾಂಕ್ ಶಿಥಿಲಗೊಂಡು ಕುಸಿದು ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹಾಗಿದ್ದಲ್ಲಿ, ಕೂಡಲೇ ಇದರ ತಾತ್ಕಾಲಿಕ ದುರಸ್ತಿಗೆ ಕ್ರಮ ಕೈಗೊಂಡು ಸಂಭವನೀಯ ಅಪಾಯವನ್ನು ತಡೆಗಟ್ಟಲಾಗುವುದೇ;

**ಇ)** ಈ ಟ್ಯಾಂಕ್‌ನ್ನು ಕೆಡವಿ ಅದರ ಬದಲಿಗೆ ದೊಡ್ಡ ಪ್ರಮಾಣದ ಹೊಸ ನೀರಿನ ಟ್ಯಾಂಕ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ;

**ಈ)** ಈ ನೀರಿನ ಟ್ಯಾಂಕ್‌ಗೆ ಸೇರಿದ ಜಾಗವನ್ನು ಗುರುತಿಸಿ ಕಾಂಪೌಡ್ ನಿರ್ಮಿಸಿ ಈ ಜಾಗವನ್ನು ಶುಚಿಯಾಗಿಡಲು ಕ್ರಮ ತೆಗೆದುಕೊಳ್ಳಲಾಗುವುದೆ;

**ಉ)** ಚಾಮರಾಜನಗರ ನಗರಸಭೆಯ ಹತ್ತನೇ ವಾರ್ಡಿನ ಸಿದ್ದಾರ್ಥನಗರ ವ್ಯಾಪ್ತಿಯಲ್ಲಿ ಬೋರ್‌ವೆಲ್ ಹಾಕಿ ನೀರಿನ ತೊಂಬೆ (ಸಿಮೆಂಟ್ ಟ್ಯಾಂಕ್) ನಿರ್ಮಿಸಿ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ?

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)**

**ಅ)** ಯಳಂದೂರು ಪಟ್ಟಣದ ಬಿ.ಎಸ್.ಎನ್.ಎಲ್. ಕಛೇರಿ ಪಕ್ಕದಲ್ಲಿರುವ ಹಳೆಯ ನೀರಿನ ಟ್ಯಾಂಕ್ ಶಿಥಿಲಗೊಂಡಿರುವುದು ಪಟ್ಟಣ ಪಂಚಾಯಿತಿ ಗಮನಕ್ಕೆ ಬಂದಿದೆ.

**ಆ)** ಸದರಿ ಸ್ಥಳದಲ್ಲಿ ಸಾರ್ವಜನಿಕ ತಿಳುವಳಿಕೆಗಾಗಿ ಎಚ್ಚರಿಕೆಯ ನಾಮಫಲಕಗಳನ್ನು ಅಳವಡಿಸಲಾಗಿದೆ ಹಾಗೂ ಇದನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ.

**ಇ)** ಈ ಟ್ಯಾಂಕನ್ನು ತೆರವುಗೊಳಿಸಲು ಈಗಾಗಲೇ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಹಳೆಯ ಟ್ಯಾಂಕನ್ನು ತೆರವುಗೊಳಿಸಿ ಹೊಸ ಟ್ಯಾಂಕ್ ನಿರ್ಮಾಣಕ್ಕೆ ಅಂದಾಜು ಪಟ್ಟಿ ತಯಾರಿಸಿ ಅನುದಾನ ನಿಗಧಿಪಡಿಸಿಕೊಂಡು ಹೊಸ ಟ್ಯಾಂಕ್ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು.

**ಈ)** ಆಜು–ಬಾಜಿನಲ್ಲಿರುವ ಆಟೋ ನಿಲ್ದಾಣ ಹಾಗೂ ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸಿ ಸುತ್ತಲೂ ಫೆನ್ಸಿಂಗ್ ಹಾಕಲು ಕ್ರಮವಹಿಸಿದ್ದು, ತೀರ್ಮಾನದ ನಂತರ ಅದರಂತೆ ತೆರವುಗೊಳಿಸಿ ಸುರಕ್ಷಿತ ತಂತಿ ಬೇಲಿಯನ್ನು ಅಳವಡಿಸಲಾಗುವುದು.

ಉ) ಚಾಮರಾಜನಗರ ನಗರಸಭೆಗೆ ಲಭ್ಯವಿರುವ ಅನುದಾನದಲ್ಲಿ ಅಗತ್ಯಕ್ಕೆ ತಕ್ಕಂತೆ ಅಂದಾಜು ತಯಾರಿಸಿ ಕೌನ್ಸಿಲ್ ಅನುಮೋದನೆ ಹಾಗೂ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದು ಹತ್ತನೇ ವಾರ್ಡಿನ ಸಿದ್ಧಾರ್ಥನಗರ ವ್ಯಾಪ್ತಿಯಲ್ಲಿ ಬೋರ್‌ವೆಲ್ ಹಾಕಿ ನೀರಿನ ತೊಟ್ಟಿ (ಸಿಮೆಂಟ್ ಟ್ಯಾಂಕ್) ನಿರ್ಮಾಣ ಮಾಡಿ ಕುಡಿಯುವ ನೀರಿನ ಅನುಕೂಲ ಮಾಡಿಕೊಡಲಾಗುವುದು.

**ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಮತ್ತು ಮೂಲಭೂತ ಸೌಕರ್ಯಗಳ ಬಗ್ಗೆ**

**415; ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)**

ಅ) ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿರುವ ಯಾವ ಯಾವ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ;

ಆ) ಹಾಗಿದ್ದಲ್ಲಿ ಈ ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಿಗೆ ಇದುವರೆವಿಗೂ ಸರ್ಕಾರ ಒದಗಿಸಿರುವ ಮೂಲಭೂತ ಸೌಕರ್ಯ ಮತ್ತು ಯಾವ ಯಾವ ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗಿದೆ; (ವಿವರ ನೀಡುವುದು)

ಇ) ರಾಜ್ಯದ ಯಾವ ಯಾವ ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಕರ್ಯ ಒದಗಿಸಲಾಗಿದೆ;

ಈ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳೊಳಗೊಂಡಂತೆ ಈ ಜಿಲ್ಲೆಗಳಿಗೆ ಸೇರಿದ ತಾಲ್ಲೂಕು ಆಸ್ಪತ್ರೆಗಳಿಗೆ ಡಯಾಲಿಸಿಸ್ ಸೌಲಭ್ಯವನ್ನು ಕಲ್ಪಿಸಿಕೊಡಲಾಗುವುದೇ: ಹಾಗಿದ್ದಲ್ಲಿ ಯಾವಾಗ ತೆರೆಯಲಾಗುವುದು; (ವಿವರ ನೀಡುವುದು)

ಉ) ಬಡಜನರ ಅನುಕೂಲಕ್ಕಾಗಿ ಪ್ರತಿ ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? (ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

ಅ) ಚಾಮರಾಜನಗರ ಜಿಲ್ಲೆಯಲ್ಲಿ 03 ತಾಲ್ಲೂಕು ಆಸ್ಪತ್ರೆಗಳಿದ್ದು, ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಯನ್ನು 150 ಹಾಸಿಗೆಗಳ ಸಾಮರ್ಥ್ಯಕ್ಕೆ ಹಾಗು ಗುಂಡ್ಲುಪೇಟೆ ಮತ್ತು ಯಳಂದೂರು ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿ 06 ತಾಲ್ಲೂಕು ಆಸ್ಪತ್ರೆಗಳಿದ್ದು, ಅವುಗಳೆಲ್ಲವನ್ನೂ 100 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಲಾಗಿದೆ.

ಆ) ಮೇಲ್ದರ್ಜೆಗೇರಿಸಿರುವುದಕ್ಕೆ ಅನುಗುಣವಾಗಿ ಕೊಳ್ಳೇಗಾಲ, ಹುಣಸೂರು, ಕೆ.ಆರ್.ನಗರ, ನಂಜನಗೂಡು ಮತ್ತು ಟಿ.ನರಸೀಪುರ ತಾಲ್ಲೂಕು ಆಸ್ಪತ್ರೆಗಳಿಗೆ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಅವಶ್ಯವಿರುವ ಮೂಲಸೌಕರ್ಯವನ್ನು ಒದಗಿಸಲಾಗಿದೆ. ಮುಂದುವರೆದು, ಗುಂಡ್ಲುಪೇಟೆ ತಾಲ್ಲೂಕು ಆಸ್ಪತ್ರೆ ಕಟ್ಟಡ ನಿರ್ಮಿಸಲು ದಿನಾಂಕ 6–2–2012 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಯಳಂದೂರು ಆಸ್ಪತ್ರೆಗೆ ಕಟ್ಟಡವನ್ನು ನಿರ್ಮಿಸಬೇಕಾಗಿದೆ. ಪಿರಿಯಾಪಟ್ಟಣ ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕು ಆಸ್ಪತ್ರೆಗಳ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ.

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಕೆಳಕಂಡ ಆಸ್ಪತ್ರೆಗಳಲ್ಲಿ ಡಯಾಲಿಸೀಸ್ ಸೌಲಭ್ಯವಿದೆ:

| ಕ್ರಸಂ | ಆಸ್ಪತ್ರೆ ಹೆಸರು |
|---|---|
| 1 | ಜಿಲ್ಲಾ ಆಸ್ಪತ್ರೆ, ಬಿಜಾಪುರ |
| 2 | ಜಿಲ್ಲಾ ಆಸ್ಪತ್ರೆ, ಬಾಗಲಕೋಟೆ |
| 3 | ಜಿಲ್ಲಾ ಆಸ್ಪತ್ರೆ, ಉತ್ತರ ಕನ್ನಡ |
| 4 | ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ |
| 5 | ಜಿಲ್ಲಾ ಆಸ್ಪತ್ರೆ, ಚಾಮರಾಜನಗರ |

| | |
|---|---|
| 6 | ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು |
| 7 | ಕೆ.ಸಿ.ಜನರಲ್ ಆಸ್ಪತ್ರೆ, ಬೆಂಗಳೂರು |
| 8 | ಜಿಲ್ಲಾ ಆಸ್ಪತ್ರೆ, ಉಡುಪಿ |
| 9 | ಸಾರ್ವಜನಿಕ ಆಸ್ಪತ್ರೆ ಜಯನಗರ, ಬೆಂಗಳೂರು |
| 10 | ಜಿಲ್ಲಾ ಆಸ್ಪತ್ರೆ, ಕೋಲಾರ |
| 11 | ಜಿಲ್ಲಾ ಆಸ್ಪತ್ರೆ, ತುಮಕೂರು |
| 12 | ಜಿಲ್ಲಾ ಆಸ್ಪತ್ರೆ, ರಾಮನಗರ |
| 13 | ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ |
| 14 | ಜಿಲ್ಲಾ ಆಸ್ಪತ್ರೆ, ಗದಗ |
| 15 | ಜಿಲ್ಲಾ ಆಸ್ಪತ್ರೆ, ಧಾರವಾಡ |
| 16 | ಸಾರ್ವಜನಿಕ ಆಸ್ಪತ್ರೆ ಹೊಸಕೋಟೆ |
| 17 | ಸಾರ್ವಜನಿಕ ಆಸ್ಪತ್ರೆ ಸಾಗರ |
| 18 | ಜಿಲ್ಲಾ ಆಸ್ಪತ್ರೆ, ಹಾವೇರಿ |

**ಈ)** ಇಲ್ಲ

**ಉ)** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಡಯಾಲಿಸೀಸ್ ಘಟಕಗಳನ್ನು ಮೊದಲ ಆದ್ಯತೆ ಮೇರೆಗೆ ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಅದರಂತೆ, ಕ್ರಮವಹಿಸಲಾಗಿದ್ದು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸೀಸ್ ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

## ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಹಾಗೂ ಬೆಳೆ ನಷ್ಟದ ಪರಿಹಾರದ ಬಗ್ಗೆ

### 416; ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ;

ಆ) ಈ ಬರಪೀಡಿತ ತಾಲ್ಲೂಕುಗಳಲ್ಲಿ ಬೆಲೆ ನಷ್ಟವಾಗಿರುವ ರೈತರಿಗೆ ಬೆಳೆ ಪರಿಹಾರಕ್ಕೆ ನೀಡಿರುವ ಮೊತ್ತವೆಷ್ಟು; ಈ ಎರಡೂ ಜಿಲ್ಲೆಗಳ ತಾಲ್ಲೂಕು ವಿವರ ನೀಡುವುದು;

ಇ) ಬರಪರಿಹಾರ ಯೋಜನೆಯಡಿ ಕಾಮಗಾರಿಗಳಿಗಾಗಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು;

ಈ) ಈ ಅನುದಾನದಿಂದ ಇದುವರೆವಿಗೂ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ: (ಈ ಬಗ್ಗೆ ಎರಡು ಜಿಲ್ಲೆಗಳ ತಾಲ್ಲೂಕುವಾರು ವಿವರ ನೀಡುವುದು)

ಉ) ಜನ–ಜಾನುವಾರುಗಳಿಗೆ ಬರಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗಾಗಿ ಸರ್ಕಾರ ಇದುವರೆವಿಗೂ ಹಾಕಿಕೊಂಡಿರುವ ಕಾರ್ಯಕ್ರಮಗಳೇನು? (ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವಿವರ ನೀಡುವುದು)

### ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಮೈಸೂರು ಜಿಲ್ಲೆ –ಕೃಷ್ಣರಾಜನಗರ, ನಂಜನಗೂಡು, ಟಿ.ನರಸೀಪುರ, ಪಿರಿಯಾಪಟ್ಟಣ, ಮೈಸೂರು.

ಚಾಮರಾಜನಗರ ಜಿಲ್ಲೆ –ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು

ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ಹಾನಿಯಾದ ಬೆಳೆಗಳಿಗೆ ಪರಿಹಾರ ನೀಡಲು ಕೇಂದ್ರ ಸರ್ಕಾರಕ್ಕೆ ರೂ.216.48 ಕೋಟಿ ಅನುದಾನ ಕೋರಿ, ಮೆಮೋರಾಂಡಮ್ ಸಲ್ಲಿಸಲಾಗಿದ್ದು, ಅನುದಾನ ಬಿಡುಗಡೆಯಾದ ನಂತರ ಪರಿಹಾರ ನೀಡಲಾಗುವುದು.

ಇ) ಚಾಮರಾಜನಗರ – ರೂ. 450.00 ಲಕ್ಷ

ಮೈಸೂರು – ರೂ. 150.00 ಲಕ್ಷ

**ಈ)** ಚಾಮರಾಜನಗರ– ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವು ಪೂರೈಸುವ ಕಾಮಗಾರಿಗಳು

| **ತಾಲ್ಲೂಕಿನ ವಿವರ** | **ಕಾಮಗಾರಿಗಳ ಸಂ** | **ಕಾಮಗಾರಿಗಳ ಮೊತ್ತ (ರೂ. ಲಕ್ಷ)** |
|---|---|---|
| ಚಾಮರಾಜನಗರ | 16 | 39.00 |
| ಕೊಳ್ಳೇಗಾಲ | 62 | 108.00 |
| ಗುಂಡ್ಲುಪೇಟೆ | 12 | 43.50 |
| ಯಂದೂರು | 08 | 17.50 |
| **ಒಟ್ಟು** | **98** | **208.00** |

ಚಾಮರಾಜನಗರ ಜಿಲ್ಲೆಯಲ್ಲಿ ಪಶು ಸಂಗೋಪನೆ ಇಲಾಖೆಗೆ ಮೇವಿನ ಕಿಟ್ ಖರೀದಿಗೆ ರೂ.23.60 ಲಕ್ಷ ಹಾಗೂ ಜಾನುವಾರುಗಳಿಗೆ ಔಷಧಿ ಖರೀದಿಗೆ ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ತಹಶೀಲ್ದಾರ್, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲ ತಾಲ್ಲೂಕಿಗೆ ತಲಾ ರೂ.15.00 ಲಕ್ಷದಂತೆ ಮೇವು ಖರೀದಿಸಲು ಬಿಡುಗಡೆ ಮಾಡಲಾಗಿದೆ

ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ನಂಜನಗೂಡು, ಟಿ.ನರಸೀಪುರ, ಪಿರಿಯಾಪಟ್ಟಣ, ಮೈಸೂರು ತಾಲ್ಲೂಕುಗಳಿಗೆ ಜಾನುವಾರುಗಳಿಗೆ ಅಗತ್ಯ ಮೇವು ಒದಗಿಸಲು ಪ್ರತಿ ತಾಲ್ಲೂಕಿಗೆ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಜಾನುವಾರುಗಳಿಗೆ ಮೇವಿನ ಕೊರತೆ ನೀಗಿಸಲು ಜಿಲ್ಲೆಯಲ್ಲಿ ರೂ.30.00 ಲಕ್ಷದ ಮೊತ್ತದ ಮೇವಿನ ಕಿಟ್‌ಗಳನ್ನು ವಿತರಿಸಲಾಗಿದೆ.

ಉ) ಚಾಮರಾಜನಗರ ಜಿಲ್ಲೆಯಲ್ಲಿ, ಕುಡಿಯುವ ನೀರಿಗೆ ಸಂಬಂಧಿಸಿದಂತೆ, ರೂ.208.00 ಲಕ್ಷ ಮೊತ್ತದ 98 ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ತುರ್ತು ಕುಡಿಯುವ ನೀರಿನ ರೂ.354.00 ಲಕ್ಷ ಹಾಗೂ ಎಂ.ವಿ.ಎಸ್ ಸ್ಕೀಮಿನಲ್ಲಿ ರೂ.145.28 ಲಕ್ಷಗಳ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಅಲ್ಲದೇ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿಯಲ್ಲಿ ಶಾಶ್ವತ ಕುಡಿಯುವ ನೀರಿಗಾಗಿ ರೂ.3225.26 ಲಕ್ಷಗಳ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ತುರ್ತು ಕುಡಿಯುವ ನೀರು ಪೂರೈಕೆಗೆ ರೂ.100.00 ಲಕ್ಷಗಳನ್ನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ಇವರಿಗೆ ಬಿಡುಗಡೆ ಮಾಡಲಾಗಿದೆ. ತಾಲ್ಲೂಕುಗಳಲ್ಲಿ ಜಲಸೇವಾ ನಿಯಂತ್ರಣಾ ಕೊಠಡಿ ಸ್ಥಾಪಿಸಲಾಗಿದೆ. ಹಾಲಿ ಇರುವ ಕೊಳವೆ ಬಾವಿಗಳ ಪುನಶ್ಚೇತನ ಕಾರ್ಯವನ್ನು ಕೈಗೊಳ್ಳಲಾಗಿದೆ. ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಲ್ಲಿ, ಕೂಡಲೇ ಕ್ರಮ ವಹಿಸುವಂತೆ ತಹಶೀಲ್ದಾರ್, ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯ ಪಾಲಕ ಅಭಿಯಂತರರನ್ನು ಒಳಗೊಂಡಂತೆ ಇರುವ ತಂಡಕ್ಕೆ ತಿಳಿಸಲಾಗಿದೆ.

**ರಾಯಚೂರು ನಗರದ "ಐತಿಹಾಸಿಕ ಮಾವಿನಕೆರೆ" ಅಭಿವೃದ್ಧಿ ಕುರಿತು**

**446; ಶ್ರೀ ಮನೋಹರ್ ಮಸ್ಕಿ (ಪದವೀಧರರ ಕ್ಷೇತ್ರ)**

ಅ) ರಾಯಚೂರು ನಗರದ ಮಧ್ಯ ಭಾಗದಲ್ಲಿರುವ ಐತಿಹಾಸಿಕ ಮಾವಿನ ಕೆರೆ ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳು ಏನು;

ಆ) ಇದಕ್ಕಾಗಿ ಮೀಸಲಾಗಿಟ್ಟಿರುವ ಮತ್ತು ಬಳಕೆ ಆಗಿರುವ ಹಣ ಎಷ್ಟು;

ಇ) ಈ ಕೆರೆಯ ಒಂದಷ್ಟು ಭಾಗವನ್ನು ಏಕೆ ಮುಚ್ಚಲಾಗುತ್ತದೆ;

ಈ) ಈ ಕೆರೆಯ ಪ್ರದೇಶವನ್ನು ಅತಿಕ್ರಮಿಸಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಅತಿಕ್ರಮಿಸಿಕೊಂಡ ಪ್ರದೇಶ ಎಷ್ಟು;

ಉ) ಅತಿಕ್ರಮಿಸಿಕೊಂಡ ಪ್ರದೇಶದ ತೆರವಿಗೆ ಸರ್ಕಾರ ಕೈಗೊಂಡ ಕ್ರಮವೇನು?

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)**

ಅ) ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ (ಸಿ.ಎಂ.ಎಸ್.ಎಂ.ಟಿ.ಡಿ.ಪಿ) ಯೋಜನೆಯಡಿಯಲ್ಲಿ ಮಾವಿನ ಕೆರೆಯ ಸುತ್ತಲೂ ಮಣ್ಣಿನ ಏರಿ (ಅರ್ಥನ್ ಬಂಡ್) ನಿರ್ಮಾಣ ಕಾಮಗಾರಿಯನ್ನು ರೂ. 100.00 ಲಕ್ಷಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲಾಗಿದೆ. 2011–12ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ಬೋಟಿಂಗ್, ಜಟ್ಟಿ ಮತ್ತು ಚಿಲ್ಡ್ರನ್ ಪಾರ್ಕ್‌ನ್ನು ರೂ. 23.50 ಲಕ್ಷಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ ಹಾಗೂ ಸೋಲಾರ್ ಲೈಟ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ರೂ. 40.00 ಲಕ್ಷಗಳ ಮೊತ್ತದಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ಆ) ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ (ಸಿ.ಎಂ.ಎಸ್.ಎಂ.ಟಿ.ಡಿ.ಪಿ) ಯೋಜನೆಯಲ್ಲಿ ರೂ.100.00 ಲಕ್ಷಗಳನ್ನು ಮೀಸಲಿಟ್ಟಿದ್ದು, ಇದರ ಪೈಕಿ ರೂ. 25.00 ಲಕ್ಷಗಳು ಬಳಕೆಯಾಗಿದ್ದು, ಸದರಿ ಯೋಜನೆಯಡಿ ಬಾಕಿ ಅನುದಾನ ಬಿಡುಗಡೆಯಾಗಬೇಕಾಗಿರುತ್ತದೆ.

2011–12ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ಬೋಟಿಂಗ್ ಜಟ್ಟಿ ಮತ್ತು ಚಿಲ್ಡ್ರನ್ ಪಾರ್ಕ್ ನಿರ್ಮಾಣ ಮಾಡುವುದಕ್ಕೆ ರೂ. 23.50 ಲಕ್ಷಗಳನ್ನು ಮೀಸಲಿಟ್ಟಿದ್ದು ರೂ. 23.50 ಲಕ್ಷಗಳು ಸಂಪೂರ್ಣ ಖರ್ಚಾಗಿದ್ದು, ಕಾಮಗಾರಿ ಪೂರ್ಣಗೊಂಡಿದೆ.

2011–12ನೇ ಸಾಲಿನಲ್ಲಿ 13ನೇ ಹಣಕಾಸು ಯೋಜನೆಯಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ರೂ. 40.00 ಲಕ್ಷಗಳನ್ನು ಮಾವಿನಕೆರೆಯ ಸುತ್ತಲೂ ಸೋಲಾರ್ ಲೈಟ್ ಅಳವಡಿಸಲು ಕ್ರಮ ವಹಿಸಲಾಗುತ್ತಿದೆ.

ಇ) ಈ ಮುಚ್ಚಲಾಗುತ್ತಿರುವ ಪ್ರದೇಶವು ಕೆರೆಗೆ ಹೊಂದಿಕೊಂಡಿರುವ ಖಾಸಗಿ ಜಮೀನಿನ ಸ.ನಂ. 1233, 1234ರ ಭಾಗವಾಗಿದ್ದು, ಪಟ್ಟಾ ಭೂಮಿಯಾಗಿರುತ್ತದೆ. ಈ ಎರಡು ಸರ್ವೆ ನಂಬರುಗಳು ಜಮೀನುಗಳು 1981, 1982ನೇ ಸಾಲಿನಲ್ಲಿ ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಜಮೀನಿನಲ್ಲಿ ಮಾಲೀಕರು ಭೂ ಪರಿವರ್ತನೆ ಆದೇಶ ಷರತ್ತುಗಳನ್ನು ಉಲ್ಲಂಘಿಸಿರುವ ಕಾರಣ ನಿಯಮಾನುಸಾರ ಭೂ ಪರಿವರ್ತನೆ ಆದೇಶವನ್ನು ರದ್ದುಗೊಳಿಸಲಾಗಿರುತ್ತದೆ.

**ಈ)** ಕೆರೆಯ ದಕ್ಷಿಣ ಭಾಗದಲ್ಲಿರುವ ಇಂದಿರಾನಗರ, ಐ.ಡಿ.ಎಸ್.ಎಂ.ಟಿ. ಬಡಾವಣೆಗೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಮತ್ತು ಉತ್ತರ ಭಾಗದಲ್ಲಿರುವ ಉರುಕುಂದಿ ಈರಣ್ಣ ಕಾಲೋನಿ ಪ್ರದೇಶದಲ್ಲಿ ಒತ್ತುವರಿಯಾಗಿರುತ್ತದೆ. ಒಟ್ಟು ಒತ್ತುವರಿಯಾಗಿರುವ ವಿಸ್ತೀರ್ಣ 14 ಎಕರೆ 17 ಗುಂಟೆ.

**ಉ)** ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ (ಸಿ.ಎಂ.ಎಸ್.ಎಂ.ಟಿ.ಡಿ.ಪಿ) ಯೋಜನೆಯಡಿಯಲ್ಲಿ ಸದರಿ ಕೆರೆಯ ಸುತಲೂ ಮಣ್ಣಿನ ಏರಿ (ಅರ್ಥನ್ ಬಂಡ್) ನಿರ್ಮಾಣ ಮಾಡುವ ಸಮಯದಲ್ಲಿ ಕೆರೆಯ ದಕ್ಷಿಣ ಭಾಗದಲ್ಲಿರುವ ಇಂದಿರಾನಗರ ಮತ್ತು ಐ.ಡಿ.ಸ್.ಎಂ.ಟಿ. ಬಡಾವಣೆಗೆ ಹೊಂದಿಕೊಂಡಿರುವ ಕೆರೆಯ ಪ್ರದೇಶದಲ್ಲಿ ಅತಿಕ್ರಮಿಸಿರುವ ಜಾಗದಲ್ಲಿ ಅಡ್ಡಿಯಾಗಿರುವ ಒತ್ತುವರಿ ಪ್ರದೇಶವನ್ನು ಮಾತ್ರ ಜಿಲ್ಲಾಡಳಿತದ ವತಿಯಿಂದ ಮತ್ತು ನಗರಸಭೆಯಿಂದ ತೆರವುಗೊಳಿಸಲಾಗಿರುತ್ತದೆ. ಉಳಿದ ಭಾಗದ ತೆರವುಗೊಳಿಸುವ ಕ್ರಮ ಜಾರಿಯಲ್ಲಿರುತ್ತದೆ.

## ರಾಜ್ಯದಲ್ಲಿ "ಆಧಾರ್ ಯೋಜನೆ"ಯ ಗುತ್ತಿಗೆ ನೀಡಿರುವ ಕುರಿತು

### 453; ಶ್ರೀ ಮನೋಹರ್ ಮಸ್ಕಿ (ಪದವೀಧರರ ಕ್ಷೇತ್ರ)

**ಅ)** ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಆಧಾರ್ (UID) ಯೋಜನೆ ಜಾರಿಯಲ್ಲಿದೆ; ಜಿಲ್ಲಾವಾರು ಪ್ರಗತಿ ನೀಡುವುದು)

**ಆ)** ಆಧಾರ ಕಾರ್ಡ್ ನೊಂದಣಿಗಾಗಿ ಹಾಗೂ ದಾಖಲಾತಿಗಳನ್ನು ಸ್ಕ್ಯಾನ್ ಮಾಡಲು ಯಾವ ಸಂಸ್ಥೆಗಳಿಗೆ ಯಾವ ಜಿಲ್ಲೆಗಳನ್ನು ನೀಡಲಾಗಿದೆ;

**ಇ)** ಈ ಸಂಸ್ಥೆಗಳಿಗೆ ಪ್ರತಿ ಕಾರ್ಡಿಗೆ ಹಾಗೂ ದಾಖಲಾತಿಗಳ ಸ್ಕ್ಯಾನರ್‌ಗೆ ನೀಡಿರುವ ದರಗಳೆಷ್ಟು: ಈಗಾಗಲೇ ಎಷ್ಟು ಹಣ ನೀಡಲಾಗಿದೆ:

**ಈ)** ಈ ಕೆಲಸ ಪಡೆದಿರುವ ಸಂಸ್ಥೆಗಳಿಗೆ ಮರುಗುತ್ತಿಗೆ ನೀಡಲು ಅವಕಾಶ ಇದೆಯೇ; ಈ ಸಂಸ್ಥೆಗಳು ಜಿಲ್ಲಾ ಮತ್ತು ತಾಲ್ಲೂಕು ಮರುಗುತ್ತಿಗೆಯನ್ನು ಅತ್ಯಂತ ಕಡಿಮೆ ದರಕ್ಕೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

**ಉ)** ಇಂತಹ ಮರುಗುತ್ತಿಗೆ ಪ್ರಕರಣಗಳಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

### ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)

**ಅ)** ರಾಜ್ಯದ 24 ಜಿಲ್ಲೆಗಳಲ್ಲಿ ಆಧಾರ್ ಯೋಜನೆ ಜಾರಿಯಲ್ಲಿದೆ. ಜಿಲ್ಲಾವಾರು ಪ್ರಗತಿಯ ಪಟ್ಟಿಯನ್ನು ಲಗತ್ತಿಸಿದೆ.

**ಆ)** ಪಟ್ಟಿ ಲಗತ್ತಿಸಿದೆ.

**ಇ)**

| ಏಜೆನ್ಸಿ | ವಿಭಾಗ / ಜಿಲ್ಲೆ | ದರ ರೂ. |
|---|---|---|
| ಮೆ: ಗ್ಲೋಡೈನ್ ಟೆಕ್ನೋ ಸರ್ವ್ ಲಿಮಿಟೆಡ್ | ಬೆಳಗಾಂ ವಿಭಾಗ | 38.50 |
| ಮೆ: ಗ್ಲೋಡೈನ್ ಟೆಕ್ನೋ ಸರ್ವ್ ಲಿಮಿಟೆಡ್ | ಮೈಸೂರು ವಿಭಾಗ | 38.23 |
| ಮೆ: ಟೆರಾ ಸಾಫ್ಟ್‌ವೇರ್ | ಗುಲ್ಬರ್ಗಾ ವಿಭಾಗ | 38.50 |

| | | |
|---|---|---|
| ಮೆ: ವಿಪ್ರೋ ಲಿಮಿಟೆಡ್ | ಬೆಂಗಳೂರು ವಿಭಾಗ | 38.50 |
| ಮೆ: ವಿಪ್ರೋ ಲಿಮಿಟೆಡ್ | ಬೆಂಗಳೂರು ನಗರ | 37.50 |
| ಮೆ: ಇಂಟೆಗ್ರಾ ಮೈಕ್ರೋ | ಬೆಂಗಳೂರು ನಗರ | 37.50 |
| ಮೆ: ವಿಪ್ರೋ ಲಿಮಿಟೆಡ್ | ತುಮಕೂರು ಜಿಲ್ಲೆ | 34.35 |
| ಮೆ: ಕೊಮ್ಯಾಟ್ ಲಿಮಿಟೆಡ್ | ಮೈಸೂರು ಜಿಲ್ಲೆ | 34.35 |
| ಈವರೆಗೆ ಮಧ್ಯಂತರ ಪಾವತಿಯಾಗಿ ರೂ.15.66 ಕೋಟಿ ಏಜೆನ್ಸಿಗಳಿಗೆ ನೀಡಿದೆ. | | |

**ಈ)** ಮರುಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ ಮತ್ತು ಅದು ಸರ್ಕಾರಕ್ಕೆ ಗಮನಕ್ಕೆ ಬಂದಿರುವುದಿಲ್ಲ.

**ಉ)** ಉದ್ಭವಿಸುವುದಿಲ್ಲ.

## ಜಿಲ್ಲೆಗಳಲ್ಲಿ ಏಜೆನ್ಸಿ ನೀಡಿದ ವಿವರಗಳು

| ಕ್ರ. ಸಂ | ವಿಭಾಗ | ಜಿಲ್ಲೆ | ಏಜೆನ್ಸಿ |
|---|---|---|---|
| 1 | ಗುಲ್ಬರ್ಗಾ | ಗುಲ್ಬರ್ಗಾ<br>ಯಾದಗಿರಿ<br>ಬೀದರ<br>ಕೊಪ್ಪಳ<br>ರಾಯಚೂರು<br>ಬಳ್ಳಾರಿ | ಮೆ॥ ಟೆರಾ ಸಾಫ್ಟ್‌ವೇರ್ |
| 2 | ಬೆಳಗಾಂ | ಹಾವೇರಿ<br>ಗದಗ<br>ಕಾರವಾರ<br>ಬಿಜಾಪುರ<br>ಧಾರವಾಡ<br>ಬಾಗಲಕೋಟೆ | ಮೆ॥ ಗ್ಲೋಡೈನ್ ಟೆಕ್ನೋ ಸರ್ವ್ |
| 3 | ಮೈಸೂರು | ಕೊಡಗು<br>ಚಾಮರಾಜನಗರ | ಮೆ॥ ಗ್ಲೋಡೈನ್ ಟೆಕ್ನೋ ಸರ್ವ್ |

| | | | |
|---|---|---|---|
| | | ಹಾಸನ | |
| | | ಚಿಕ್ಕಮಗಳೂರು | |
| | | ಮಂಗಳೂರು | |
| | | ಮಂಡ್ಯ | |
| 4 | ಬೆಂಗಳೂರು ವಿಭಾಗ | ಶಿವಮೊಗ್ಗ | ಮೆ॥ ವಿಪ್ರೋ ಟೆಕ್ನಾಲಜಿಸ್ |
| | | ದಾವಣಗೆರೆ | |
| 5 | ಬೆಂಗಳೂರು ನಗರ | ಬೆಂಗಳೂರು ನಗರ | ಮೆ॥ ವಿಪ್ರೋ ಟೆಕ್ನಾಲಜಿಸ್ |
| | | ಬೆಂಗಳೂರು ನಗರ | |
| 6 | ಮೈಸೂರು | ಮೈಸೂರು | ಮೆ॥ ಕೊಮಾಟ್ ಟೆಕ್ನಾಲಜಿಸ್ |
| 7 | ಬೆಂಗಳೂರು ವಿಭಾಗ | ತುಮಕೂರು | ಮೆ॥ ವಿಪ್ರೋ ಟೆಕ್ನಾಲಜಿಸ್ |

# ಕರ್ನಾಟಕ ರಾಜ್ಯದಲ್ಲಿ ಜಿಲ್ಲಾವಾರು ಯುಐಡಿ ನೋಂದಣಿಯ ಪ್ರಗತಿ

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ಜನಸಂಖ್ಯೆ | ದಿನಾಂಕ: 02.02.2012 ರವರೆಗೆ ಆಗಿರುವ ನೋಂದಣಿ | ಶೇಕಡಾವಾರು ಪ್ರಗತಿ |
|---|---|---|---|---|
| 1 | ಗುಲ್ಬರ್ಗಾ | 2564892 | 657928 | 25.65 |
| 2 | ಯಾದಗಿರಿ | 1172985 | 239091 | 20.38 |
| 3 | ಬೀದರ್ | 1700018 | 692774 | 40.75 |
| 4 | ಕೊಪ್ಪಳ | 1391292 | 454757 | 32.69 |
| 5 | ರಾಯಚೂರು | 1924773 | 215766 | 11.21 |
| 6 | ಬಳ್ಳಾರಿ | 2532383 | 265928 | 10.50 |
| 7 | ಹಾವೇರಿ | 1598506 | 383451 | 23.99 |
| 8 | ಬೆಳಗಾಂ | 4778439 | 855291 | 17.90 |
| 9 | ಗದಗ | 1065235 | 365505 | 34.31 |
| 10 | ಕಾರವಾರ | 1436847 | 437494 | 30.45 |
| 11 | ಬಿಜಾಪುರ | 2175102 | 580183 | 26.67 |
| 12 | ಧಾರವಾಡ | 1851867 | 627334 | 33.88 |
| 13 | ಬಾಗಲಕೋಟೆ | 1890826 | 463707 | 24.52 |
| 14 | ಬೆಂಗಳೂರು ನಗರ –ಇಂಟಿಗ್ರಾ | 5062101 | 929909 | 18.37 |
|  | ಬೆಂಗಳೂರು ನಗರ – ವಿಪ್ರೋ | 4526809 | 590890 | 13.05 |
| 15 | ತುಮಕೂರು | 2682299 | 2549883 | 95.06 |
| 16 | ಶಿವಮೊಗ್ಗ | 1755512 | 27870 | 1.59 |
| 17 | ದಾವಣಗೆರೆ | 1946905 | 66012 | 3.39 |
| 18 | ಮೈಸೂರು | 2995878 | 2839054 | 94.77 |
| 19 | ಕೊಡಗು | 554762 | 46910 | 8.46 |
| 20 | ಚಾಮರಾಜನಗರ | 1020962 | 134896 | 13.21 |
| 21 | ಹಾಸನ | 1779221 | 69146 | 3.89 |
| 22 | ಚಿಕ್ಕಮಗಳೂರು | 1137753 | 72521 | 6.37 |
| 23 | ಮಂಗಳೂರು | 2083265 | 107736 | 5.17 |
| 24 | ಮಂಡ್ಯ | 1808680 | 132146 | 7.31 |
| ಒಟ್ಟು |  | 53437312 | 13806182 | 25.84 |

**ರೈತರ ಸರ್ವೆ ಖಾತೆ ಹಾಗೂ ತಿದ್ದುಪಡಿ ಕಾರ್ಯಗಳಿಗೆ ಆಗುತ್ತಿರುವ ಅನಾನುಕೂಲದ ಬಗ್ಗೆ.**

**419; ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ರೈತರು ಸರ್ವೆ, ಖಾತೆ ಮತ್ತು ತಿದ್ದುಪಡಿ ಮಾಡಿಸುವುದಕ್ಕೆ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಯಾಗಿ ನಿರ್ವಹಿಸುವಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

**ಆ)** ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ತಹಶೀಲ್ದಾರ್ ಕಛೇರಿಯ ರೈತರ ಸರ್ವೆ ಕಾರ್ಯ ಖಾತೆ ಮಾಡಿಸುವ ಪ್ರಕರಣಗಳು ಎಷ್ಟು ಬಾಕಿ ಇರುತ್ತದೆ; (ಹೋಬಳಿವಾರು ವಿವರ ನೀಡುವುದು) ಸದರಿ ಕಾರ್ಯವನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಹೌದು, ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪಹಣಿ ತಿದ್ದುಪಡಿಗೆ, ಖಾತೆಗೆ ಸರ್ವೆಗಾಗಿ ಬರುವ ಅರ್ಜಿಗಳನ್ನು ಸರ್ಕಾರದ ಸುತ್ತೋಲೆಯಂತೆ ಕ್ರಮ ವಹಿಸಲಾಗುತ್ತಿದೆ.

**ಆ)** ಬೆಂಗಳೂರು ನಗರ ಜಿಲ್ಲೆಯಲ್ಲಿ ತಹಶೀಲ್ದಾರ್ ಕಛೇರಿಯ ರೈತರ ಸರ್ವೆ ಕಾರ್ಯ ಖಾತೆ ಮಾಡಿಸಲು ಒಟ್ಟು 382 ಪ್ರಕರಣಗಳು ಬಾಕಿ ಇರುತ್ತವೆ. ಬಾಕಿ ಇರುವ ಪ್ರಕರಣಗಳನ್ನು 30 ದಿನದೊಳಗಾಗಿ ವಿಲೇವಾರಿ ಮಾಡಲಾಗುವುದು. ಬೆಂಗಳೂರು ನಗರ ಜಿಲ್ಲೆಯ ತಾಲ್ಲೂಕು ಕಛೇರಿಯಲ್ಲಿ ರೈತರ ಸರ್ವೆ ಕಾರ್ಯ ಖಾತೆ ಮಾಡಿಸುವ ಬಗ್ಗೆ ಬಾಕಿ ಇರುವ ಬಗ್ಗೆ ಹೋಬಳಿವಾರು ವಿವರ ಈ ಕೆಳಕಂಡಂತಿರುತ್ತದೆ.

| ತಾಲ್ಲೂಕು | ಹೋಬಳಿ | | | | | | |
|---|---|---|---|---|---|---|---|
| **ಬೆಂಗಳೂರು ಉತ್ತರ** | **ದಾಸನಪುರ 1** | | **ದಾಸನಪುರ 2** | **ದಾಸನಪುರ 3** | **ಯಶವಂತಪುರ 1** | **ಯಶವಂತಪುರ 2** | |
| | 12 | | 24 | 13 | 2 | 8 | |
| ಬೆಂಗಳೂರು ಉತ್ತರ (ಅಪರ) | ಯಲಹಂಕ | | ಜಾಲ | ಹೆಸರಘಟ್ಟ | | | |
| | 5 | | 11 | 48 | | | |
| ಬೆಂಗಳೂರು ದಕ್ಷಿಣ | ಉತ್ತರಹಳ್ಳಿ | ಬೇಗೂರು | ಕೆಂಗೇರಿ | ತಾವರೆಕೆರೆ | | | |
| | 11 | 14 | 38 | 26 | | | |
| ಆನೇಕಲ್ | ಕಸಬಾ | | ಜಿಗಣಿ | ಅತ್ತಿಬೆಲೆ 1 | ಅತ್ತಿಬೆಲೆ 2 | ಸರ್ಜಾಪುರ | ಸರ್ಜಾಪುರ |
| | 28 | | 40 | 12 | 4 | 51 | 15 |
| ಕೆ.ಆರ್.ಪುರಂ | ಕೆ.ಆರ್.ಪುರಂ 1 | ಕೆ.ಆರ್.ಪುರಂ 2 | ಕೆ.ಆರ್.ಪುರಂ 3 | ವರ್ತೂರು 1 | ವರ್ತೂರು 2 | ಬಿದರಹಳ್ಳಿ 1 | ಬಿದರಹಳ್ಳಿ 2 |
| | 0 | 2 | 4 | 0 | 2 | 4 | 7 |

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ 4 ತಾಲ್ಲೂಕುಗಳಲ್ಲಿ ಹೋಬಳಿವಾರು ಖಾತೆ ಬದಲಾವಣೆಗೆ ಬಾಕಿ ಇರುವ ಖಾತೆಗಳ ಸಂಖ್ಯೆ 1408 ಪ್ರಕರಣಗಳು ಇರುತ್ತವೆ. ಸರ್ವೆ ಕಾರ್ಯಗಳ ಪೈಕಿ ಹದ್ದು ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಪ್ರಕರಣಗಳನ್ನು ಆಯಾಯ ತಿಂಗಳಲ್ಲಿ ವಿಲೇಪಡಿಸುತ್ತಿದ್ದು, ಹದ್ದುಬಸ್ತು ಪ್ರಕರಣಗಳನ್ನು ಹಿರಿತನದ ಆಧಾರದ ಮೇಲೆ ಭೂಮಾಪಕರಿಂದ ಅಳತೆ ಮಾಡಿಸುತ್ತಿದ್ದು, ಬಾಕಿ ಇರುವ ಪ್ರಕರಣಗಳನ್ನು 6 ತಿಂಗಳೊಳಗೆ ವಿಲೇಪಡಿಸಲಾಗುವುದು. ಹೋಬಳಿವಾರು ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ತಾಲ್ಲೂಕಿನ ಹೆಸರು | ಹೋಬಳಿಗಳು | ಖಾತೆ ಬದಲಾವಣೆಗೆ ಬಾಕಿ ಇರುವ ಪ್ರಕರಣಗಳು |
|---|---|---|---|
| 1 | ದೊಡ್ಡಬಳ್ಳಾಪುರ | ಕಸಬಾ | 206 |
| | | ಮಧುರ | 283 |
| | | ದೊಡ್ಡಬೆಳವಂಗಲ | 133 |
| | | ತೂಬಗೆರೆ | 51 |
| | | ಸಾಸಲು | 38 |
| | | ಒಟ್ಟು | 711 |
| 2 | ದೇವನಹಳ್ಳಿ | ಕಸಬಾ | 116 |
| | | ವಿಜಯಪುರ | 149 |
| | | ಕುಂದಾಣ | 245 |
| | | ಚನ್ನರಾಯಪಟ್ಟಣ | 160 |
| | | **ಒಟ್ಟು** | **670** |

## ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಹೊಳವನಹಳ್ಳಿ ಹೋಬಳಿಯ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮಲೆಕ್ಕಾಧಿಕಾರಿಯವರ ಬಗ್ಗೆ.

**787; ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಹೊಳವನಹಳ್ಳಿ ಹೋಬಳಿಯ ಗ್ರಾಮಲೆಕ್ಕಾಧಿಕಾರಿಗಳು ಹಾಗೂ ರಾಜಸ್ವ ನಿರೀಕ್ಷಕರುಗಳ ವೃತ್ತವಾರು ಹೆಸರುಗಳನ್ನು ತಿಳಿಸುವುದು.

ಆ) ಸದರಿ ನೌಕರರು ಕೇಂದ್ರ ಸ್ಥಾನದಲ್ಲಿ ವಾಸಿಸುತ್ತಿಲ್ಲ ಎಂಬ ದೂರುಗಳು ಸಾರ್ವಜನಿಕರಿಂದ ಸರ್ಕಾರಕ್ಕೆ ಬಂದಿದೆಯೇ? ಬಂದಿದ್ದರೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಹೊಳವನಹಳ್ಳಿ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮಲೆಕ್ಕಾಧಿಕಾರಿಯವರ ಬಗ್ಗೆ ಸಾರ್ವಜನಿಕರು ಸರ್ಕಾರಕ್ಕೆ ದೂರನ್ನು ನೀಡಿರುವುದು ನಿಜವೇ; ನೀಡಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

ಅ) ತುಮಕೂರು ಜಿಲ್ಲಾ ಕಂದಾಯ ಘಟಕದ ಕೊರಟಗೆರೆ ತಾಲ್ಲೂಕು, ಹೊಳವನಹಳ್ಳಿ ಹೋಬಳಿಯ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮಲೆಕ್ಕಾಧಿಕಾರಿಗಳ ವಿವರ ಈ ಕೆಳಕಂಡಂತಿರುತ್ತದೆ.

ಹೊಳವನಹಳ್ಳಿ ವೃತ್ತದ ಸಂಖ್ಯೆ:09

| ಕ್ರ.ಸಂ. | ನೌಕರರ ಹೆಸರು | ಹುದ್ದೆ | ಹುದ್ದೆ/ವೃತ್ತವಾರು ವಿವರ |
|---|---|---|---|
| 1 | ಶ್ರೀ ಬಿ.ಎನ್. ಮಧುಚಂದ್ರ | ರಾಜಸ್ವ ನಿರೀಕ್ಷಕರು ಹೊಳವನಹಳ್ಳಿ ಹೋಬಳಿ | |
| 2 | ಶ್ರೀ ಚನ್ನಿಗರಾಮಯ್ಯ | ಗ್ರಾಮಲೆಕ್ಕಿಗರು | ಹೊಳವನಹಳ್ಳಿ ವೃತ್ತ. |
| 3 | ಶ್ರೀ ಹೆಚ್.ಹೆಚ್. ರವಿಶಂಕರ್ | ಗ್ರಾಮಲೆಕ್ಕಿಗರು | ಚಿಕ್ಕನಹಳ್ಳಿ ವೃತ್ತ. |

| | | | |
|---|---|---|---|
| 4 | ಶ್ರೀ ಹೆಚ್.ಜಿ. ಪಂಡಿತಾರಾಧ್ಯ | ಗ್ರಾಮಲೆಕ್ಕಿಗರು | ಅಕ್ಕಿರಾಂಪುರ ವೃತ್ತ |
| 5 | ಶ್ರೀ ಚನ್ನಿಗರಾಮಯ್ಯ | ಗ್ರಾಮಲೆಕ್ಕಿಗರು | ಬಿ.ಡಿ.ಪುರ ವೃತ್ತ |
| 6 | ಶ್ರೀ ನಂಜುಂಡಯ್ಯ | ಗ್ರಾಮಲೆಕ್ಕಿಗರು | ದೊಡ್ಡಕಾಗ್ಗೆರೆ ವೃತ್ತ. |
| 7 | ಶ್ರೀ ಹೆಚ್. ರಂಗಣ್ಣ | ಗ್ರಾಮಲೆಕ್ಕಿಗರು | ಮಾವತ್ತೂರು ವೃತ್ತ. |
| 8 | ಶ್ರೀ ಡಿ. ರಂಗನಾಥ | ಗ್ರಾಮಲೆಕ್ಕಿಗರು | ಕೊಡ್ಲಹಳ್ಳಿ ವೃತ್ತ. |
| 9 | ಶ್ರೀ ಎಸ್.ಎಸ್. ಸತ್ಯನಾರಾಯಣ | ಗ್ರಾಮಲೆಕ್ಕಿಗರು | ಸೋಂಪುರ ವೃತ್ತ. |

**ಆ)** ಯಾವುದೇ ದೂರುಗಳು ಬಂದಿರುವುದಿಲ್ಲ.

**ಇ)** ಯಾವುದೇ ದೂರುಗಳು ಬಂದಿರುವುದಿಲ್ಲ.

**ರಾಜ್ಯದಲ್ಲಿ ಬಡಜನರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವ ಬಗ್ಗೆ**

**454; ಶ್ರೀ ತೋಂಟದಾರ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ರಾಜ್ಯದಲ್ಲಿ ಬಡಜನರಿಗೆ ಹಾಗೂ ದೀನ ದಲಿತರಿಗೆ ಆಸೆ ಆಮಿಷಗಳನ್ನೊಡ್ಡಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುವ ಬಗ್ಗೆ ಪ್ರಚೋದಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಆ)** ಹಾಗಿದ್ದಲ್ಲಿ, ಈ ರೀತಿ ಮತಾಂತರಗೊಳ್ಳುತ್ತಿರುವ ದೀನ ದಲಿತರ ನೆರವಿಗೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು; (ವಿವರ ನೀಡುವುದು)

**ಇ)** ಕೆಲವು ರಾಜ್ಯಗಳಲ್ಲಿರುವಂತೆ ನಮ್ಮ ರಾಜ್ಯದಲ್ಲಿಯೂ "ಮತಾಂತರ ನಿಷೇಧ ಕಾಯ್ದೆ" ಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ? (ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮತಾಂತರವು ಆಮಿಷಗಳಿಗೆ ಹಾಗೂ ಒತ್ತಾಯಕ್ಕೆ ಒಳಗಾಗಿ ಆಗಿರಬಾರದಾದರೆ ದೀನ ದಲಿತರ ಆರ್ಥಿಕ ಅಭಿವೃದ್ಧಿ ಹಾಗೂ ರಕ್ಷಣೆ ಮುಖ್ಯವಾಗಿರುತ್ತದೆ. ಸರ್ಕಾರದ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರಿಯಾಗಿ ಜಾರಿ ಮಾಡುವುದು ಹಾಗೂ ಸಾರ್ವಜನಿಕರ ರಕ್ಷಣೆಗಾಗಿ ಸರ್ಕಾರ ಎಲ್ಲ ಕ್ರಮಕೈಗೊಳ್ಳುತ್ತಿದೆ. ಅದಲ್ಲದೆ ಆಮಿಷಗಳಿಂದ ಹಾಗೂ ಒತ್ತಾಯದಿಂದ ಮತಾಂತರವಾಗದಂತೆ ಸರ್ಕಾರದ ಇಲಾಖೆಗಳು ನಿಗಾವಹಿಸುತ್ತಿವೆ.

ಇ) ಸರ್ಕಾರವು ವಿವಿಧ ಧರ್ಮೀಯರನ್ನು ಆಸೆ ಆಮಿಷಗಳನ್ನು ಒಡ್ಡುವ ಮೂಲಕ ಮತಾಂತರಕ್ಕೆ ಪ್ರೇರೇಪಿಸುವವರನ್ನು ತಡೆಯುವುದಕ್ಕಾಗಿ ಕರ್ನಾಟಕ ಧರ್ಮ ಸ್ವಾತಂತ್ರ್ಯ ಅಧಿನಿಯಮ, 2011 ಜಾರಿಗೆ ತರಲು ಪರಿಶೀಲಿಸಲಾಗುತ್ತಿದೆ.

**ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಪ್ರವಾಸೋದ್ಯಮದ ಅಭಿವೃದ್ಧಿ ಬಗ್ಗೆ.**

**760; ಶ್ರೀ ತೋಂಟದಾರ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಮೈಸೂರು ಮತ್ತು ಚಾಮರಾಜನಗರಗಳಲ್ಲಿ ಪ್ರವಾಸೋದ್ಯಮ ಸ್ಥಳಗಳೆಂದು ಗುರುತಿಸಲಾಗಿರುವ ಸ್ಥಳಗಳು ಯಾವುವು (ತಾಲ್ಲೂಕುವಾರು ವಿವರ ನೀಡುವುದು);

ಆ) ಸದರಿ ಪ್ರವಾಸಿ ಕೇಂದ್ರಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ (ವಿವರ ನೀಡುವುದು);

ಇ) ಇಲ್ಲದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಚಾಮರಾಜನಗರ ಜಿಲ್ಲೆ:

| | |
|---|---|
| ಚಾಮರಾಜನಗರ | ಚಿಕ್ಕಹೊಳೆ ಜಲಾಶಯ, ಕರಿವರದರಾಜ ಬೆಟ್ಟ, ಕನಕಗಿರಿ. |
| ಗುಂಡ್ಲುಪೇಟೆ | ಬಂಡೀಪುರ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ತೆರಕಣಾಂಬಿ |
| ಯಲಂದೂರು | ಬೆಳಿಗಿರಿ ರಂಗನ ಬೆಟ್ಟ |
| ಕೊಳ್ಳೆಗಾಲ | ಮಲೆಮಹದೇಶ್ವರ ಬೆಟ್ಟ, ಕೊಳ್ಳೆಗಾಲ, ಮಧ್ಯರಂಗ, ಹೊಗೇನಕಲ್ ಜಲಪಾತ, ಗೋಪಿನಾಥಮ್, ಚಿಕ್ಕಲೂರು ಸಿದ್ಧಪ್ಪಾಜಿ ಕ್ಷೇತ್ರ, ಹಜರತ್ ಮರ್ದಾನೆ ಗೈಬ್ ದರ್ಗಾ. |

**ಮೈಸೂರು ಜಿಲ್ಲೆ:**

| | |
|---|---|
| ಮೈಸೂರು | ಮೈಸೂರು, ಚಾಮುಂಡಿಬೆಟ್ಟ, |
| ಕೆ.ಆರ್.ನಗರ | ಚುಂಚನಕಟ್ಟೆ, ಅರ್ಕೇಶ್ವರ, |
| ಟಿ. ನರಸೀಪುರ | ತಲಕಾಡು, ಸೋಮನಾಥಪುರ, ಗರ್ಗೇಶ್ವರಿ |
| ನಂಜನಗೂಡು | ನಂಜನಗೂಡು |
| ಹೆಚ್.ಡಿ.ಕೋಟೆ | ಕಾರಾಪುರ, ಗದ್ದಿಗೆ, ಚಿಕ್ಕದೇವಮ್ಮನ ಬೆಟ್ಟ, |
| ಹುಣಸೂರು | ಗೊಮ್ಮಟಗಿರಿ, |
| ಪಿರಿಯಾಪಟ್ಟಣ | ಬೈಲುಕುಪ್ಪೆ ಗೋಲ್ಡನ್ ಟೆಂಪಲ್, |

ಆ) ಕೆಲವು ಪ್ರವಾಸಿ ಕೇಂದ್ರಗಳ ಬಳಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಉಳಿದ ಪ್ರವಾಸಿ ಕೇಂದ್ರಗಳಲ್ಲಿ ಅವಶ್ಯಕತೆ, ಅನುದಾನ ಮತ್ತು ನಿವೇಶನಗಳ ಲಭ್ಯತೆಯನ್ನಾಧರಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಸರ್ಕಾರಿ ಆಯುರ್ವೇದ ಆಸ್ಪತ್ರೆಗಳ ಬಗ್ಗೆ

**761; ಶ್ರೀ ತೋಂಟಾದಾರ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) 2009 ರಿಂದ ಇಲ್ಲಿಯವರೆಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಆಯುಷ್ ನಿರ್ದೇಶನಾಲಯ ವ್ಯಾಪ್ತಿಯ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳಿಗೆ ವಾರ್ಷಿಕ ಎಷ್ಟು ಮೌಲ್ಯದ ಆಯುರ್ವೇದ ಔಷಧಗಳನ್ನು ಸರಬರಾಜು ಮಾಡಲಾಗುತ್ತಿದೆ.

ಆ) 2009–10 ನೇ ಸಾಲಿನಿಂದ ಇಲ್ಲಿಯವರೆಗೆ ಪ್ರತಿ ಚಿಕಿತ್ಸಾಲಯಗಳಿಗೆ ಪೂರೈಕೆಯಾದ ಮತ್ತು ಬೇಡಿಕೆಯಿರುವ ಔಷಧಗಳ ಮೌಲ್ಯ ಎಷ್ಟು (ವಿವರ ನೀಡುವುದು)

ಇ) ಸದರಿ ಜಿಲ್ಲೆಗಳ ವ್ಯಾಪ್ತಿಯ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳಿಗೆ ಸ್ಥಳೀಯ ಬೇಡಿಕೆಯನ್ನಾಧರಿಸಿ, ಅಗತ್ಯವಿರುವ ಔಷಧಗಳನ್ನು ಸ್ಥಳೀಯವಾಗಿ ಖರೀದಿ ನಿಯಮಾನುಸಾರ ಖರೀದಿಸಲು ಅವಕಾಶ ಕಲ್ಪಿಸಲಾಗುವುದೇ? (ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ) ಮತ್ತು ಆ)**

| ಕ್ರ ಸಂ | ಜಿಲ್ಲೆ | ಆಯುರ್ವೇದ ಚಿಕಿತ್ಸಾಲ ಯದ ಸಂಖ್ಯೆಯ ವಿವರ | ವರ್ಷ | ಔಷಧಿಗಳ ಬೇಡಿಕೆ ಮೊತ್ತ (ರೂ. ಲಕ್ಷಗಳಲ್ಲಿ) | ಸರ್ಕಾರಿ ಆಯುರ್ವೇದ ಚಿಕಿತ್ಸಾಲ ಯಗಳಿಗೆ ಸರಬರಾಜು ಮಾಡಲಾದ ಒಟ್ಟು ಔಷಧಗಳ ಮೌಲ್ಯ (ರೂ. ಲಕ್ಷಗಳಲ್ಲಿ) |
|---|---|---|---|---|---|
| 1 | ಮೈಸೂರು ಜಿಲ್ಲೆ | 31 | 2009–10 | 11.16 | 11.16 |
| | | | 2010–11 | 11.16 | 11.16 (ರಾಜ್ಯ ವಲಯ) |
| | | | | 15.50 | 15.50 (ಕೇಂದ್ರ ವಲಯ) |
| | | | ಒಟ್ಟು | **ರೂ. 37.82** | **ರೂ. 37.82** |
| 2 | ಚಾಮರಾಜನಗರ | 12 | 2009–10 | 4.32 | 4.32 |
| | | | 2010–11 | 4.32 | 4.32 (ರಾಜ್ಯ ವಲಯ) |
| | | | 2010–11 | 6.00 | 6.00 (ಕೇಂದ್ರ ವಲಯ) |
| | | | ಒಟ್ಟು | **ರೂ.14.64** | **ರೂ.14.64** |

ಇ) ಇಲ್ಲ

## ನೀರು ಶುದ್ಧೀಕರಣ ಘಟಕಗಳ ಬಗ್ಗೆ

**457; ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಬೆಂಗಳೂರು ಜಲಮಂಡಳಿಯು ಕೊಳಚೆ ಶುದ್ದೀಕರಣ ಘಟಕಗಳನ್ನು (STP) ಹೊಂದಿರುವುದೆಷ್ಟು ಹಾಗೂ ಇವುಗಳು ಸಂಸ್ಕರಿಸಬಹುದಾದ ನೀರಿನ ಪ್ರಮಾಣ ಎಷ್ಟು;

ಆ) ಒಂದು ದಿನಕ್ಕೆ ಬೃಹತ್ ಬೆಂಗಳೂರು ವ್ಯಾಪ್ತಿಯಲ್ಲಿ ಎಷ್ಟು ಕೊಳಚೆ ನೀರು ಉತ್ಪತ್ತಿಯಾಗುತ್ತದೆ; ಇದರಲ್ಲಿ ಎಷ್ಟು ನೀರನ್ನು ಸಂಸ್ಕರಿಸಲಾಗುತ್ತದೆ;

ಇ) ಬೆಂಗಳೂರು ನಗರದಲ್ಲಿ ನಿತ್ಯ 10%ರಷ್ಟು ಕೊಳಚೆ ನೀರನ್ನು ಮಾತ್ರ ಸಂಸ್ಕರಿಸಿ ಉಳಿದ 90% ಕೊಳಚೆ ನೀರನ್ನು ಸಮೀಪದ ಕೆರೆಗಳಿಗೆ ಬಿಡಲಾಗುತ್ತಿದೆಯೆಂದು 16–12–2011 ರಲ್ಲಿ ಸಂಸತ್ತಿಗೆ ಮಂಡಿಸಿದ ಮಹಾಲೇಖಪಾಲಕರ ವರದಿಯಲ್ಲಿ ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, 100%ರಷ್ಟು ಕೊಳಚೆ ನೀರು ಸಂಸ್ಕರಿಸಲು ಹಾಕಿಕೊಂಡಿರುವ ಯೋಜನೆ ಏನು; ಇದನ್ನು ಎಷ್ಟು ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು?

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನ ಇಲಾಖೆ, ನಗರಾಭಿವೃದ್ದಿ ಮತ್ತು ಬೆಂಗಳೂರು ಜಲಮಂಡಳಿ ಸಚಿವರು)**

ಅ) ಬೆಂಗಳೂರು ಜಲಮಂಡಳಿಯು ಒಟ್ಟು 14 ಒಳಚರಂಡಿ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳನ್ನು ಹೊಂದಿರುತ್ತದೆ. ಇವುಗಳಲ್ಲಿ ಸಂಸ್ಕರಿಸಬಹುದಾದ ನೀರಿನ ಪ್ರಮಾಣ ದಿನಂಪ್ರತಿ ಒಟ್ಟು 721 ದಶಲಕ್ಷ ಲೀಟರ್‌ಗಳು

ಆ) ಬೃಹತ್ ಬೆಂಗಳೂರು ನಗರದಲ್ಲಿ ಎಲ್ಲಾ ಮೂಲಗಳಿಂದ ದಿನಂಪ್ರತಿ ಸುಮಾರು 900 ದಶ ಲಕ್ಷ ಲೀಟರ್‌ಗಳಷ್ಟು ತ್ಯಾಜ್ಯ ನೀರು ಉತ್ಪತ್ತಿಯಾಗುತ್ತದೆಂದು ಅಂದಾಜಿಸಲಾಗಿದೆ. ಒಟ್ಟಾರೆ ಎಲ್ಲಾ ಮೂಲಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಶೇಖರಿಸಿ ಎಲ್ಲಾ ಶುದ್ಧೀಕರಣ ಘಟಕಗಳಿಗೆ ಸಾಗಿಸಿ ದಿನಂಪ್ರತಿ ಸುಮಾರು 320 ರಿಂದ 350 ದಶಲಕ್ಷ ಲೀಟರ್‌ವರೆಗೂ ಶುದ್ಧೀಕರಿಸಲಾಗುತ್ತಿದೆ.

ಇ) ಹೌದು. ಮಹಾಲೇಖಪಾಲರ ಕರಡು ವರದಿಯಲ್ಲಿ ಶೇ 10ರಷ್ಟು ಮಾತ್ರ ಸಂಸ್ಕರಿಸಲಾಗುತ್ತಿದೆ ಎಂದು ತಿಳಿಸಿದೆ ಆದರೆ ಬೆಂಗಳೂರು ಜಲಮಂಡಳಿಯು ಅನುಸರಣಾ ವರದಿಯನ್ನು ನೀಡಿದ ನಂತರ ಮಹಾಲೇಖಪಾಲರು ತಮ್ಮ ಅಂತಿಮ ವರದಿಯಲ್ಲಿ ಶೇಕಡಾ 47 ರಷ್ಟು ಕೊಳಚೆ ನೀರನ್ನು ಶುದ್ಧೀಕರಿಸಲಾಗುತ್ತಿದೆಯೆಂದು ತಿಳಿಸಿರುತ್ತಾರೆ.

ಈ) ಬೆಂಗಳೂರು ನಗರದಲ್ಲಿ ನಿತ್ಯ ಉತ್ಪತ್ತಿಯಾಗುವ ಕೊಳಚೆ ನೀರನ್ನು ಸಂಪೂರ್ಣವಾಗಿ ಸಂಸ್ಕರಿಸಲು ಈ ಕೆಳಕಂಡ ಬೃಹತ್ ಯೋಜನೆಗಳನ್ನು ರೂಪಿಸಲಾಗಿದೆ.

1. **'ಪರಿಸರ ಕ್ರಿಯಾ ಯೋಜನೆ–ಎ'** ರಾಷ್ಟ್ರೀಯ ನದಿ ಸಂರಕ್ಷಣೆ ಯೋಜನೆಯಡಿಯಲ್ಲಿ ನಗರದ ಕೇಂದ್ರ ಭಾಗದ 33 ಕಿ.ಮೀ ನಷ್ಟು ಉದ್ದದ 450 ಮಿ.ಮೀ ನಿಂದ 1800 ಮಿ.ಮೀ ವ್ಯಾಸದ ಆರ್.ಸಿ.ಸಿ. ಕೊಳವೆಗಳನ್ನು ಬದಲಾಯಿಸುವ ಯೋಜನೆಯನ್ನು ರೂ.55.00 ಕೋಟಿ ವೆಚ್ಚದಲ್ಲಿ ಡಿಸೆಂಬರ್ 2010 ರಲ್ಲಿ ಪೂರ್ಣಮಾಡಲಾಗಿದೆ.

2. **ಪರಿಸರ ಕ್ರಿಯಾ ಯೋಜನೆ – ಬಿ'** ನಗರದ ಕೇಂದ್ರ ಭಾಗದ 70 ಕಿ.ಮೀ. ಉದ್ದದ 450 ಮಿ.ಮೀ. ನಿಂದ 2400 ಮಿ.ಮೀ. ವ್ಯಾಸದ ಆರ್.ಸಿ.ಸಿ. ಕೊಳವೆ ಮಾರ್ಗಗಳನ್ನು ಬದಲಾಯಿಸುವ ಯೋಜನೆಯನ್ನು JnNURM/JICA ಇವರ ಸಹಯೋಗದೊಂದಿಗೆ ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಗೆ ಮಂಜೂರಾದ ಮೊತ್ತ

ರೂ.176.754 ಕೋಟಿಗಳು. ಆದರೆ ಯೋಜನೆಯಲ್ಲಿ ಸಾಕಷ್ಟು ಬದಲಾವಣೆಗಳಾದ ಕಾರಣ ಈ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 383 ಕೋಟಿಗಳಾಗುವುದು. ಈ ಯೋಜನೆಯನ್ನು 8 ಪ್ಯಾಕೇಜ್‌ಗಳಲ್ಲಿ ತೆಗೆದುಕೊಳ್ಳಲಾಗಿದೆ. 3 ಪ್ಯಾಕೇಜ್ ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 5 ಪ್ಯಾಕೇಜ್ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ಹಾಗೂ ಶೀಘ್ರದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯನ್ನು ಮಾರ್ಚ್–2014ರಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯಿದೆ.

3. **'ಬೆಂಗಳೂರಿನ ಹಿಂದಿನ 8 ನಗರಸಭೆ ಮತ್ತು ಪುರಸಭೆ ಪ್ರದೇಶಗಳಲ್ಲಿ'** ಒಳಚರಂಡಿ ವ್ಯವಸ್ಥೆ ಒದಗಿಸುವ ಕಾಮಗಾರಿಗಳನ್ನು ಮಂಡಳಿಯು ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ರೂ.1192 ಕೋಟಿಗಳ ಮೊತ್ತದಲ್ಲಿ ವಿಶ್ವಬ್ಯಾಂಕ್ ಹಾಗೂ ಜೆ.ಎನ್.ಎನ್.ಯು.ಆರ್.ಎಂ. ರವರ ಆರ್ಥಿಕ ನೆರವಿನೊಂದಿಗೆ ಕೈಗೊಂಡಿದೆ. ಈ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು 2014 ರ ಅಂತ್ಯದಲ್ಲಿ ಪೂರ್ಣಮಾಡಲು ಯೋಜಿಸಲಾಗಿದೆ.

4. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ 110 ಹಳ್ಳಿಗಳಿಗೆ ಒಳಚರಂಡಿ ವ್ಯವಸ್ಥೆ ಒದಗಿಸುವ ರೂ.836.00 ಕೋಟಿ ಮೊತ್ತದ ಯೋಜನೆಯನ್ನು ತೆಗೆದುಕೊಳ್ಳಲು ಉದ್ದೇಶಿಸಿದೆ. ಈ ಯೋಜನೆಗೆ ಬೇಕಾಗುವ ಹಣವನ್ನು JICA ಸಂಸ್ಥೆಯಿಂದ ಪಡೆಯಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸುಮಾರು 3 ವರ್ಷಗಳ ಕಾಲಾವಕಾಶ ಬೇಕಾಗಿರುತ್ತದೆ.

5. **ಪರಿಸರ ಕ್ರಿಯಾ ಯೋಜನೆ – ಸಿ –** ಈ ಯೋಜನೆಯಡಿಯಲ್ಲಿ 110 ಕಿ.ಮೀ. ಉದ್ದದ 450 ಮಿ.ಮೀ. ನಿಂದ 2400 ಮಿ.ಮೀ. ವ್ಯಾಸದ ಆರ್.ಸಿ.ಸಿ. ಕೊಳವೆ ಮಾರ್ಗಗಳನ್ನು ಬದಲಾಯಿಸುವ ಕೆಲಸವನ್ನು

ಸೇರಿಸಲಾಗಿದೆ. ಇದರ ವಿವರವಾದ ಯೋಜನಾ ವರದಿ ಸಿದ್ದಪಡಿಸಲಾಗಿದ್ದು, ಈ ಯೋಜನೆಯ ವೆಚ್ಚ ಸುಮಾರು ರೂ.360 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿದೆ. ಈ ಯೋಜನೆಯನ್ನು ಹಲವಾರು ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆದು ಕಾರ್ಯರೂಪಕ್ಕೆ ತರಲು ಯೋಜಿಸಲಾಗಿದೆ. ಈ ಯೋಜನೆಯ ಒಂದು ಭಾಗವಾದ ಹೆಬ್ಬಾಳ ಕಣಿವೆಯ 19 ಕಿ.ಮೀ. ಉದ್ದದ ಕೊಳವೆಮಾರ್ಗಗಳ ಬದಲಾಯಿಸುವಿಕೆಯ ಕಾಮಗಾರಿಗಳನ್ನು ಮೆಗಾಸಿಟಿ ಯೋಜನೆಯಡಿಯಲ್ಲಿ ಈಗಾಗಲೇ ತೆಗೆದುಕೊಳ್ಳಲಾಗಿದೆ. ಈ ಯೋಜನೆಗೆ ಮಂಜೂರಾದ ಮೊತ್ತ ರೂ.35 ಕೋಟಿಗಳು ಮತ್ತು ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸುಮಾರು ಪರಿಷ್ಕೃತ ಮೊತ್ತ ರೂ.45 ಕೋಟಿಗಳಾಗುವುದು. ಈ ಭಾಗದ ಯೋಜನೆಯನ್ನು 2012 ರ ಮಧ್ಯಭಾಗದಲ್ಲಿ ಪೂರ್ಣಮಾಡಲಾಗುವುದು.

6. **ಪರಿಸರ ಕ್ರಿಯಾ ಯೋಜನೆ – ಡಿ** – ಈ ಯೋಜನೆಯಡಿಯಲ್ಲಿ 250 ಕಿ.ಮೀ. ಉದ್ದದ 400 ಮಿ.ಮೀ. ನಿಂದ ಕಡಿಮೆ ವ್ಯಾಸದ ಆರ್.ಸಿ.ಸಿ. ಕೊಳವೆ ಮಾರ್ಗಗಳನ್ನು ಬದಲಾಯಿಸುವ ಕೆಲಸವನ್ನು ತೆಗೆದುಕೊಳ್ಳಲು ಯೋಜಿಸಲಾಗಿದೆ ಹಾಗೂ ಯೋಜನಾ ವರದಿಯನ್ನು ಸಿದ್ದಪಡಿಸಲಾಗುತ್ತಿದೆ. ಈ ಯೋಜನೆಯ ವೆಚ್ಚ ಸುಮಾರು ರೂ.500 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿದೆ.

7. ಕಾವೇರಿ ನಾಲ್ಕನೇ ಹಂತ 2ನೇ ಘಟ್ಟ ಯೋಜನೆಯಡಿ ಇನ್ನೂ 11 ಒಳಚರಂಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ನಿರ್ಮಾಣ ಮಾಡಲಾಗುವುದು. ಇವುಗಳಿಂದ ಸುಮಾರು ದಿನಂಪ್ರತಿ 339 ದಶಲಕ್ಷ ಲೀಟರ್‌ನಷ್ಟು ಸಂಸ್ಕರಿಸಬಹುದಾಗಿದೆ ಹಾಗೂ ಈ ಯೋಜನೆಯನ್ನು 2014 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಮೇಲ್ಕಂಡ ಎಲ್ಲಾ ಯೋಜನೆಗಳು ಪೂರ್ಣಗೊಂಡಲ್ಲಿ ಬೃಹತ್ ಬೆಂಗಳೂರಿನಲ್ಲಿ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯ ನೀರನ್ನು ಪೂರ್ಣಪ್ರಮಾಣದಲ್ಲಿ ಸಂಸ್ಕರಿಸಲು ಸಾಧ್ಯವಾಗುವುದು. ಈ ಯೋಜನೆಗಳನ್ನು ಕಾರ್ಯಾರೂಪಕ್ಕೆ ತರಲು ಇನ್ನೂ 3 ವರ್ಷಗಳ ಕಾಲಾವಕಾಶ ಬೇಕಾಗುವುದು.

**ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಬಗ್ಗೆ**

**459; ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2008–09ರಲ್ಲಿ ವಾರ್ಡ್‌ಗಳಿಗೆ ಬೀದಿ ದೀಪ ನಿರ್ವಹಣೆಗೆ ನೀಡಿದ ಗುತ್ತಿಗೆಯು 2009ರಲ್ಲಿ ಮುಕ್ತಾಯವಾಗಿ ಹೊಸ ಟೆಂಡರ್ ಆಹ್ವಾನಿಸುವಂತೆ ಸರ್ಕಾರ ಅನುಮತಿ ನೀಡಿದ್ದರೂ ಇನ್ನೂ ಹಳೇ ಗುತ್ತಿಗೆದಾರರು ಚಾಲ್ತಿಯಲ್ಲಿರುವುದು ಸರ್ಕಾರದ ಅನುಮತಿ ನೀಡಿದ್ದರೂ ಇನ್ನೂ ಹಳೇ ಗುತ್ತಿಗೆದಾರರು ಚಾಲ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಆ ಗುತ್ತಿಗೆದಾರರು ಸಾಕಷ್ಟು ತಾಂತ್ರಿಕ ಸಿಬ್ಬಂದಿ, ಇತರೆ ಸಿಬ್ಬಂದಿ ಹೊಂದದೇ ಇರುವುದರಿಂದ ಕಾಲ ಕಾಲಕ್ಕೆ ಬೀದಿ ದೀಪ ಅಳವಡಿಸದೆ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

**ಇ)** ಈ ಬೀದಿ ದೀಪ ನಿರ್ವಹಣೆಯಲ್ಲಿ ಖಾಸಗಿ ಗುತ್ತಿಗೆದಾರರು ಕೋಟ್ಯಾಂತರ ಅವ್ಯವಹಾರ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ಬಂದಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಬಂದಿದೆ

**ಆ)** ಹಾಲಿ ಬೀದಿ ದೀಪ ನಿರ್ವಹಣಾ ಗುತ್ತಿಗೆದಾರರು ಟೆಂಡರ್ ಕರಾರಿನಂತೆ ಅವಶ್ಯಕವಿರುವ ತಾಂತ್ರಿಕ ಸಿಬ್ಬಂದಿಯನ್ನು ಹೊಂದಿದ್ದು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಬೀದಿ ದೀಪಗಳನ್ನು ಕಾಲಕಾಲಕ್ಕೆ ನಿರ್ವಹಿಸುತ್ತಿರುತ್ತಾರೆ.

**ಇ)** ಟೆಂಡರ್ ನಿಯಮಗಳ ಅನ್ವಯ ಬೀದಿ ದೀಪಗಳನ್ನು ಗುತ್ತಿಗೆದಾರರು ನಿರ್ವಹಿಸುತ್ತಿರುತ್ತಾರೆ. ಈ ನಿಟ್ಟಿನಲ್ಲಿ ಅವ್ಯವಹಾರಗಳು ನಡೆದಿರುವುದಿಲ್ಲ.

**ಈ)** ಉದ್ಭವಿಸುವುದಿಲ್ಲ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬಜೆಟ್‌ನ ಬಗ್ಗೆ**

**461; ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಕಳೆದ 3 ವರ್ಷಗಳಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮಂಡಿಸಿದ ಬಜೆಟ್ ವಿವರಗಳನ್ನು ನೀಡುವುದು; ಮಂಡಿಸಿದ ಬಜೆಟ್‌ಗೆ ಅನುಗುಣವಾಗಿ ಸಂಗ್ರಹಿಸಿದ ರಾಜಸ್ವ ಎಷ್ಟು; ಮಾಡಿದ ವೆಚ್ಚವೆಷ್ಟು;

**ಆ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2011–12ನೇ ಸಾಲಿನ ಬಜೆಟ್‌ನಲ್ಲಿ ಎಷ್ಟು ಕೋಟಿ ಆದಾಯ ಸಂಗ್ರಹಿಸುವ ಗುರಿ ಹೊಂದಿದೆ; ಇದರಲ್ಲಿ 31–12–2011ರ ವರೆವಿಗೂ ಎಷ್ಟು ಆದಾಯ ಸಂಗ್ರಹಿಸಿದೆ;

**ಇ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2011–12ನೇ ಸಾಲಿನ ಬಜೆಟ್‌ನಲ್ಲಿ ಎಷ್ಟು ಕೋಟಿ ವೆಚ್ಚ ಮಾಡಲು ಉದ್ದೇಶಿಸಿದೆ; ಇದರಲ್ಲಿ ರಾಜಸ್ವ ವೆಚ್ಚವೆಷ್ಟು ಹಾಗೂ ಬಂಡವಾಳ ವೆಚ್ಚವೆಷ್ಟು; 31–12–2011ರ ವರೆವಿಗೂ ಎಷ್ಟು ಮೊತ್ತವನ್ನು ರಾಜಸ್ವದಲ್ಲಿ ಹಾಗೂ ಬಂಡವಾಳ ಹೂಡಿಕೆಯಲ್ಲಿ ವೆಚ್ಚ ಮಾಡಿದೆ.

**ಈ)** ಉದ್ದೇಶಿತ ಆದಾಯ ಸಂಗ್ರಹದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಫಲವಾದರೆ ಸರ್ಕಾರವು ನಿಗಧಿತ ಯೋಜನೆಗಳನ್ನು ಕೈಗೊಳ್ಳಲು ಹಣ ಸಹಾಯ ಮಾಡುವುದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 3 ವರ್ಷಗಳ ಆಯ–ವ್ಯಯ ವಿವರ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| ಕ್ರ ಸಂ | ವರ್ಷ | ಆಯವ್ಯಯ ಅಂದಾಜು | ವಾಸ್ತವ ರಾಜಸ್ವ ಸಂಗ್ರಹಣೆ | ವಾಸ್ತವ ವೆಚ್ಚಗಳು |
|---|---|---|---|---|
| 1. | 2008–09 | 2918.71 | 2507.07 | 2432.80 |
| 2. | 2009–10 | 4238.41 | 3661.19 | 3580.85 |
| 3. | 2010–11 | 8862.03 | 3326.30 | 3620.22 |

**ಆ)** 2011–12 ನೇ ಸಾಲಿನಲ್ಲಿ ರೂ. **5144.00** ಕೋಟಿ ಆದಾಯ ಸಂಗ್ರಹಿಸುವ ಗುರಿ ಹೊಂದಲಾಗಿದೆ. ದಿ: 31–12–2011ಕ್ಕೆ ರೂ. **1556.62** ಕೋಟಿ ಆದಾಯ ಸಂಗ್ರಹವಾಗಿದೆ.

**ಇ)** 2011–12ನೇ ಬಜೆಟ್‌ನಲ್ಲಿ ರೂ. **9401.05** ಕೋಟಿ ವೆಚ್ಚ ಮಾಡಲು ಅಂದಾಜಿಸಿದೆ. ರೂ. **2515.19** ಕೋಟಿ ರಾಜಸ್ವ ವೆಚ್ಚ ಮತ್ತು ರೂ. **6885.86** ಕೋಟಿ ಬಂಡವಾಳ ವೆಚ್ಚ ಒಳಗೊಂಡಿರುತ್ತದೆ. 31–12–2011ರ ಅಂತ್ಯಕ್ಕೆ ರೂ.**1268.27** ಕೋಟಿ ರಾಜಸ್ವ ವೆಚ್ಚ ಹಾಗೂ ರೂ.**1361.39** ಲಕ್ಷ ಬಂಡವಾಳ/ಹೂಡಿಕೆ ವೆಚ್ಚ ಮಾಡಲಾಗಿರುತ್ತದೆ.

**ಈ)** ಪರಿಶೀಲಿಸಲಾಗುವುದು.

## ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳು ಮತ್ತು ಜಾನುವಾರುಗಳಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ

**460; ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಬೆಂಗಳೂರು ನಗರ ಸುತ್ತಮುತ್ತಲ ಪ್ರದೇಶಗಳಲ್ಲಿ ಬೀದಿ ನಾಯಿಗಳಿಂದ ಹಾಗೂ ಜಾನುವಾರುಗಳಿಂದ (Stray Cattle) ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು;

**ಇ)** ಕಳೆದ ಎರಡು ವರ್ಷಗಳಿಂದ ಈ ಬೀದಿ ನಾಯಿಗಳಿಂದ ಹಾಗೂ ಜಾನುವಾರುಗಳಿಂದ ತೊಂದರೆಗೊಳಗಾಗಿರುವ ಜನರ ಸಂಖ್ಯೆ ಎಷ್ಟು

**ಈ)** ಇಂತಹ ಆಕಸ್ಮಿಕ ಘಟನೆಯಿಂದ ನೊಂದವರಿಗೆ ಸರ್ಕಾರದಿಂದ ಯಾವ ರೀತಿ ಪರಿಹಾರವನ್ನು ಒದಗಿಸಲಾಗಿದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಬಂದಿದೆ.

**ಆ)** ಬೀದಿನಾಯಿಗಳ ಸಂಖ್ಯೆ ಹಾಗೂ ಹಾವಳಿಯನ್ನು ತಪ್ಪಿಸಲು ಅನಿಮಲ್ ಬರ್ತ್ ಕಂಟ್ರೋಲ್ ರೂಲ್ಸ್–2001ರ ಪ್ರಕಾರ ಸಂತಾನ ಹರಣ ಶಸ್ತ್ರಚಿಕಿತ್ಸೆ ಹಾಗೂ ಹುಚ್ಚುನಾಯಿ ರೋಗನಿರೋಧಕ ಚುಚ್ಚು ಮದ್ದು ಹಾಕುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ.

ಬೀಡಾಡಿ ದನಗಳನ್ನು ದನದ ದೊಡ್ಡಿಯಲ್ಲಿ ಕೂಡಿ ಹಾಕುತ್ತಿದ್ದು ಮಾಲೀಕರಿಂದ ನಿಯಮಾನುಸಾರ ದಂಡವನ್ನು ವಸೂಲು ಮಾಡಲಾಗುತ್ತಿದೆ.

**ಇ)** 2010–11ನೇ ಸಾಲಿನಲ್ಲಿ ನಾಯಿ ಕಟ್ಟಿರುವ ಸಂಖ್ಯೆ: 24,120

2011–12ನೇ ಸಾಲಿನಲ್ಲಿ ನಾಯಿ ಕಚ್ಚಿರುವ ಸಂಖ್ಯೆ: 13,945

**ಈ)**

1. ನಾಯಿ ಕಡಿತಕ್ಕೆ ಒಳಗಾಗಿರುವ ಬಿಪಿಎಲ್ ಕುಟುಂಬದ ಸದಸ್ಯರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಗಳಲ್ಲಿ ಉಚಿತವಾಗಿ ಹುಚ್ಚುನಾಯಿ ರೋಗನಿರೋಧಕ ಚುಚ್ಚುಮದ್ದನ್ನು ನೀಡಲಾಗುತ್ತಿದೆ.
2. ಪಾಲಿಕೆಯು ಆರು ರೆಫೆರಲ್ ಆಸ್ಪತ್ರೆಗಳಲ್ಲಿ ನಾಯಿ ಕಡಿತಕ್ಕೆ ಒಳಗಾದ ಸಾರ್ವಜನಿಕರಿಗೆ ಉಚಿತವಾಗಿ ಇಂಟ್ರಾಡರ್ಮಲ್ ಹುಚ್ಚುನಾಯಿ ರೋಗ ನಿರೋಧಕ ಲಸಿಕೆಯನ್ನು ನೀಡಲಾಗುತ್ತಿದೆ, ಮತ್ತು
3. ಪಾಲಿಕೆಯ ಆಸ್ಪತ್ರೆಗಳಲ್ಲಿ ಇತರೆ ಸಾರ್ವಜನಿಕರಿಗೆ ರೂ.100/– ರಿಯಾಯಿತಿ ದರದಲ್ಲಿ ಹುಚ್ಚುನಾಯಿ ರೋಗ ನಿರೋಧಕ ಲಸಿಕೆಯನ್ನು ನೀಡಲಾಗುತ್ತಿದೆ.

### ಮಾನವನ ಅಂಗಾಂಗ ಕಸಿ ಮಾಡುವ ಆಸ್ಪತ್ರೆಗಳ ಬಗ್ಗೆ

**486; ಶ್ರೀಮತಿ ಭಾರತಿ ಶೆಟ್ಟಿ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ರಾಜ್ಯದಲ್ಲಿ ಮಾನವನ ಅಂಗಾಂಗ ಕಸಿ ಮಾಡಲು ಪರವಾನಗಿ ನೀಡಲಾದ ಆಸ್ಪತ್ರೆಗಳು ಯಾವುವು;

**ಆ)** ಪರವಾನಗಿ ಇಲ್ಲದೇ ಅಂಗಾಂಗ ಕಸಿ ಮಾಡುವ ಆಸ್ಪತ್ರೆಗಳನ್ನು ಗುರುತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

**ಇ)** ಈವರೆಗೆ ಗುರುತಿಸಲಾದ ಆಸ್ಪತ್ರೆಗಳು ಎಷ್ಟು; ಅವು ಯಾವುವು; (ಜಿಲ್ಲಾವಾರು ಮಾಹಿತಿ ನೀಡುವುದು)

**ಈ)** ಪೋರ್ಟಿಸ್ ಆಸ್ಪತ್ರೆಗೆ ಮಾನವನ ಅಂಗಾಂಗ ಕಸಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೋಟೀಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ರಾಜ್ಯದಲ್ಲಿ ಮಾನವನ ಅಂಗಾಂಗ ಕಸಿ ಮಾಡಲು 78 ಆಸ್ಪತ್ರೆಗಳಿಗೆ ಪರವಾನಗಿ ನೀಡಲಾಗಿದೆ. ಇವುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

**ಆ)** ಪರವಾನಗಿ ಇಲ್ಲದೇ ಅಂಗಾಂಗ ಕಸಿ ಮಾಡುವುದು ಕಾನೂನಿನನ್ವಯ ಅಪರಾಧ ಎಂಬ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸರ್ಕಾರವು Zonal Co-ordination Committee of Karnataka (ZCCK) ಮೂಲಕ ಹಮ್ಮಿಕೊಂಡಿದೆ ಹಾಗೂ ಈ ಬಗ್ಗೆ ಅನಧಿಕೃತವಾಗಿ ಅಂಗಾಂಗ ಕಸಿ ಮಾಡುತ್ತಿರುವ ಆಸ್ಪತ್ರೆಗಳಿದ್ದಲ್ಲಿ ಅವುಗಳ ವಿರುದ್ಧ ಕಾಯಿದೆಯಾನುಸಾರ ಕ್ರಮ ಜರುಗಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರ ಅಧ್ಯಕ್ಷತೆಯಲ್ಲಿ ತಜ್ಞರನ್ನೊಳಗೊಂಡ Appropriate Authority ಯನ್ನು ರಚಿಸಲಾಗಿದೆ.

**ಇ)** ಬೆಂಗಳೂರು ನಗರ ಜಿಲ್ಲೆಯಲ್ಲಿ ಮಾತ್ರ ಒಂದು ಆಸ್ಪತ್ರೆ ಗುರುತಿಸಲಾಗಿದೆ.

ಫೋರ್ಟಿಸ್ ಆಸ್ಪತ್ರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.

**ಈ)** ಬಂದಿದೆ.

ಈ ಪ್ರಕರಣವು ನಾಯಾಲಯದ ವಿಚಾರಣೆಯಲ್ಲಿದೆ. ಉಚ್ಚ ನ್ಯಾಯಾಲಯ ನಿರ್ದೇಶನದಂತೆ ವಾಸ್ತವಾಂಶಗಳ ಬಗ್ಗೆ ನ್ಯಾಯಾಲಯಕ್ಕೆ ಮಾಹಿತಿ ಒದಗಿಸಲಾಗಿದೆ.

## ರಾಜ್ಯದಲ್ಲಿ ಉಂಟಾದ ಬರಗಾಲದ ಬಗ್ಗೆ

**763; ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿ ಬರಗಾಲ ಪ್ರದೇಶವೆಂದು ಗುರುತಿಸಲಾಗಿರುವ ತಾಲ್ಲೂಕುಗಳೆಷ್ಟು; (ವಿವರ ನೀಡುವುದು)

**ಆ)** ಬರಪರಿಹಾರ ಕಾಮಗಾರಿಗಳನ್ನು ನಿರ್ವಹಿಸಲು ಉಸ್ತುವಾರಿ ಸಮಿತಿಯನ್ನು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚಿಸಲಾಗಿದೆಯೇ;

**ಇ)** ಹಾಗಿದ್ದಲ್ಲಿ, ಸದರಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು ಯಾರು;

**ಈ)** ಇಲ್ಲಿಯವರೆಗೆ ಬರಪರಿಹಾರ ಕಾಮಗಾರಿಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

**ಉ)** ಬರಗಾಲ ಪ್ರದೇಶವೆಂದು ಗುರುತಿಸಲಾದ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಅನುಬಂಧ–1ರಲ್ಲಿ ನೀಡಿದೆ.

**ಆ)** ಹೌದು.

**ಇ)** ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್ ಅಧ್ಯಕ್ಷರು ಮತ್ತು ಸದಸ್ಯರು

1) ಸಂಬಂಧಿಸಿದ ವಿಧಾನಸಭಾ ಸದಸ್ಯರು – ಅಧ್ಯಕ್ಷರು
2) ಸಂಬಂಧಿಸಿದ ವಿಧಾನ ಪರಿಷತ್ ಸದಸ್ಯರು – ಸದಸ್ಯರು
3) ಸಂಬಂಧಿಸಿದ ತಾಲ್ಲೂಕು ಪಂಚಾಯತ್ ಸದಸ್ಯರು – ಸದಸ್ಯರು
4) ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ – ಸದಸ್ಯರು
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಿಲ್ಲಾ ಪಂಚಾಯತ್)
6) ತಾಲ್ಲೂಕು ತಹಶೀಲ್ದಾರ್ – ಸದಸ್ಯ ಕಾರ್ಯದರ್ಶಿ

**ಈ)** ಅನುಬಂಧ–2ರಲ್ಲಿ ನೀಡಿದೆ.

**ಉ)** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆವತಿಯಿಂದ ಗ್ರಾಮೀಣ ಪ್ರದೇಶಗಳಲ್ಲಿನ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಸಂಬಂಧ, ರೂ.202.00 ಕೋಟಿ ಅಂದಾಜು ಮೊತ್ತದ ಕಾಮಗಾರಿಗಳನ್ನು ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾದ ಟಾಸ್ಕ್ ಪೋರ್ಸ್ ಕಮಿಟಿ ಮೂಲಕ ಕೈಗೊಳ್ಳಲಾಗುತ್ತಿದ್ದು, ರೂ.92.46 ಕೋಟಿ ಹಣ ಬಿಡುಗಡೆಯಾಗಿದೆ.

ಸಮಸ್ಯಾತ್ಮಕ ಜನವಸತಿಗಳಿಗೆ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ರೂ.2590.94 ಕೋಟಿ ಅಂದಾಜಿನ 23 ಜಿಲ್ಲೆಗಳ 217 ಎಂ.ವಿ.ಎಸ್ ಯೋಜನೆಗಳಿಗೆ (ಎಸ್.ಎಲ್.ಎಸ್.ಎಸ್.ಸಿ) ರಾಜ್ಯ ಮಟ್ಟದ ಯೋಜನೆಗಳ ಮಂಜೂರಾತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಇದರಿಂದ 4112 ಜನವಸತಿಗಳಿಗೆ ಅನುಕೂಲವಾಗಲಿದೆ.

2011–12ರ ಸಾಲಿಗೆ ರಾಜ್ಯ ಮತ್ತು ಕೇಂದ್ರ ವಲಯಗಳಡಿ ವಿವಿಧ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನಕ್ಕೆ ರೂ.1500.00 ಕೋಟಿ ಅಂದಾಜಿನ ಕ್ರಿಯಾ ಯೋಜನೆಯನ್ನು ಅನುಮೋದಿಸಿದೆ. ಈವರೆವಿಗೆ ಒಟ್ಟು ರೂ.920.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.549.00 ಕೋಟಿ ವೆಚ್ಚವಾಗಿದೆ.

ಕಂದಾಯ ಇಲಾಖೆಯ ವತಿಯಿಂದ ನೀರು ಕೊಳವೆಗಳ ತುರ್ತು ದುರಸ್ಥಿ ಮತ್ತು ಕೊಳಚೆ ಬಾವಿಗಳ ತುರ್ತು ದುರಸ್ಥಿ ಮಾಡಲು ಹಾಗೂ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ರೂ.58.07 ಕೋಟಿಗಳ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಲಾಗಿದ್ದು, ರೂ.34.66 ಕೋಟಿಗಳನ್ನು ಬಿಡುಗಡೆ ಮಾಡಿದೆ.

~~ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ 763 ಕ್ಕೆ~~ ಅನುಬಂಧ -1

**2011-12ನೇ ಸಾಲಿನಲ್ಲಿ ಬರ ಎಂದು ಘೋಷಿಸಿದ ತಾಲ್ಲೂಕುಗಳ ಪಟ್ಟಿ**

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಸಂಖ್ಯೆ |
|---|---|---|---|
| 1 | ರಾಮನಗರ | ಚನ್ನಪಟ್ಟಣ | 03 |
| | | ಕನಕಪುರ | |
| | | ಮಾಗಡಿ | |
| 2 | ಕೋಲಾರ | ಬಂಗಾರಪೇಟೆ | 04 |
| | | ಕೋಲಾರ | |
| | | ಶ್ರೀನಿವಾಸಪುರ | |
| | | ಮುಳಬಾಗಿಲು | |
| 3 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 06 |
| | | ಚಿಂತಾಮಣಿ | |
| | | ಗೌರಿಬಿದನೂರು | |
| | | ಬಾಗೇಪಲ್ಲಿ | |
| | | ಗುಡಿಬಂಡೆ | |
| | | ಶಿಡ್ಲಘಟ್ಟ | |
| 4 | ತುಮಕೂರು | ಕುಣಿಗಲ್ | 10 |
| | | ಮಧುಗಿರಿ | |
| | | ಪಾವಗಡ | |
| | | ಶಿರಾ | |
| | | ತುಮಕೂರು | |
| | | ಚಿಕ್ಕನಾಯಕನಹಳ್ಳಿ | |
| | | ತಿಪಟೂರು | |
| | | ಗುಬ್ಬಿ | |
| | | ಕೊರಟಗೆರೆ | |
| | | ತುರುವೇಕೆರೆ | |
| 5 | ಚಿತ್ರದುರ್ಗ | ಚಳ್ಳಕೆರೆ | 06 |
| | | ಚಿತ್ರದುರ್ಗ | |
| | | ಹೊಸದುರ್ಗ | |
| | | ಮೊಳಕಾಲ್ಮೂರು | |
| | | ಹಿರಿಯೂರು | |
| | | ಹೊಳಲ್ಕೆರೆ | |
| 6 | ಚಾಮರಾಜನಗರ | ಚಾಮರಾಜನಗರ | 04 |
| | | ಗುಂಡ್ಲುಪೇಟೆ | |
| | | ಕೊಳ್ಳೇಗಾಲ | |
| | | ಯಳಂದೂರು | |
| 7 | ಮೈಸೂರು | ಕೆ.ಆರ್.ನಗರ | 05 |
| | | ನಂಜನಗೂಡು | |
| | | ಟಿ.ನರಸೀಪುರ | |
| | | ಪಿರಿಯಾಪಟ್ಟಣ | |
| | | ಮೈಸೂರು | |

| | | | |
|---|---|---|---|
| 8 | ಮಂಡ್ಯ | ಕೆ.ಆರ್.ಪೇಟೆ<br>ಮದ್ದೂರು<br>ಮಳವಳ್ಳಿ<br>ಮಂಡ್ಯ<br>ನಾಗಮಂಗಲ<br>ಪಾಂಡವಪುರ<br>ಶ್ರೀರಂಗಪಟ್ಟಣ | 07 |
| 9 | ಬಳ್ಳಾರಿ | ಬಳ್ಳಾರಿ<br>ಹೊಸಪೇಟೆ<br>ಹೆಚ್.ಬಿ.ಹಳ್ಳಿ<br>ಕೂಡ್ಲಗಿ<br>ಸಂಡೂರು<br>ಸಿರಗುಪ್ಪ<br>ಹಡಗಲಿ | 07 |
| 10 | ಕೊಪ್ಪಳ | ಗಂಗಾವತಿ<br>ಕೊಪ್ಪಳ<br>ಕುಷ್ಟಗಿ<br>ಯಲ್ಬುರ್ಗಾ | 04 |
| 11 | ರಾಯಚೂರು | ದೇವದುರ್ಗ<br>ಲಿಂಗಸಗೂರು<br>ಮಾನ್ವಿ<br>ರಾಯಚೂರು<br>ಸಿಂಧನೂರು | 05 |
| 12 | ಗುಲ್ಬರ್ಗಾ | ಅಫಜಲಪುರ<br>ಆಳಂದ<br>ಚಿಂಚೋಳಿ<br>ಚಿತ್ತಾಪುರ<br>ಗುಲ್ಬರ್ಗಾ<br>ಜೇವರ್ಗಿ<br>ಸೇಡಂ | 07 |
| 13 | ಯಾದಗಿರಿ | ಶಹಾಪುರ<br>ಶೋರಾಪುರ<br>ಯಾದಗಿರಿ | 03 |
| 14 | ಬೀದರ್ | ಬೀದರ್<br>ಔರಾದ್<br>ಭಾಲ್ಕಿ<br>ಬಸವಕಲ್ಯಾಣ<br>ಹುಮ್ನಾಬಾದ್ | 05 |
| 15 | ಬಾಗಲಕೋಟೆ | ಬೀಳಗಿ<br>ಜಮಖಂಡಿ<br>ಮುಧೋಳ್<br>ಬಾದಾಮಿ<br>ಹುನಗುಂದ<br>ಬಾಗಲಕೋಟೆ. | 06 |

| | | | |
|---|---|---|---|
| 16 | ಬಿಜಾಪುರ | ಬಸವನ ಬಾಗೇವಾಡಿ<br>ಬಿಜಾಪುರ<br>ಇಂಡಿ<br>ಸಿಂಧಗಿ<br>ಮುದ್ದೇಬಿಹಾಳ್ | 05 |
| 17 | ಗದಗ್ | ಗದಗ್<br>ಮುಂಡರಗಿ<br>ರೋಣ<br>ಶಿರಹಟ್ಟಿ<br>ನರಗುಂದ | 05 |
| 18 | ಧಾರವಾಡ | ನವಲಗುಂದ<br>ಹುಬಳ್ಳಿ<br>ಕುಂದಗೋಳ<br>ಧಾರವಾಡ | 04 |
| 19 | ಹಾಸನ | ಅರಸೀಕೆರೆ<br>ಚನ್ನರಾಯಪಟ್ಟಣ<br>ಹಾಸನ<br>ಹೊಳೆನರಸೀಪುರ<br>ಅರಕಲಗೂಡು<br>ಬೇಲೂರು | 06 |
| 20 | ಚಿಕ್ಕಮಗಳೂರು | ಕಡೂರು | 01 |
| 21 | ಬೆಳಗಾಂ | ಅಥಣಿ<br>ಸೌದತ್ತಿ<br>ಚಿಕ್ಕೋಡಿ<br>ರಾಮದುರ್ಗ<br>ಬೈಲಹೊಂಗಲ<br>ಹುಕ್ಕೇರಿ<br>ರಾಯಭಾಗ | 07 |
| 22 | ದಾವಣಗೆರೆ | ಜಗಳೂರು<br>ಹರಪನಹಳ್ಳಿ<br>ದಾವಣಗೆರೆ<br>ಹೊನ್ನಾಳಿ | 04 |

| | | | |
|---|---|---|---|
| 23 | ಹಾವೇರಿ | ರಾಣೆಬೆನ್ನೂರು<br>ಶಿಗ್ಗಾಂವ್<br>ಸವಣೂರು<br>ಹಿರೇಕೆರೂರು<br>ಬ್ಯಾಡಗಿ<br>ಹಾನಗಲ್<br>ಹಾವೇರಿ | 07 |
| 24 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ<br>ದೊಡ್ಡಬಳ್ಳಾಪುರ | 02 |
| | ಒಟ್ಟು | | 123 |

ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ [illegible] ಕ್ಕೆ ಅನುಬಂಧ -2

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲೆಗಳು | ಮೊತ್ತ |
|---|---|---|
| 1 | ಬೆಂಗಳೂರು ನಗರ | 125 |
| 2 | ಬೆಂಗಳೂರು ಗ್ರಾಮಾಂತರ | 50 |
| 3 | ಬಾಗಲಕೋಟೆ | 400 |
| 4 | ಬೆಳಗಾವಿ | 100 |
| 5 | ಬಳ್ಳಾರಿ | 625 |
| 6 | ಬಿಜಾಪುರ | 650 |
| 7 | ಬೀದರ | 350 |
| 8 | ಚಾಮರಾಜನಗರ | 450 |
| 9 | ಚಿಕ್ಕಮಗಳೂರು | 300 |
| 10 | ಚಿತ್ರದುರ್ಗ | 750 |
| 11 | ಚಿಕ್ಕಬಳ್ಳಾಪುರ | 400 |
| 12 | ದಕ್ಷಿಣ ಕನ್ನಡ | 200 |
| 13 | ದಾವಣಗೆರೆ | 300 |
| 14 | ಧಾರವಾಡ | 100 |
| 15 | ಗದಗ್ | 500 |
| 16 | ಗುಲ್ಬರ್ಗಾ | 400 |
| 17 | ಹಾಸನ | 150 |
| 18 | ಹಾವೇರಿ | 50 |
| 19 | ಕೊಡಗು | 500 |
| 20 | ಕೊಪ್ಪಳ | --- |
| 21 | ಕೋಲಾರ | 650 |
| 22 | ಮಂಡ್ಯ | 100 |

| | | |
|---|---|---|
| 23 | ಮೈಸೂರು | 350 |
| 24 | ರಾಯಚೂರು | 475 |
| 25 | ರಾಮನಗರ | 500 |
| 26 | ಶಿವಮೊಗ್ಗ | 50 |
| 27 | ತುಮಕೂರು | 550 |
| 28 | ಉಡುಪಿ | 200 |
| 29 | ಉತ್ತರ ಕನ್ನಡ | 550 |
| 30 | ಯಾದಗಿರಿ. | 300 |
| | ಒಟ್ಟು | 10,125 |

## ಕರ್ನಾಟಕ ರಾಜ್ಯವು ಬ್ರ್ಯಾಂಡ್ ಕರ್ನಾಟಕವಾಗಿ ಪ್ರವಾಸೋದ್ಯಮದಲ್ಲಿ ಗುರುತಿಸಿಕೊಳ್ಳುವ ಬಗ್ಗೆ.

**524; ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ಕರ್ನಾಟಕ ರಾಜ್ಯದಲ್ಲಿ ಯಾವ ಯಾವ ಪ್ರದೇಶಗಳನ್ನು ಪ್ರವಾಸೋದ್ಯಮ ಸ್ಥಳ/ ಕೇಂದ್ರಗಳಾಗಿ ಸರ್ಕಾರವು ಗುರುತಿಸಿದೆ; (ಜಿಲ್ಲಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

**ಆ)** ಹಲವಾರು ಪ್ರವಾಸಿ ತಾಣಗಳಿಗೆ ಸಂದರ್ಶಿಸಲು ಇಚ್ಛಿಸುವ ಪ್ರವಾಸಿಗರು ಉತ್ತಮವಲ್ಲದ ರಸ್ತೆ, ದೊರಕದ ಮಾಹಿತಿ, ತಂಗಲು ಇರುವ ತೊಂದರೆಗಳು ಇವುಗಳ ಬಗ್ಗೆ ಕೊಡುವ ದೂರುಗಳನ್ನು ಸರ್ಕಾರವು ತೀವ್ರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಏನು;

**ಇ)** ಕರ್ನಾಟಕ ಪ್ರವಾಸೋದ್ಯಮವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಸರ್ಕಾರದ ದೀರ್ಘಕಾಲೀನ ಯೋಜನೆಗಳು ಏನು; (ಮಾಹಿತಿ ಒದಗಿಸುವುದು)

**ಈ)** ಬ್ರ್ಯಾಂಡ್ ಕರ್ನಾಟಕವಾಗಿ ಪ್ರವಾಸೋದ್ಯಮದಲ್ಲಿ ಗುರುತಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳು ಏನು (ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಹೆಚ್ಚಿನ ಅನುದಾನ, ಸಹಕಾರ ಪಡೆಯುವ ನಿಟ್ಟಿನಲ್ಲಿ ಆಗಿರುವ ಪ್ರಗತಿಯ ಮಾಹಿತಿ ಒದಗಿಸುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಇಲಾಖೆಯು ರಾಜ್ಯದಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳ ಪಟ್ಟಿಯನ್ನು ಲಗತ್ತಿಸಿದೆ.

**ಆ)** ಸಾರ್ವಜನಿಕರು, ಪ್ರವಾಸಿಗರಿಂದ ಬರುವ ದೂರುಗಳು ಹಾಗೂ ಜಿಲ್ಲಾಡಳಿತದ ಶಿಫಾರಸ್ಸುಗಳನ್ನು ಆಧರಿಸಿ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ. ಅಲ್ಲದೆ,

ಅನುದಾನದ ಲಭ್ಯತೆಯನ್ನಾಧರಿಸಿ ಪ್ರವಾಸಿ ತಾಣಗಳಲ್ಲಿ ಯಾತ್ರಿನಿವಾಸ, ಡಾರ್ಮಿಟರಿ ನಿರ್ಮಾಣ ಹಾಗೂ ಪ್ರವಾಸಿ ಕೂಡು ರಸ್ತೆಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ.

ಇ) ಕರ್ನಾಟಕ ಪ್ರವಾಸೋದ್ಯಮವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್, ಯಾತ್ರಿನಿವಾಸ, ಡಾರ್ಮಿಟರಿ, ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ, ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಕೂಡು ರಸ್ತೆಗಳ ಅಭಿವೃದ್ಧಿ ಹಾಗೂ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. ಇದರ ಜೊತೆಗೆ ದೀರ್ಘಕಾಲದ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಅನುವಾಗುವಂತೆ ಎಲ್ಲಾ ಜಿಲ್ಲೆಗಳಿಗೆ ಪ್ರವಾಸಿ ಮಾಸ್ಟರ್ ಪ್ಲಾನ್ ತಯಾರಿಸಲಾಗುತ್ತಿದೆ ಈ ಕಾರ್ಯ ಅಂತಿಮಗೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) 'ಕರ್ನಾಟಕ–ಒಂದು ರಾಜ್ಯ ಹಲವು ಜಗತ್ತುಗಳು' ಎಂಬ ಇಲಾಖೆ ಲಾಂಛನದಡಿ ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸಲಾಗುತ್ತಿದೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಮೇಳಗಳಲ್ಲಿ ಇಲಾಖೆಯು ಭಾಗವಹಿಸಿ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಸಮಾವೇಶಗಳನ್ನು ಹಾಗೂ ರೋಡ್‌ಶೋಗಳನ್ನು ನಡೆಸಲಾಗುತ್ತಿದೆ. ರಾಜ್ಯದ ಪ್ರಮುಖ ಪ್ರವಾಸಿ ತಾಣಗಳು ಹಾಗೂ ಸರ್ಕ್ಯೂಟ್‌ಗಳಲ್ಲಿ ಅಗತ್ಯ ಪ್ರವಾಸಿ ಸೌಲಭ್ಯಗಳನ್ನು ಕೇಂದ್ರ ಪ್ರವಾಸೋದ್ಯಮ ಹಾಗೂ ಕೇಂದ್ರ ಯೋಜನಾ ಇಲಾಖೆಗಳ ಆರ್ಥಿಕ ನೆರವು ಹಾಗೂ ರಾಜ್ಯ ಸರ್ಕಾರದ ಅನುದಾನದೊಂದಿಗೆ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತಿದೆ. ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಧನಸಹಾಯದೊಂದಿಗೆ ಪ್ರಾರಂಭಿಸಿರುವ ಸುವರ್ಣರಥ (ಗೋಲ್ಡನ್ ಚಾರಿಯಟ್) ನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರಾಂಡ್ ಕರ್ನಾಟಕ ಆಗಿ ಬಿಂಬಿಸಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯವು ರೂ.5586.65 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ.

**ಕರ್ನಾಟಕ ರಾಜ್ಯದಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳು**

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಪ್ರವಾಸಿ ತಾಣಗಳು | | ಒಟ್ಟು ಪ್ರವಾ ತಾಣಗಳ ಸಂಖ್ಯೆ |
|---|---|---|---|---|---|
| | | | ಹಾಲಿ ಇರುವ ತಾಣಗಳು | ನೂತನ ತಾಣಗಳು | |
| 1 | 2 | 3 | 4 | 5 | 6 |
| 1. | ಬಾಗಲಕೋಟೆ | ಹುನಗುಂದ | ಐಹೊಳೆ, ಕೂಡಲಸಂಗಮ | | 7 |
| | | ಬಾದಾಮಿ | ಬಾದಾಮಿ, ಪಟ್ಟದಕಲ್ಲು, ಬನಶಂಕರಿ, ಮಹಾಕೂಟ, ಶಿವಯೋಗಿ ಮಂದಿರ | | |
| 2. | ಬೆಂಗಳೂರು ಗ್ರಾಮಾಂತರ | ನೆಲಮಂಗಲ | ಶಿವಗಂಗೆ | ವಿಠಲ ಮಂದಿರ | 6 |
| | | ದೊಡ್ಡಬಳ್ಳಾಪುರ | ಘಾಟಿ ಸುಬ್ರಹ್ಮಣ್ಯ, ಕಂಸವಾಡಿ | ಮದುರೈ ದೇವಸ್ಥಾನ | |
| | | ದೇವನಹಳ್ಳಿ | ಅಂತರರಾಷ್ಟ್ರೀಯ ವಿಮಾನ ನಿಲ್ದಾಣ | | |
| 3. | ಬೆಂಗಳೂರು ನಗರ | ಬೆಂಗಳೂರು | ಕಬ್ಬನ್ ಪಾರ್ಕ್, ಲಾಲ್‌ಭಾಗ್, ಟಿಪ್ಪುಫೋರ್ಟ್ ಟಿಪ್ಪು ಅರಮನೆ | ಸೋಮೇಶ್ವರ ದೇವಸ್ಥಾನ, ಇಸ್ಕಾನ್ ದೇವಸ್ಥಾನ | 11 |
| | | ಬೆಂಗಳೂರು ಉತ್ತರ | ಹೆಸರಘಟ್ಟ | | |
| | | ಬೆಂಗಳೂರು ದಕ್ಷಿಣ | ರಾಮೋಹಳ್ಳಿ ದೊಡ್ಡ ಆಲದಮರ | | |
| | | ಆನೇಕಲ್ | ಮುತ್ಯಾಲಮಡುವು, ಬನ್ನೇರುಘಟ್ಟ | | |
| 4. | ಬೆಳಗಾಂ | ಬೆಳಗಾಂ | ರಾಮತೀರ್ಥ | ರಾಜಹಂಸಘಡ್, ನವಿಲುತೀರ್ಥ | 16 |
| | | ಬೈಲಹೊಂಗಲ | ಶ್ರೀ ಸೊಗಲಕ್ಷೇತ್ರ, ಕಿತ್ತೂರು, ದೇಗಾಮ್ / ದೇಗಾವಿ | | |
| | | ಸೌದತ್ತಿ | ಸೌದತ್ತಿ, ಯಲ್ಲಮ್ಮ, ಮಲಪ್ರಭ ಡ್ಯಾಂ | | |
| | | ಗೋಕಾಕ್ | ಗೋಕಾಕ್ ಫಾಲ್ಸ್ | ಗೊಡಚಿನಮಲ್ಕಿ ಫಾಲ್ಸ್, ಧೂಪದಾಳ | |
| | | ಖಾನಾಪುರ | ಹಲಸಿ | | |
| | | ರಾಮದುರ್ಗ | ಶಬರಿ ವ್ಯಾಲಿ | ವಿಡಸೋಸಿ | |
| | | ಹುಕ್ಕೇರಿ | ಘಟಪ್ರಭ | | |
| 5. | ಬಳ್ಳಾರಿ | ಬಳ್ಳಾರಿ | | ಕೆಂಚನಗುಡ್ಡ, ಬಳ್ಳಾರಿ ಕೋಟೆ, ನಾಗಲಕೆರೆ, ಸಂಗನಕಲ್ಲು | 12 |
| | | ಹೊಸಪೇಟೆ | ಹಂಪಿ, ತುಂಗಭದ್ರಾ ಜಲಾಶಯ | | |
| | | ಸಂಡೂರು | ತೋರಣಗಲ್, ರಾಮ್‌ಘಡ್ | | |
| | | ಹಡಗಲಿ | | ಕುರವತ್ತಿ, ಮೈಲಾರ | |
| | | ಕೂಡ್ಲಗಿ | | ಕೊಟ್ಟೂರು, ಉಜ್ಜನಿ | |
| 6. | ಬೀದರ್ | ಬೀದರ್ | ಬೀದರ್ | | 6 |
| | | ಹುಮ್ನಾಬಾದ್ | ಹುಮ್ನಾಬಾದ್, ಜಲಸಂಗಿ | | |
| | | ಬಸವಕಲ್ಯಾಣ | ಬಸವಕಲ್ಯಾಣ, ನಾರಾಯಣಪುರ | | |
| | | ಭಾಲ್ಕಿ | ಕಾರಂಜ ಜಲಾಶಯ | | |
| 7. | ಬಿಜಾಪುರ | ಬಿಜಾಪುರ | ಬಿಜಾಪುರ, ತೊರವಿ | | 4 |
| | | ಬಸವನ ಬಾಗೇವಾಡಿ | ಬಸವನ ಬಾಗೇವಾಡಿ, ಆಲಮಟ್ಟಿ ಡ್ಯಾಂ | | |

| | | | | | |
|---|---|---|---|---|---|
| 8. | ಚಾಮರಾಜನಗರ | ಚಾಮರಾಜನಗರ | ಚಿಕ್ಕಹೊಳೆ ಜಲಾಶಯ | ಕರಿವರದರಾಜ ಬೆಟ್ಟ | 8 |
| | | ಗುಂಡ್ಲುಪೇಟೆ | ಬಂಡೀಪುರ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಥೆರಕನಾಂಬಿ | | |
| | | ಯಲಂದೂರು | ಬಿಳಿಗಿರಿ ರಂಗನ ಬೆಟ್ಟ | | |
| | | ಕೊಳ್ಳೆಗಾಲ | ಮಲೆಮಹದೇಶ್ವರ ಬೆಟ್ಟ | ಕೊಳ್ಳೆಗಾಲ | |
| 9. | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | ನಂದಿಬೆಟ್ಟ, ನಂದಿಗ್ರಾಮ ಮುದ್ದೇನಹಳ್ಳಿ | ರಂಗಸ್ಥಳ | 11 |
| | | ಗೌರಿಬಿದನೂರು | ವಿದುರಾಶ್ವತ್ಥ, ಮಿಣಕನಗುರ್ಕಿ | | |
| | | ಬಾಗೇಪಲ್ಲಿ | ದೇವರಗುಡಿಪಲ್ಲಿ ಶ್ರೀ ವೆಂಕಟರಮಣ | | |
| | | ಚಿಂತಾಮಣಿ | ಮುರುಗಮಲ್ಲಾ, ಕೈವಾರ | | |
| | | ಗುಡಿಬಂಡೆ | ಆದಿನಾರಾಯಣ ಬೆಟ್ಟ | | |
| | | ಶಿಡ್ಲಘಟ್ಟ | | ಬೈರಸಾಗರ ಕೆರೆ | |
| 10. | ಚಿಕ್ಕಮಗಳೂರು | ಚಿಕ್ಕಮಗಳೂರು | ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿ, ಹೀರೇಮಗಳೂರು, ಮುತ್ತೋಡಿ ಗೇಮ್ ಸ್ಯಾಂಚೂರಿ, ಬೆಳವಾಡಿ | | 17 |
| | | ತರೀಕೆರೆ | ಕೆಮ್ಮಣ್‌ಗುಂಡಿ, ಅಮೃತಪುರ ಭದ್ರ ಪ್ರಾಜೆಕ್ಟ್ | | |
| | | ಮೂಡಿಗೆರೆ | ಕಳಸ, ಹೊರನಾಡು, ಕುದುರೆಮುಖ, ಅಂಗಡಿ | ಬಲ್ಲಾಳರಾಯನದುರ್ಗ | |
| | | ಶ್ರಿಂಗೇರಿ | ಶ್ರಿಂಗೇರಿ, ಕಿಗ್ಗಾ | | |
| | | ಕಡೂರು | ಅಯ್ಯನಕೆರೆ | | |
| | | ಕೊಪ್ಪ | ಹೀರೇಕೋಡ್ಗಿ | | |
| 11. | ಚಿತ್ರದುರ್ಗ | ಚಿತ್ರದುರ್ಗ | ಚಿತ್ರದುರ್ಗ, ಚಂದ್ರವಲ್ಲಿ, ಜೋಗಿಮಟ್ಟಿ | | 9 |
| | | ಹೊಸದುರ್ಗ | ಹಾಲು ರಾಮೇಶ್ವರ | | |
| | | ಚಳ್ಳಕೆರೆ | ನಾಯಕನಹಟ್ಟಿ, ದೊಡ್ಡಗುಡ್ಡ | | |
| | | ಹಿರಿಯೂರು | ವಾಣಿವಿಲಾಸ್ ಸಾಗರ, ಮಾರಿಕಣಿವೆ | | |
| | | ಮೊಳಕಾಲ್ಮೂರು | | | |
| | | ಹೊಳಲ್‌ಕೆರೆ | | ಹೊಳಲ್‌ಕೆರೆ-ಗಣೇಶ ದೇವಸ್ಥಾನ | |
| 12. | ದಕ್ಷಿಣ ಕನ್ನಡ | ಮಂಗಳೂರು | ಸುರತ್‌ಕಲ್, ಪಣಂಬೂರು, ಉಲ್ಲಾಳ, ಸೋಮೇಶ್ವರ, ಕಟೀಲು | ತಣ್ಣೀರು ಭಾವಿ, ಪಿಲಿಕುಲ ನಿಸರ್ಗಧಾಮ, | 15 |
| | | ಬೆಳ್ತಂಗಡಿ | ಧರ್ಮಸ್ಥಳ, ವೇಣೂರು | ಕದ್ರಿ ಬೆಟ್ಟ | |
| | | ಸುಳ್ಯ | ಕುಕ್ಕೆ ಸುಬ್ರಹ್ಮಣ್ಯ | | |
| | | ಪುತ್ತೂರು | ಬೆಂದ್ರ್ ತೀರ್ಥ, ಉಪ್ಪಿನಂಗಡಿ, ಶಿರಾಡಿ | ಮಹಾಲಿಂಗೇಶ್ವರ ದೇವಸ್ಥಾನ | |

| | | | | | |
|---|---|---|---|---|---|
| 13. | ದಾವಣಗೆರೆ | ಹರಿಹರ | ಹರಿಹರ | | 4 |
| | | ಚೆನ್ನಗಿರಿ | ಶಾಂತಿಸಾಗರ | | |
| | | ಹೊನ್ನಾಳಿ | ತೀರ್ಥರಾಮೇಶ್ವರ | ಉಚ್ಚಂಗಿ ದುರ್ಗ | |
| 14. | ಧಾರವಾಡ | ಧಾರವಾಡ | ನೃಪತುಂಗ ಬೆಟ್ಟ | ಸಾಧನಕೆರೆ | 4 |
| | | ಹುಬ್ಬಳ್ಳಿ | ವರೂರು | | |
| | | ನವಲುಗುಂದ | | ನವಲುಗುಂದ | |
| 15. | ಗದಗ್ | ಗದಗ್ | ಗದಗ್, ಲಕ್ಕುಂಡಿ | ಭೀಷ್ಮಕೆರೆ | 5 |
| | | ನರಗುಂದ | ನರಗುಂದ | | |
| | | ಮುಂಡರಗಿ | ಸಿಂಗಟಾಲೂರು | | |
| 16. | ಗುಲ್ಬರ್ಗಾ | ಗುಲ್ಬರ್ಗಾ | ಗುಲ್ಬರ್ಗಾ | | 13 |
| | | ಅಲಂದ | ಅಲಂದ | | |
| | | ಅಫಜಲ್‌ಪುರ | ಗಂಗಾಪುರ | | |
| | | ಸುರಪುರ | ಸುರಪುರ, ಕೆಂಬಾವಿ | | |
| | | ಸೇಡಂ | ಸೇಡಂ, ಮಳಖೇಡ | | |
| | | ಚಿಂಚೋಳಿ | ಚಿಂಚೋಳಿ | ಚಂದ್ರಂಪಳ್ಳಿ, | |
| | | ಜೇವರ್ಗಿ | ಜೇವರ್ಗಿ | | |
| | | ಚಿತ್ತಾಪುರ | ಕಲ್ಗಿ | ಛಾಯಾಭಗವತಿ, ಸನ್ನತಿ | |
| 17. | ಹಾಸನ | ಹಾಸನ. | ಹಾಸನ, ಮೊಸಳೆ-ಹೊಸಹಳ್ಳಿ, ಶಾಂತಿಗ್ರಾಮ, ಕೋರಮಂಗಲ, ದೊಡ್ಡಗದ್ದವಳ್ಳಿ | | 13 |
| | | ಬೇಲೂರು | ಬೇಲೂರು, ಹಳೇಬೀಡು | | |
| | | ಅರಸೀಕೆರೆ | ಹಾರನಹಳ್ಳಿ | | |
| | | ಸಕಲೇಶಪುರ | ಮರಗುಂದ | | |
| | | ಚನ್ನರಾಯಪಟ್ಟಣ | ಶ್ರವಣಬೆಳಗೊಳ | | |
| | | ಅರಕಲಗೂಡು | ರಾಮನಾಥಪುರ, ಗೋರೂರು | | |
| | | ಹೊಳೆನರಸೀಪುರ | ಶ್ರೀ ರಾಮದೇವರ ಜಲಾಶಯ | | |
| 18. | ಹಾವೇರಿ | ಶಿಗ್ಗಾಂವ್ | ಶಿಗ್ಗಾಂವ್, ಬಾಡ | ಶಿಶುನಾಳ | 6 |
| | | ಹಿರೇಕೆರೂರು | ಅಬಲೂರು | | |
| | | ಬ್ಯಾಡಗಿ | ಕಾಗಿನೆಲೆ | | |
| | | ಹಾನಗಲ್ | ಹಾನಗಲ್ | | |
| 19. | ಕೊಡಗು | ಮಡಿಕೇರಿ | ಮಡಿಕೇರಿ, ಅಬ್ಬಿಫಾಲ್ಸ್, ತಲಕಾವೇರಿ, ನಾಲ್ಕನಾಡು, ಭಾಗಮಂಡಲ, ಓಂಕಾರೇಶ್ವರ ದೇವಸ್ಥಾನ | ಕಕ್ಕಬೆ, ಶ್ರೀ ಇಗುತಪ್ಪ ದೇವಾಲಯ | 14 |
| | | ಸೋಮವಾರಪೇಟೆ | ಹಾರಂಗಿ ಜಲಾಶಯ, ಕೂಡಿಗೆ, ಚಟ್ಟಳ್ಳಿ, ನಿಸರ್ಗಧಾಮ | | |
| | | ವೀರಾಜಪೇಟೆ | ನಾಗರಹೊಳೆ, ಇರ್ಪು | ಕುಂದಾಡಬೆಟ್ಟ | |
| 20. | ಕೋಲಾರ | ಕೋಲಾರ | | ಅಂತರಗಂಗೆ | 9 |
| | | ಮಾಲೂರು | ಬಂಗಾರ ತಿರುಪತಿ | ಅವಣಿ | |
| | | ಮುಳಬಾಗಿಲು | ಮುಳಬಾಗಿಲು | ಬೂದಿಕೋಟೆ | |
| | | ಬಂಗಾರಪೇಟೆ | ಕುರುಡುಮಲ್ಕೆ ಕೆ.ಜಿ.ಎಫ್. ಕಮ್ಮಸಂಂದ್ರ, ಬೇತಮಂಗಲ | | |

| | | | | | |
|---|---|---|---|---|---|
| 21. | ಕೊಪ್ಪಳ | ಕೊಪ್ಪಳ | ಕೊಪ್ಪಳ | | 5 |
| | | ಗಂಗಾವತಿ | ಆನೆಗುಂದಿ, ಕನಕಗಿರಿ | ಕನಕಗಿರಿ | |
| | | ಯಲಬುರ್ಗಾ | ಇಟಗಿ, ಕುಕನೂರು | | |
| 22. | ಮಂಡ್ಯ | ಮಂಡ್ಯ | ಗಾಣದಾಳು, ಹೊಸಬೂದನೂರು, | | 16 |
| | | ಕೆ.ಆರ್.ಪೇಟೆ | ಹೊಸಹೊಳಲು, ಕಿಕ್ಕೇರಿ | ಬಸರಾಳು, ಹೇಮಗಿರಿ ಫಾಲ್ಸ್ | |
| | | ಪಾಂಡವಪುರ | ಮೇಲುಕೋಟೆ | ತೊಣ್ಣೂರು ಕೆರೆ | |
| | | ಮದ್ದೂರು | ಕೊಕ್ಕರೆ ಬೆಳ್ಳೂರು | | |
| | | ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ, ಬೃಂದಾವನ ಗಾರ್ಡನ್, ರಂಗನತಿಟ್ಟು, ಹುಲಿಕೆರೆ | | |
| | | ಮಳವಳ್ಳಿ | ಶಿವನ ಸಮುದ್ರ | | |
| | | ನಾಗಮಂಗಲ | ಶ್ರೀ ಆದಿಚುಂಚನಗಿರಿ ಕ್ಷೇತ್ರ | ಕಂಬದಹಳ್ಳಿ | |
| 23. | ಮೈಸೂರು | ಟಿ.ನರಸೀಪುರ | ತಲಕಾಡು, ಸೋಮನಾಥಪುರ, ಗರ್ಗೇಶ್ವರಿ | | 7 |
| | | ನಂಜನಗೂಡು | ನಂಜನಗೂಡು | | |
| | | ಹೆಚ್.ಡಿ.ಕೋಟೆ | ಕಾರಾಪುರ | | |
| | | ಹುಣಸೂರು | ಗೊಮ್ಮಟಗಿರಿ | | |
| | | ಪಿರಿಯಾಪಟ್ಟಣ | | ಬೈಲುಕುಪ್ಪೆ ಗೋಲ್ಡನ್ ಟೆಂಪಲ್ | |
| 24. | ರಾಯಚೂರು | ರಾಯಚೂರು | ರಾಯಚೂರು, ನಾರದಗುಡ್ಡ, ಮಾಲಿಯಾಬಾದ್ | | 11 |
| | | ಮಾನ್ವಿ | ಮಾನ್ವಿ, ಕುಲ್ಲೂರು | | |
| | | ಸಿಂಧನೂರು | ಮಾಸ್ಕಿ | | |
| | | ಲಿಂಗಸುಗೂರು | ಹಟ್ಟಿ, ಮುದಗಲ್ | | |
| | | ದೇವದುರ್ಗ | ಗಬ್ಬೂರು | | |
| | | ಗಂಗಾವತಿ | ಆನೆಗುಂದಿ, ಕನಕಗಿರಿ | | |
| 25. | ರಾಮನಗರ | ರಾಮನಗರ | ರಾಮನಗರ, ಕಣ್ವ, | ರೇವಣ ಸಿದ್ದೇಶ್ವರ ಬೆಟ್ಟ, | 11 |
| | | ಮಾಗಡಿ | ಮಾಗಡಿ, ಸಾವನದುರ್ಗ ತಿಪ್ಪಗೊಂಡನಹಳ್ಳಿ | ಕೂಟಗಲ್ಲು, ಮಾಗಡಿ | |
| | | ಕನಕಪುರ | ಮೇಕೆದಾಟು (ಸಂಗಮ) | ಕಬ್ಬಾಳಮ್ಮ ದೇವಸ್ಥಾನ | |
| | | ಚೆನ್ನಪಟ್ಟಣ | ಚೆನ್ನಪಟ್ಟಣ | ದೊಡ್ಡಮಳ್ಳೂರು | |
| 26. | ಶಿವಮೊಗ್ಗ | ಶಿವಮೊಗ್ಗ | ಕೂಡ್ಲಿ | ಗಾಜನೂರು | 22 |
| | | ತೀರ್ಥಹಳ್ಳಿ | ತೀರ್ಥಹಳ್ಳಿ, ಕವಲೇದುರ್ಗ, ಅಂಬುತೀರ್ಥ, ಆಗುಂಬೆ, ಮಂದಗದ್ದೆ ಪಕ್ಷಿಧಾಮ, ಕುಂದಾದ್ರಿ, ಮಾರೀಚಮೃಗವಧೆ | ಅಂಬುತೀರ್ಥ | |
| | | ಹೊಸನಗರ | ನಗರ, ಹುಂಚ, ಕೊಡಚಾದ್ರಿ | | |
| | | ಸಾಗರ | ಇಕ್ಕೇರಿ, ಜೋಗ್‌ಫಾಲ್ಸ್, ವರದಮೂಲ, ಕಳದಿ | | |
| | | ಭದ್ರಾವತಿ | ಭದ್ರಾವತಿ | | |
| | | ಶಿಕಾರಿಪುರ | ತೊಗರ್ಸಿ, ಉಡುತಡಿ, ಬಳ್ಳಿಗಾವಿ | | |
| | | ಸೊರಬ | ಸೊರಬ, ಚಂದ್ರಗುತ್ತಿ | | |

| | | | | | |
|---|---|---|---|---|---|
| | | ತುಮಕೂರು | ಸಿದ್ಧಗಂಗ, ಕೈದಾಳ, ದೇವರಾಯನದುರ್ಗ | | |
| | | ಕೊರಟಗೆರೆ | ಕೊರಟಗೆರೆ, ಸಿದ್ಧರಬೆಟ್ಟ, | ತೀತ ಜಲಾಶಯ, | |
| | | ಶಿರಾ | ಶಿರಾ | | |
| | | ಕುಣಿಗಲ್ | ಯಡಿಯೂರು, ಮಾರ್ಕೋನ ಹಳ್ಳಿ | | 17 |
| | | ಪಾವಗಡ | ಪಾವಗಡ | | |
| 27. | ತುಮಕೂರು | ಮಧುಗಿರಿ | ನಿಡಗಲ್ | | |
| | | ತಿಪಟೂರು | ಅರಳುಗುಪ್ಪ | | |
| | | ಗುಬ್ಬಿ | ಗುಬ್ಬಿ | | |
| | | ತುರುವೆಕೆರೆ | ತುರುವೆಕೆರೆ | | |
| | | ಚಿಕ್ಕನಾಯಕನಹಳ್ಳಿ | ತೀರ್ಥ ರಾಮಲಿಂಗೇಶ್ವರ ಸ್ವಾಮಿ - ವಜ್ರ, ಹಂದನಕೆರೆ | | |
| | | ಉಡುಪಿ | ಉಡುಪಿ, ಮಲ್ಪೆ, ಸೇಂಟ್ ಮೇರೀಸ್ ಐಲ್ಯಾಂಡ್, ಕಾಪು | ಕೂಡ್ಲುತೀರ್ಥ | 12 |
| 28. | ಉಡುಪಿ | ಕಾರ್ಕಳ | ಕಾರ್ಕಳ, ಮೂಡಬಿದ್ರಿ | | |
| | | ಕುಂದಾಪುರ | ಕುಂದಾಪುರ, ಮರವಂತೆ, ಕೊಲ್ಲೂರು | ಆನೆಜರಿ | |
| | | ಕಾರವಾರ | ಕಾರವಾರ, ಕರ್ಮಗೋಡ್, ಅಂಜದೀವ್ ದ್ವೀಪ, ದೇವಗಡ | | |
| | | ಜಾಯಿಡಾ | ಉಳವಿ, ರಾಮನಗರ, ಕ್ಯಾಸಲ್-ರಾಕ್ | | |
| | | ಯಲ್ಲಾಪುರ | ಯಲ್ಲಾಪುರ, ಮಾಗೋಡು ಜಲಪಾತ, ಲಾಲಗುಳಿ ಜಲಪಾತ | | |
| 29. | ಉತ್ತರ ಕನ್ನಡ | ಹಳಿಯಾಳ | ಹಲಿಯಾಳ, ದಾಂಡೇಲಿ | | 25 |
| | | ಸಿದ್ದಾಪುರ | ಸಿದ್ದಾಪುರ, ಉಂಚಳ್ಳಿ ಜಲಪಾತ | | |
| | | ಸಿರ್ಸಿ | ಸಿರ್ಸಿ, ಸೊಂದ, ಬನವಾಸಿ | | |
| | | ಕುಮಟಾ | ಗೋಕರ್ಣ, ಯಾಣ, ಧಾರೇಶ್ವರ | | |
| | | ಅಂಕೋಲಾ | ಅಂಕೋಲಾ | | |
| | | ಭಟ್ಕಳ | ಭಟ್ಕಳ, ಮುರುಡೇಶ್ವರ | | |
| | | ಹೊನ್ನಾವರ | ಬಸವರಾಜ ದುರ್ಗ | ಇಡುಗುಂಜಿ | |
| | | | | ಒಟ್ಟು | 316 |

**ಬಿ.ಡಿ.ಎ. ಕಾರ್ಯ ಯೋಜನೆಗಳು ತೀವ್ರ ಮಂದಗತಿಯಲ್ಲಿ ಸಾಗುತ್ತಿರುವ ಬಗ್ಗೆ**

**525; ಶ್ರೀ ಎಂ. ಶ್ರೀನಿವಾಸ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪ್ರಸ್ತುತ ನಿರ್ವಹಿಸುತ್ತಿರುವ ಯೋಜನೆಗಳು ಯಾವುವು; ಈ ಯೋಜನೆಗಳ ಪ್ರಾರಂಭ ಅಂದಾಜು ವೆಚ್ಚ, ನಿಗದಿಪಡಿಸಿದ ಕಾಲಾವಧಿ ಇವುಗಳ ಪ್ರತ್ಯೇಕ ಮಾಹಿತಿ ಒದಗಿಸುವುದು;

**ಆ)** ಹಲವಾರು ಯೋಜನೆಗಳನ್ನು ನಿರ್ವಹಿಸುತ್ತಿರುವ ಬಿ.ಡಿ.ಎ.ಯಿಂದ ಅನುದಾನ ಅಧಿಕ ಯೋಜನೆಗಳ ಹೊರೆ ಮತ್ತು ಸಮರ್ಥ ಸಿಬ್ಬಂದಿಗಳ ಸಮಸ್ಯೆಯನ್ನು ಅನುಭವಿಸುತ್ತಿದೆಯೇ; ಯಾವ ಯಾವ ಯೋಜನೆಗಳು ಮಂದಗತಿಯಲ್ಲಿ ಸಾಗುತ್ತಿದೆ;

**ಇ)** ಪ್ರಾರಂಭಗೊಂಡಿರುವ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳು ಏನು? (ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪ್ರಸ್ತುತ ನಿರ್ವಹಿಸುತ್ತಿರುವ ಯೋಜನೆಗಳ ಮತ್ತು ಅವುಗಳ ಅಂದಾಜಿನ ವಿವರಗಳನ್ನು ಅನುಬಂಧ–ಅ ನಲ್ಲಿ ಒದಗಿಸಿದೆ.

**ಆ)** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ವಹಿಸುತ್ತಿರುವ ಯೋಜನೆಗಳಿಗೆ ಅನುದಾನದ ಹೊರೆ ಇರುವುದಿಲ್ಲ ಮತ್ತು ಸಿಬ್ಬಂದಿಗಳ ಸಮಸ್ಯೆಯಿರುವುದಿಲ್ಲ. ಹಾಗೂ ಅತಿ ಮಂದಗತಿಯಲ್ಲಿ ಸಾಗುತ್ತಿರುವ ಯಾವುದೇ ಯೋಜನೆಗಳು ಇರುವುದಿಲ್ಲ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೈಗೊಳ್ಳಲಾಗುತ್ತಿರುವ ಯೋಜನೆಗಳ ಪ್ರಗತಿಯನ್ನು ಕಾಲ ಕಾಲಕ್ಕೆ ಪರಿಶೀಲಿಸಿ ಮತ್ತು ಸೂಕ್ತ ನಿರ್ದೇಶನವನ್ನು ನೀಡಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ.

## ಅನುಬಂಧ–ಅ

### ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ವಹಿಸುತ್ತಿರುವ [ಪ್ರಗತಿಯಲ್ಲಿರುವ] ಕಾಮಗಾರಿಗಳ ವಿವರಗಳು

| ಹೊರವರ್ತುಲ ರಸ್ತೆಯಲ್ಲಿ ಕೈಗೊಳ್ಳಲಾಗುತ್ತಿರುವ ಗ್ರೇಡ್ ಸೆಪರೇಟರ್ ನಿರ್ಮಾಣದ ಜಂಕ್ಷನ್‌ನ ಹೆಸರು | ಪ್ರಾರಂಭದ ಅಂದಾಜು ವೆಚ್ಚ [ಟೆಂಡರ್ ಮೊತ್ತ] ಕೋಟಿ ರೂಗಳಲ್ಲಿ | ಯೋಜನೆಯನ್ನು ಪೂರ್ಣಗೊಳಿಸಲು ಮೂಲ ಗುತ್ತಿಗೆ ಕರಾರಿನ ಪ್ರಕಾರ ನಿಗದಿಪಡಿಸಿರುವ ಕಾಲಾವಧಿ | ಯೋಜನೆಯನ್ನು ಪೂರ್ಣಗೊಳಿಸಲು ವಿಸ್ತರಿಸಲಾದ ಅವಧಿ |
|---|---|---|---|
| ನಾಯಂಡಹಳ್ಳಿ ಜಂಕ್ಷನ್ | 86.75 | 07.01.2012 | 31.10.2012 |
| ಕುವೆಂಪು ಮತ್ತು ಬಿ.ಇ.ಎಲ್ ವೃತ್ತ | 39.93 | 08.12.2011 | 08.09.2012 |
| ಭದ್ರಪ್ಪ ಬಡಾವಣೆ ಜಂಕ್ಷನ್ | 19.20 | 08.09.2011 | 30.06.2012 |
| ವೀರಣ್ಣಪಾಳ್ಯ ಜಂಕ್ಷನ್, ಕಲ್ಯಾಣನಗರ ಜಂಕ್ಷನ್, ಹೆಣ್ಣೂರು ಜಂಕ್ಷನ್ [ಪ್ಯಾಕೇಜ್–3] | 132.49 | 09.05.2011 | 31.12.2012 |
| ಮಹದೇವಪುರ ಜಂಕ್ಷನ್ | 37.31 | 03.04.2011 | 15.11.2012 |
| ಕಾಡುಬೀಸನಹಳ್ಳಿ ಜಂಕ್ಷನ್ | 40.38 | 03.06.2011 | 31.03.2012 |
| ದೇವರಬೀಸನಹಳ್ಳಿ ಜಂಕ್ಷನ್, ಬೆಳ್ಳಂದೂರು ಜಂಕ್ಷನ್, ಹೆಚ್.ಎಸ್.ಆರ್ 14ನೇ ಮುಖ್ಯರಸ್ತೆ [ಪ್ಯಾಕೇಜ್–1] | 117.32 | 09.12.2010 | 22.12.2012 |

## ಪ್ರವಾಸಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳ ಬಗ್ಗೆ

## 414; ಶ್ರೀ ಅಶ್ವಥನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು)

ಅ) ಮಂಡ್ಯ ಜಿಲ್ಲೆಯಾದ್ಯಂತ ಪ್ರವಾಸೋದ್ಯಮ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳಾದ ಮಾರ್ಗದರ್ಶಿ ಬೋರ್ಡ್, ವಾಹನ ನಿಲ್ದಾಣ, ಶೌಚಾಲಯ, ಪ್ರವಾಸಿಗರು ಉಳಿದುಕೊಳ್ಳಲು ವಸತಿ ಗೃಹಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆಯೇ; (ವಿವರ ನೀಡುವುದು)

ಆ) ಪ್ರವಾಸಿ ತಾಣಗಳಿಂದ ರಂಗನತಿಟ್ಟು, ಸಂಗಮ, ದರಿಯಾದೌಲತ್ತು, ಮೇಲುಕೋಟೆ, ಶ್ರೀರಂಗನಾಥ ದೇವಾಲಯಗಳ ಪಾರ್ಕಿಂಗ್ ಸ್ಥಳಗಳಲ್ಲಿ ಖಾಸಗಿಯವರು ಮುಜರಾಯಿ ಇಲಾಖೆ ಹೆಸರಿನಲ್ಲಿ ಕೆಲವು ಟಿಕೆಟ್ ಮುದ್ರಿಸಿ ಪಾರ್ಕಿಂಗ್ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಅಕ್ರಮವಾಗಿ ಪಾರ್ಕಿಂಗ್ ಶುಲ್ಕ ವಸೂಲಿ ಮಾಡುತ್ತಿರುವವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು; ಯಾವ ಯಾವ ಸ್ಥಳಗಳಲ್ಲಿ ಈ ರೀತಿ ಅಕ್ರಮಗಳು ನಡೆಯುತ್ತಿವೆ; (ವಿವರ ನೀಡುವುದು)

ಇ) ನಂದಿಬೆಟ್ಟ ಅಭಿವೃದ್ಧಿಗೆ ಬಿಡುಗಡೆಯಾಗಿರುವ ರೂ.10.00 ಕೋಟಿ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ; ಕಾಮಗಾರಿಯ ಪ್ರಗತಿಯು ಯಾವ ಹಂತದಲ್ಲಿದೆ; (ವಿವರ ನೀಡುವುದು)

ಈ) ನಂದಿಬೆಟ್ಟಕ್ಕೆ Cable Car (ರೋಪ್ ವೇ) ನಿರ್ಮಾಣ ಮಾಡಲು ಪ್ರವಾಸೋದ್ಯಮ ಇಲಾಖೆ ವತಿಯಿಂದ ಕ್ರಮ ಕೈಗೊಳ್ಳಲಾಗಿದೆಯೇ; ಕೈಗೊಂಡಿದ್ದರೆ, ಕಾಮಗಾರಿಯು ಯಾವ ಹಂತದಲ್ಲಿದೆ? (ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಮಂಡ್ಯ ಜಿಲ್ಲೆಯಾದ್ಯಂತ ಇಲಾಖೆಯು ಕೈಗೆತ್ತಿಕೊಂಡಿರುವ ಪ್ರವಾಸಿ ಮೂಲ ಸೌಲಭ್ಯಗಳ ವಿವರ ಕೆಳಗಿನಂತಿದೆ:

ಬೃಂದಾವನ್ ಗಾರ್ಡನ್ಸ್ ಬಳಿ ಹೋಟೆಲ್ ಮಯೂರ ಕಾವೇರಿ ಎಂಬ ಹೋಟೆಲನ್ನು ಕೆ.ಎಸ್.ಟಿ.ಡಿ.ಸಿ. ಮೂಲಕ ನಡೆಸಲಾಗುತ್ತಿದೆ. ಮತ್ತೊಂದು ಹೋಟೆಲನ್ನು ಮೆ: ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮೂಲಕ ಖಾಸಗೀಕರಿಸಿ ನಡೆಸಲಾಗುತ್ತಿದೆ.

ಶ್ರೀರಂಗಪಟ್ಟಣ್ಣ ಬಳಿ ಕಾವೇರಿ ನದಿತೀರದಲ್ಲಿ ಹೋಟೆಲ್ ಮಯೂರ ರಿವರ್‌ವ್ಯೂ ಎಂಬ ಹೋಟೆಲನ್ನು ನಡೆಸಲಾಗುತ್ತಿದೆ.

ಕೊಕ್ಕರೆಬೆಳ್ಳೂರಿನಲ್ಲಿ 88.50 ಲಕ್ಷಗಳ ಅಂದಾಜಿನಲ್ಲಿ ಗ್ರಾಮೀಣ ಪ್ರವಾಸೋದ್ಯಮ ಯೋಜನೆಯನ್ನು ಅಭಿವೃದ್ಧಿಪಡಿಸಿ ಪೂರ್ಣಗೊಳಿಸಲಾಗಿದೆ.

ಬೆಂಗಳೂರು–ಮೈಸೂರು ಹೆದ್ದಾರಿಯಿಂದ ಕೊಕ್ಕರೆಬೆಳ್ಳೂರಿಗೆ ಹೋಗುವ 9.15 ಕಿ.ಮೀ. ಉದ್ದದ ರಸ್ತೆಯನ್ನು (ಕಿ.ಮೀ. 0.00 ಯಿಂದ 8.10 ಕಿ.ಮೀ. ವರೆಗೆ) ರೂ.328.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಬಾರ್ಡ್ ಧನಸಹಾಯದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಮುಂದುವರೆದು ಕಿ.ಮೀ. 8.10 ರಿಂದ ಕಿ.ಮೀ. 13.00 ವರೆಗಿನ ಇದೇ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ರೂ.440.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಸಂಬಂಧ ಮೊದಲ ಕಂತಾಗಿ ರೂ.69.59 ಲಕ್ಷಗಳನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯ ರವರಿಗೆ ಬಿಡುಗಡೆ ಮಾಡಲಾಗಿದೆ.

ಹನುಮಂತನಗರದಲ್ಲಿ ರೂ.229.42 ಲಕ್ಷಗಳ ಅಂದಾಜು ವೆಚ್ಚದಲ್ಲಿ ಈಕೋ ಟೂರಿಸಂ ಪಾರ್ಕ್ ನಿರ್ಮಿಸಿ ಪೂರ್ಣಗೊಳಿಸಲಾಗಿದೆ.

ಶ್ರೀರಂಗಪಟ್ಟಣದ ಕೋಟೆ ಪ್ರದೇಶದಲ್ಲಿ ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲು

ನಿರ್ದೇಶಕರು, ರಾಜ್ಯ ಪುರಾತತ್ವ ಹಾಗೂ ಸಂಗ್ರಹಾಲಯಗಳ ಇಲಾಖೆ ರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ.

ನಾಗಮಂಗಲ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ರೂ.77.85 ಲಕ್ಷಗಳ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಬೃಂದಾವನ್ ತೋಟವನ್ನು ಉನ್ನತೀಕರಿಸಲು ರೂ.175.00 ಲಕ್ಷಗಳನ್ನು ಸದಸ್ಯ ಕಾರ್ಯದರ್ಶಿ, ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನ ಕೇಂದ್ರ ಸಮಿತಿ, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

ಮದ್ದೂರು ತಾಲ್ಲೂಕು ಚಂದೂಪುರ ಗ್ರಾಮದ ಶ್ರೀ ಮಲೆಮಹದೇಶ್ವರ ದೇವಾಲಯದ ಬಳಿ ರೂ.30.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಮದ್ದೂರು ತಾಲ್ಲೂಕು ಹೊನ್ನಲಗೆರೆ ಗ್ರಾಮದ ಶ್ರೀ ವೀರಭದ್ರಸ್ವಾಮಿ ದೇವಾಲಯದ ಬಳಿ ರೂ.30.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷಾಚರಣೆ ಸಂಬಂಧ ಶ್ರೀರಂಗಪಟ್ಟಣದಲ್ಲಿ ರೂ.344.45 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶ್ರೀರಂಗಪಟ್ಟಣದಲ್ಲಿ ಧ್ವನಿ ಮತ್ತು ಬೆಳಕು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ನಿಮಿಷಾಂಬಾ ದೇವಾಲಯದ ಬಳಿ ರೂ.60.93 ಲಕ್ಷಗಳ ಅಂದಾಜು ವೆಚ್ಚದಲ್ಲಿ ಡಾರ್ಮಿಟರಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ಕಾಮಗಾರಿ ಪ್ರಗತಿಯಲ್ಲಿದೆ.

ಶ್ರೀರಂಗಪಟ್ಟಣದ ಗೋಸಾಯಿಘಾಟ್ ಆವರಣದಲ್ಲಿ ರೂ.44.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಿವಿಧ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ಶ್ರೀರಂಗಪಟ್ಟಣ ತಾಲ್ಲೂಕು ಪಶ್ಚಿಮವಾಹಿನಿಯಲ್ಲಿರುವ ಪವಿತ್ರ ಯಾತ್ರಾಸ್ಥಳವಾದ ಶ್ರೀ ದುರ್ದಂಡೇಶ್ವರ ಮಹಂತ ಶಿವಯೋಗಿಗಳ

ಮಠದ ಬಳಿ ರೂ.130.26 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿನಿವಾಸ ನಿರ್ಮಾಣ ಮಾಡಲಾಗುತ್ತಿದೆ.

ಮದ್ದೂರು ತಾಲ್ಲೂಕು ಚಿಕ್ಕರಸಿಕೆರೆಯಲ್ಲಿರುವ ಶ್ರೀ ಕಾಲಭೈರವೇಶ್ವರ ದೇವಾಲಯದ ಬಳಿ ರೂ.40.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಡಾರ್ಮಿಟರಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ.

ತೊಣ್ಣೂರು ಕೆರೆಯಲ್ಲಿ ಜಲಕ್ರೀಡಾ ಪ್ರವಾಸೋದ್ಯಮ ಯೋಜನೆಯನ್ನು ರೂ.605.46 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರದ ಧನಸಹಾಯ ಕೋರಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ರಾಜ್ಯ ಸರ್ಕಾರದ ರೂ.100.00 ಲಕ್ಷಗಳ ಅನುದಾನದಲ್ಲಿ ಯಾಂತ್ರಿಕ ದೋಣಿಗಳ ಖರೀದಿ, ರಸ್ತೆ ಅಭಿವೃದ್ಧಿ, ವಾಹನ ನಿಲುಗಡೆ, ಸ್ವಾಗತ ಕಛೇರಿ, ದೋಣಿಗಳನ್ನು ಇಡಲು ಶೆಡ್ ನಿರ್ಮಾಣ, ಸಿಬ್ಬಂದಿ ಕೊಠಡಿ, ಶೌಚಾಲಯ ನಿರ್ಮಾಣ, ಜಮೀನಿನ ಸುತ್ತಲೂ ಬೇಲಿ ನಿರ್ಮಾಣ, ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಮೂಲಕ ಜಾರಿಗೊಳಿಸಲಾಗುತ್ತಿದೆ.

ಆ) ಈ ಪ್ರವಾಸಿ ತಾಣಗಳ ಬಳಿ ವಾಹನ ನಿಲುಗಡೆಗಾಗಿ ಪಾರ್ಕಿಂಗ್ ಶುಲ್ಕವನ್ನು ನಿಗದಿಪಡಿಸುವುದು ಹಾಗೂ ವಸೂಲಿ ಮಾಡುವುದು ಶ್ರೀರಂಗಪಟ್ಟಣ ಟೌನ್ ಮುನಿಸಿಪಾಲಿಟಿ, ಭಾರತೀಯ ಪುರಾತತ್ವ ಇಲಾಖೆ ಹಾಗೂ ರಾಜ್ಯ ಅರಣ್ಯ ಇಲಾಖೆಗಳ ವ್ಯಾಪ್ತಿಯಲ್ಲಿ ಬರುತ್ತದೆ.

ಇ) ಪ್ರವಾಸಿಗರಿಗೆ ಹೆಚ್ಚಿನ ವಸತಿ ಮತ್ತು ಮನರಂಜನೆಯನ್ನು ಒದಗಿಸುವ ದೃಷ್ಟಿಯಿಂದ ರೂ.16,52,41,818/- ಗಳ ಅಂದಾಜು ವೆಚ್ಚದಲ್ಲಿ 16 ನೂತನ ಕೊಠಡಿಗಳು, ಹಾಲಿ ಇರುವ ವಸತಿಗೃಹಗಳ ನವೀಕರಣ, 5 ಕಾಟೇಜುಗಳ ಮರುನಿರ್ಮಾಣ, ವಾಹನ ನಿಲ್ದಾಣ, ಮಾಹಿತಿ ಕೇಂದ್ರ, ವೀಕ್ಷಣಾ ಗೋಪುರ, ಶೌಚಾಲಯ, ಆಸನಗಳ ವ್ಯವಸ್ಥೆ, ಫುಡ್ ಕೋರ್ಟ್ ನಿರ್ಮಾಣ, ಮನರಂಜನೆಗಾಗಿ ಸ್ಕ್ಯಾಷ್‌ಪ್ಯಾಡ್,

ಲೂಜ್‌ಟ್ರ್ಯಾಕ್, ಮಕ್ಕಳು ಆಟವಾಡಲು ವ್ಯವಸ್ಥೆ, ಟ್ರೀ ಹೌಸ್, ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಗಳು ವಿವಿಧ ಹಂತದಲ್ಲಿದೆ.

**ಈ)** ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ (ಪಿ.ಪಿ.ಪಿ.) ನಂದಿಬೆಟ್ಟಕ್ಕೆ ರೋಪ್‌ವೇ ನಿರ್ಮಿಸಲು ಉದ್ದೇಶಿಸಲಾಗಿತ್ತು ಪರಿಸರವಾದಿಗಳಿಂದ ಹಾಗೂ ಸ್ಥಳೀಯ ಸಂಘಟನೆಗಳಿಂದ ಈ ಯೋಜನೆಗೆ ಆಕ್ಷೇಪಣೆ ಬಂದ ಕಾರಣ, ಈ ಯೋಜನೆಯನ್ನು ಕೈಬಿಡಲಾಗಿದೆ.

**ಬೆಂಗಳೂರು ಮಹಾನಗರದಲ್ಲಿ ಜಲ ಮಂಡಳಿಯಿಂದ ನೀರು ಪೂರೈಕೆಯ ಬಗ್ಗೆ**

**483; ಶ್ರೀ ಅಶ್ವಥನಾರಾಯಣ**

**ಅ)** ಬೆಂಗಳೂರು ಮಹಾನಗರ ವ್ಯಾಪ್ತಿಯ ಜಲಮಂಡಳಿಯಿಂದ ನೀರು ಬಳಸುತ್ತಿರುವ ಗ್ರಾಹಕರ ಸಂಖ್ಯೆ ಎಷ್ಟು; ಇದರಿಂದ ಸಂಗ್ರಹವಾಗುತ್ತಿರುವ ಹಣವೆಷ್ಟು; ಗ್ರಾಹಕರಿಂದ ಬರಬೇಕಾಗಿರುವ ಬಾಕಿ ಮೊತ್ತವೆಷ್ಟು; ಹಣ ಪಾವತಿಸದೆ ನೀರು ಬಳಸುತ್ತಿರುವವರ ವಿವರ ನೀಡುವುದು;

**ಆ)** ಬೆಂಗಳೂರು ಮಹಾನಗರಕ್ಕೆ ಯಾವ ಯಾವ ಮೂಲಗಳಿಗೆ ಎಷ್ಟೆಷ್ಟು ನೀರು ಸರಬರಾಜು ಮಾಡಲಾಗುತ್ತಿದೆ; ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶಗಳಿಗೆ ಬೇಕಾಗುವ ನೀರಿನ ಪ್ರಮಾಣವೆಷ್ಟು; ಈ ಪ್ರದೇಶಗಳಿಗೆ ಯಾವಾಗ ನೀರು ಕೊಡಲಾಗುವುದು;

**ಇ)** ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಸೇರುವ ಪ್ರದೇಶ ಗ್ರಾಹಕರಿಂದ Captial Contribution ಸಂಗ್ರಹ ಮಾಡಲಾಗುವುದೆ; ಮಾಡಿದ್ದರೆ ಯಾವ ಮಾನದಂಡದಲ್ಲಿ ವಸೂಲಿ ಮಾಡಲಾಗುವುದು; ಇದರಿಂದ ಅಂದಾಜು ಎಷ್ಟು ಹಣ ಸಂಗ್ರಹವಾಗಬಹುದು; (ವಿವರ ನೀಡುವುದು)

**ಈ)** ಸರ್.ಎಂ.ವಿ. ಬಡಾವಣೆಗೆ ನೀರಿನ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆಯೇ;

**ಉ)** ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು; ಮತ್ತು ಸದರಿ ಬಡಾವಣೆಗೆ ಎಷ್ಟು ನೀರು ಪೂರೈಸಲಾಗುವುದು; (ವಿವರ ನೀಡುವುದು)

**ಊ)** ಸರ್.ಎಂ.ವಿ. ಬಡಾವಣೆಯ ಮಧ್ಯಭಾಗದಲ್ಲಿರುವ ಖಾಸಗಿ ಬಡಾವಣೆಗಳಿಗೂ ನೀರಿನ ಪೈಪ್‌ಲೈನ್ ಅಳವಡಿಸಲು ಕ್ರಮಕೈಗೊಳ್ಳಲಾಗಿದೆಯೇ; ಕ್ರಮಕೈಗೊಂಡಿದ್ದರೆ, ಕಾಮಗಾರಿಯ ಯಾವ ಹಂತದಲ್ಲಿದೆ? (ವಿವರ ನೀಡುವುದು)

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ನಗರಾಭಿವೃದ್ಧಿ ಮತ್ತು ಬೆಂಗಳೂರು ಜಲಮಂಡಳಿ ಸಚಿವರು)**

**ಅ)** ಬೆಂಗಳೂರು ಜಲಮಂಡಳಿಯ ವ್ಯಾಪ್ತಿಯಲ್ಲಿ 6,56,475 ಅಧಿಕೃತ ಗ್ರಾಹಕರಿದ್ದು, ಮಾಹೆಯಾನ ಸರಾಸರಿ ರೂ.37.00 ರಿಂದ ರೂ.38.00 ಕೋಟಿ ಕಂದಾಯ ಸಂಗ್ರಹವಾಗುತ್ತಿದೆ. ಗ್ರಾಹಕರಿಂದ ಬರಬೇಕಾಗಿರುವ ಬಾಕಿ ಮೊತ್ತ ರೂ.103.57 ಕೋಟಿ. ಬೆಂಗಳೂರು ಜಲಮಂಡಳಿಯ ವ್ಯಾಪ್ತಿಯಲ್ಲಿ ಒಟ್ಟು 21866 ಅನಧಿಕೃತ ಸಂಪರ್ಕಗಳಿದ್ದು, ಇವುಗಳಿಂದ ಹಣ ಸಂಗ್ರಹವಾಗುತ್ತಿರುವುದಿಲ್ಲ.

**ಆ)** ಬೆಂಗಳೂರು ಮಹಾನಗರಕ್ಕೆ ಕಾವೇರಿ ಹಾಗೂ ಅರ್ಕಾವತಿ ನದಿ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ವಿವಿಧ ಮೂಲಗಳಿಂದ ದಿನನಿತ್ಯ ನೀರು ಸರಬರಾಜಾಗುತ್ತಿರುವ ಪ್ರಮಾಣ ಈ ಕೆಳಕಂಡಂತಿದೆ;

| | | |
|---|---|---|
| ಕಾವೇರಿ 1ನೇ ಹಂತ | – | 140 ದಶಲಕ್ಷ ಲೀಟರ್ |
| ಕಾವೇರಿ 2ನೇ ಹಂತ | – | 140 ದಶಲಕ್ಷ ಲೀಟರ್ |

| | | |
|---|---|---|
| ಕಾವೇರಿ 3ನೇ ಹಂತ | – | 300 ದಶಲಕ್ಷ ಲೀಟರ್ |
| ಕಾವೇರಿ 4ನೇ ಹಂತ 1ನೇ ಘಟ್ಟ | – | 300 ದಶಲಕ್ಷ ಲೀಟರ್ |
| ತಿಪ್ಪಗೊಂಡನಹಳ್ಳಿ ಜಲಾಶಯ (ಅರ್ಕಾವತಿ) | – | 20 ದಶಲಕ್ಷ ಲೀಟರ್ |
| ಒಟ್ಟು | – | 900 ದಶಲಕ್ಷ ಲೀಟರ್ |

ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 2011ನೇ ಜನಗಣತಿ ಪ್ರಕಾರ ಒಟ್ಟು 85 ಲಕ್ಷ ಜನಸಂಖ್ಯೆಯಿದ್ದು, ಈ ಜನಸಂಖ್ಯೆಗೆ 1275 ದಶಲಕ್ಷ ಲೀಟರ್ ನೀರು ಅವಶ್ಯಕತೆಯಿರುತ್ತದೆ.

ಜಲಮಂಡಳಿಯು ಹೆಚ್ಚುವರಿಯಾಗಿ 500 ದಶಲಕ್ಷ ಲೀಟರ್ ನೀರನ್ನು ತರಲು ಕಾವೇರಿ 4ನೇ ಹಂತ 2ನೇ ಘಟ್ಟ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ತ್ವರಿತಗತಿಯಲ್ಲಿ ಪ್ರಗತಿಯಲ್ಲಿದ್ದು, 2012ರ ಮಧ್ಯಭಾಗದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ಯೋಜನೆ ಪೂರ್ಣಗೊಂಡ ನಂತರ ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶಗಳಿಗೆ ನೀರನ್ನು ಸರಬರಾಜು ಮಾಡಲಾಗುವುದು.

ಇ) ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಸೇರುವ ಪ್ರದೇಶ ಗ್ರಾಹಕರಿಂದ ಕ್ಯಾಪಿಟಲ್ ಕಾಂಟ್ರಿಬ್ಯೂಶನ್ ಸಂಗ್ರಹ ಮಾಡಲಾಗುವುದು.

1. ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಸೇರಿರುವ ಹಳೆಯ ನಗರಸಭೆ, ಪುರಸಭೆ ಪ್ರದೇಶಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 145 ಎಂಎನ್ಐ 2004, ದಿನಾಂಕ: 28–2–2005ರಂತೆ ಬೆನಿಫಿಶಿಯರಿ ಕ್ಯಾಪಿಟಲ್ ಕಾಂಟ್ರಿಬ್ಯುಶನ್ ಸಂಗ್ರಹಿಸಲಾಗುವುದು. (ಅನುಬಂಧ–1) ಈ ಆದೇಶದಡಿ ರೂ.320.00 ಕೋಟಿ ಹಣ ಸಂಗ್ರಹವಾಗುವ ಅಂದಾಜಿದೆ.

2. ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಸೇರಿರುವ 110 ಹಳ್ಳಿಗಳ ಪ್ರದೇಶಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಎಂಎನ್ಐ 2011, ದಿನಾಂಕ: 14–7–2011ರಂತೆ ಬೆನಿಫಿಶಿಯರಿ ಕ್ಯಾಪಿಟಲ್ ಕಾಂಟ್ರಿಬ್ಯುಶನ್ ಸಂಗ್ರಹಿಸಲಾಗುವುದು. (ಅನುಬಂಧ–2) ಸರ್ಕಾರದ ಈ ಆದೇಶದಡಿ ರೂ.180.00 ಕೋಟಿ ಹಣ ಸಂಗ್ರಹವಾಗುವ ಅಂದಾಜಿದೆ.

**ಈ)** ಹೌದು.

**ಉ)** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಠೇವಣಿ ಕೊಡುಗೆ ಕಾಮಗಾರಿಗಳ ಅಡಿಯಲ್ಲಿ ಸರ್.ಎಂ.ವಿ. ಬಡಾವಣೆಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದಂತೆ, ಟೆಂಡರ್ ಕರೆದು ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಕೆಲಸಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಗಳು ಮೇ 2012ರ ಅವಧಿಯೊಳಗೆ ಮುಗಿಯುವ ಹಂತದಲ್ಲಿರುತ್ತದೆ. ಕಾವೇರಿ 4ನೇ ಹಂತ 2ನೇ ಘಟ್ಟದ ಯೋಜನೆ ಪೂರ್ಣಗೊಂಡ ನಂತರ ಈ ಬಡಾವಣೆಗೆ ನೀರು ಸರಬರಾಜು ಮಾಡಲಾಗುವುದು. ಈಗ ಈ ಬಡಾವಣೆಯಲ್ಲಿ ಸುಮಾರು 400 ಮನೆಗಳಿದ್ದು ಅವಶ್ಯಕತೆಗೆ ತಕ್ಕಂತೆ ನೀರು ಸರಬರಾಜು ಮಾಡಲಾಗುವುದು.

**ಊ)** ಸರ್.ಎಂ.ವಿ. ಬಡಾವಣೆಯ ಮಧ್ಯಭಾಗದಲ್ಲಿರುವ ಖಾಸಗಿ ಬಡಾವಣೆಗಳಿಗೆ ಹಾಲಿ ನೀರಿನ ಸಂಪರ್ಕ ಕಲ್ಪಿಸುವ ಸಲುವಾಗಿ ನೀರಿನ ಕೊಳವೆ ಮಾರ್ಗ ಅಳವಡಿಸಲು ಮಂಡಳಿವತಿಯಿಂದ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೋರಿಕೆಯ ಮೇರೆಗೆ ಸರ್.ಎಂ.ವಿ. ಬಡಾವಣೆಗಾಗಿ ಜಮೀನು ಕಳೆದುಕೊಂಡವರ ಹಳ್ಳಿಗಳಿಗೆ ಒಳಚರಂಡಿ ಹಾಗೂ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಅಂದಾಜು ಪಟ್ಟಿ ತಯಾರಿಸುತ್ತಿದ್ದು, ಸದ್ಯದಲ್ಲಿಯೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಲಾಗುವುದು.

**ಬಿ.ಡಿ.ಎ. ಮತ್ತು ಸಿ.ಎ. ನಿವೇಶನಗಳ ಬಗ್ಗೆ**

**484; ಶ್ರೀ ಅಶ್ವಥ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ನಿರ್ಮಾಣ ಮಾಡಿದ ಬಡಾವಣೆಗಳಾದ ವಿಜಯನಗರ, ಆರ್.ಪಿ.ಸಿ. ಬಡಾವಣೆ ಚಂದ್ರಬಡಾವಣೆ, ನಾಗರಬಾವಿ 1ನೇ ಹಂತ, 2ನೇ ಹಂತ, ಜ್ಞಾನ ಭಾರತಿಬಡಾವಣೆ ಮತ್ತು ಇದೇ ಭಾಗದ ಖಾಸಗಿ / ಗೃಹ ನಿರ್ಮಾಣ ಸಹಕಾರಿ ಸಂಘಗಳಿಂದ ನಿರ್ಮಾಣ ಮಾಡಿದ ಬಡಾವಣೆಗಳಲ್ಲಿ ಸಿ.ಎ. ನಿವೇಶನಗಳನ್ನು ಕಾಯ್ದಿರಿಸಿದ್ದು ಇಂತಹ ಸಿ.ಎ. ನಿವೇಶನಗಳನ್ನು ಯಾವ ಯಾವ ಉದ್ದೇಶಕ್ಕೆ ನೀಡಲಾಗಿದೆ; (ವಿವರ ನೀಡುವುದು)

ಆ) ಮೇಲ್ಕಂಡ ಬಡಾವಣೆಗಳಲ್ಲಿ ಮೀಸಲಿಟ್ಟಿದ್ದ ಸಿ.ಎ. ನಿವೇಶನಗಳ ಸಂಖ್ಯೆ (ಬಡಾವಣೆವಾರು ವಿವರ ನೀಡುವುದು) ಎಷ್ಟು ಮತ್ತು ಹಂಚಿಕೆಯಾಗದೆ ಖಾಲಿ ಇರುವ ನಿವೇಶನಗಳ ಸಂಖ್ಯೆ ಎಷ್ಟು? (ಬಡಾವಣೆವಾರು ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಆರ್.ಪಿ.ಸಿ. ಬಡಾವಣೆ, ಚಂದ್ರಾ ಬಡಾವಣೆ, ನಾಗರಭಾವಿ 1ನೇ ಹಂತ, ಮತ್ತು 2ನೇ ಹಂತ, ಎಂ.ಆರ್.ಸಿ.ಆರ್. ಬಡಾವಣೆ ಹಾಗೂ ಖಾಸಗಿ ಬಡಾವಣೆಗಳಲ್ಲಿ ಒಟ್ಟು 143 ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಮೀಸಲಿಟ್ಟಿರುವ ಸಿ.ಎ. ನಿವೇಶನಗಳ ಸಂಖ್ಯೆ: 181 ಮತ್ತು ಹಂಚಿಕೆಯಾಗದೇ (ಅನಧಿಕೃತ ಕಟ್ಟಡ / ಕೋರ್ಟ್ ದಾವೆ) ಇರುವ ಸಿ.ಎ. ನಿವೇಶನ ಸಂಖ್ಯೆ: 15 ಹಾಗೂ ಖಾಲಿ ಇರುವ ಸಿ.ಎ. ನಿವೇಶನಗಳ ಸಂಖ್ಯೆ: 23.

ಅನುಬಂಧ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪಶ್ಚಿಮ ವಿಭಾಗ ವ್ಯಾಪ್ತಿಯಲ್ಲಿ ಬರುವ ಬಿ.ಡಿ.ಎ ಮತ್ತು ಖಾಸಗಿ ಬಡಾವಣೆಗಳಲ್ಲಿನ ಸಿಎ ನಿವೇಶನಗಳ ವಿವರಗಳು

| ಕ್ರ.ಸಂ | ಬಿಡಿಎ/ಖಾಸಗಿ ಬಡಾವಣೆ | ಒಟ್ಟು ಸಿಎ ನಿವೇಶನಗಳ ಸಂಖ್ಯೆ | ಒಟ್ಟು ಹಂಚಿಕೆಯಾದ ಸಿಎ ನಿವೇಶನಗಳ ಸಂಖ್ಯೆ | ಅನಧಿಕೃತ ಕಟ್ಟಡ/ ಕೋರ್ಟ್ ದಾವೆಗಳಿರುವ ಸಿಎ ನಿವೇಶನಗಳ ಸಂಖ್ಯೆ | ಖಾಲಿ ಇರುವ ಸಿಎ ನಿವೇಶನಗಳ ಸಂಖ್ಯೆ | ಷರಾ |
|---|---|---|---|---|---|---|
| 1 | ಬಿಡಿಎ ಬಡಾವಣೆ | 116 | 103 | 04 | 09 | |
| 2 | ಖಾಸಗಿ ಬಡಾವಣೆ | 65 | 40 | 11 | 14 | |
| | ಒಟ್ಟು ಮೊತ್ತ | 181 | 143 | 15 | 23 | |

| Details of CA sites in Pvt layouts Pertains to West Division BDA Bangalore | | | | | | |
|---|---|---|---|---|---|---|
| Sl no | Name of the layout | CA Details | Purpose /reserved for | Purpose /allotted for | Unallotted/Vacant if any | Remarks |
| 1 | Intelligence Burea HBCS in sy no 44/5a,45/2a,2b,45/3,4 of Valagerehally | CA-1 | Not specified | Not allotted | Vacant | |
| | | CA-2 | Overhead Tank | Overhead Tank | Allotted | |
| | | CA-3 | Not specified | Not allotted | Vacant | |
| 2 | Bangalore City Employees HBCS, in Sy No 48 (old 141 & 142) | CA-1 | Not specified | Not allotted | Vacant | |
| 3 | Chamarajpet Silks and Handloom weavers HBCS in sy 333/1 of Kempapura agrahara | CA-1 | Not Specified | Not Allotted | Unauthorised Structures Exist | |
| | | CA-2 | Milk booth ,Office etc | Govt School Existing | Govt School | |
| 4 | BCC Gangondahalli (Sy.no.44/1,2,3, 49/1,2,3 & 7, 14 &18 of Gangondanahalli | CA -1 | Milk booth & Hopcom | Milk booth & Hopcom | Allotted | |
| 5 | ITI HBCS IN SY NO 53/1,2,3,,54,55,56/1,57 OF Nayandahalli | CA-1 | Not specified | Not Allotted | Unauthorised Structures Exist | Not relinquished |
| 6 | Venkateshwara HBCS in sy no 49/4,5,6 of Deevatigeramanahalli | CA-1 | Post office ,Community hall ,Milk booth | Not Allotted | Vacant | |
| | | CA-2 | Play ground & school | Not Allotted | Vacant | |
| 7 | NGEF HBCS in sy no 13,14,15 of Nagarabhavi | CA-1 | Milk booth & Hospital | Not allotted | Vacant | Halla Existing |
| | | CA-2 | Bank, Hotel ,Shopping complex | School | Allotted | |
| | | CA-3 | Hospital ,school, play ground | Temple exist | Temple Exist, Partly & U.A.S Exists | |
| | | | | | | |
| 8 | NGEF HBCS in sy no 12 (old sy no 124) 2nd stage, Nagarabhavi | CA | Not Specified | Not Allotted | Vacant | Court Litigation |

| | | | | | | |
|---|---|---|---|---|---|---|
| 9 | **City municipal corporation employees HBCS (Sy.no.45 to 52 excluding 49 of Deewatige ramanahalli)** | CA1 | Not specified | UAC | Built Up | |
| | | CA 2 | Not specified | UAC | Built Up | |
| | | CA 3 | Bus stand | Allotted | Allotted | |
| 10 | Amarajyothi HBCS,Sy no. 431/1 of K P Agrahara | Nil | - | - | - | |
| 11 | Amarajyothi HBCS,Sy no. 421 of K P Agrahara | CA-1 | Not Specified | Park Developed | - | Not Relingquished |
| 12 | Amarajyothi HBCS,Sy no. 435/1,2,3 of K P Agrahara | CA-1 | Not Specified | Park Developed | - | Not Relingquished |
| 13 | Amarajyothi HBCS,Sy no. 417 of K P Agrahara | CA-1 | Not Specified | Temple Existing | - | - |
| 14 | Amarajyothi HBCS,Sy no. 418/1,418/2 of K P Agrahara | Nil | - | - | - | |
| 15 | National HBCS,Sy no. 443/1 of K P Agrahara | Nil | - | - | - | |
| 16 | National HBCS,Sy no. 422/1-5, 423/1,424,427 & 428/2 of K P Agrahara (Modified) | CA-1 | Not Specified | Park Developed | - | Not Relingquished |
| | | CA-2 | Not Specified | Temple Existing | - | |
| | | CA-3 | Not Specified | Vacant | Vacant | |
| | | CA-4 | Not Specified | Vacant | Vacant | |
| | | CA-5 | Not Specified | Vacant | Vacant | |
| 17 | National HBCS,Sy no. 428/1, 430/1 of K P Agrahara | CA-1 | Not Specified | Park Developed | - | Not Relingquished |
| | | CA-2 | Not Specified | Temple | | |
| | | CA-3 | Not Specified | Vacant | Vacant | |

| | | | | | | |
|---|---|---|---|---|---|---|
| 18 | City Chikepet HBCS,Sy no. 353,354 of K P Agrahara | CA-1 | School | School & College building existing | - | |
| | | CA-2 | Not Specified | Vacant | Vacant | |
| 19 | City Chikepet HBCS,Sy no. 413/1 of K P Agrahara | CA-1 | Not Specified | Vacant | Vacant | |
| 20 | Binnimill Labour HBCS,Sy no. 186,189 of K P Agrahara | CA-1 | Not Specified | Vacant | Vacant | |
| 21 | Binnimill Officers HBCS,KPA | CA-1 | Not Specified | Park Developed | - | Not Relingquished |
| 22 | Binnimill Employees HBCS,KPA Sy no. 337/2,3,5 & 338/1 | CA-1 | Hospital | Ayurvedic Hospital | - | |
| 23 | Bapuji HBCS,Sy no. 406 to 410 of K P Agrahara | CA-1 | Not Specified | Vacant | Vacant | Not Relingquished |
| | | CA-2 | Health Centre | Health Centre | - | |
| | | CA-3 | Not Specified | Unauthorized constructions | | |
| | | CA-4 | Not Specified | Temple & Bus Stand | - | |
| 24 | Bapuji Industrial HBCS,sy no. 354/1 to 5, 355,356,357/1,2,3,358,359/2p of KPA | CA-1 | Not Specified | Unauthorized constructions | - | Not Relingquished |
| | | CA-2 | Not Specified | Unauthorized constructions | - | |
| 25 | Vinayaka HBCS,Sy no. 383/4,384/1 & 2 of K P Agrahara | Nil | - | - | - | Not Relingquished |
| 26 | Vinayaka HBCS,Sy no. 367/1,2,3 of K P Agrahara | CA-1 | Not Specified | Park Developed | - | |
| | | CA-2 | BBMP Office | BBMP Office | | |
| 27 | Vinayaka HBCS,Sy no. 373/3 of KPA | Nil | - | - | - | Not Relingquished |

| | | | | | | |
|---|---|---|---|---|---|---|
| 28 | Vinayaka HBCS, Narabhavi 4th Stage HBCS,Nagarabhavi | - | - | - | - | CA Sites & Park are not Relingquished |
| 29 | GKW HBCS , sy no. 377/1 of KP Agrahara | CA-1 | Horticultural | Horticultural Co-operative Society | - | |
| | | CA-2 | Bus Stand | Bus Stand | - | |
| | | CA-3 | Education | Vishvachethan Education Trust | - | |
| 30 | RPF HBCS , sy no. 385/1 of K P Agrahara | CA-1 | Not Specified | RPF Association and Park | - | |
| 31 | Vyalikaval HBCS, sy no. 359/1, 2p, 374/1,375/1,2, 376/1,2,3, 377/2, 377/6 of K P Agrahara | CA-1 | Not Specified | Unauthorized constructions | - | Not Relingquished |
| 32 | Basaveshwara HBCS , sy no. 348/1 & 2 of K P Agrahara | Nil | - | - | - | |
| 33 | Basaveshwara HBCS, sy no. 360 & 362 of K P Agrahara | CA-1 | Communite Hall | Communite Hall | - | |
| | | CA-2 | Temple | Temple & Ward Office | | |
| | | CA-3 | School | School | | |
| 34 | Venkateshwara Gruha Nirmana Sahakara Sanga in Sy no.431 of KPA | CA-1 | Not Specified | Park Developed | - | - |
| 35 | WIDIA HBCS , sy no. 327, 328 | CA-1 | Not Specified | Park Developed | - | Not Relingquished |
| | | CA-2 | Play Ground | Play Ground | - | |
| | | CA-3 | Not Specified | Park Developed | - | |
| 36 | Central Excise HBCS ,sy no. 186/A of K P Agrahara | Nil | - | - | - | |
| 37 | Munilaxmamma HBCS, sy no. 349/6 of K P Agrahara | Nil | - | - | - | |
| 38 | Kempegowda HBCS, sy no. 439/1 of K P Agrahara | Nil | - | - | - | |
| 39 | Hariram oil Das HBCS , sy no. 442/1 to 6 of K P Agrahara | CA-1 | Not Specified | Tigalara Sanga Building | - | Not Relingquished |

| | | | | | | |
|---|---|---|---|---|---|---|
| 40 | Syndicate Bank Employers HBCS,sy no. 66,67 of K P Agrahara | CA-1 | Not Specified | Park Developed | - | Not Relingquished |
| | | CA-2 | Not Specified | Park Developed | - | |
| 41 | Account General HBCS, sy no.143/1,145/2,6,7, 150/2, 150/1,2,3,5 & 162 of Ullal SMV 3rd Block | CA-1 | Education | Allotted to Mutt | - | - |
| 42 | Kalyan Co operative HBCS , Sy no. 238/2,246,251,253/1,2, 254/1,2,3, 255/1,2,3, 258/1-6, 261/1,2,3, 262/1 & 265(p) | CA-27 | Library | Library | - | - |
| | | CA-28 | Play Ground | Play Ground | - | |
| 43 | Telecom Employees HBCS, Sy no. 15 to 19, 21,22,23,26, 27, 28, 31, 53, 54,55 & 130 of K P Agrahara | CA-1 | KEB | KEB | - | Not Relingquished |
| | | CA-2 | Not Specified | Unauthorized constructions | - | |
| | | CA-3 | Not Specified | Unauthorized constructions | - | |
| 44 | Ramco HBCS, KPA Sy No. | Nil | - | - | - | - |
| 45 | Co-operatve Dept. Employees HBCS, KPA Sy No. | Nil | - | - | - | - |
| 46 | Mysore Govt. Employees HBCS, KPA Sy No. | CA-15 | Temple | Ganapathi Temple | - | - |
| | | CA-16 | BBMP Office | BBMP Office | - | |
| 47 | Industries and Commerce HBCS,KPA Sy No. | Nil | - | - | - | - |
| | | | | | | |

Page 21

| Sl no | Name of the layout | CA Details | Purpose /reserved for | Purpose /allotted for | allotted/Vacant if | Remarks |
|---|---|---|---|---|---|---|
| | Details of CA sites in Pvt layouts Pertains to West Division BDA Bangalore | | | | | |
| | Details of CA sites in BDA layouts pertains to (West) | | | | | |
| 1 | Gnanabharathi Layout (Valagerehalli) | CA 1 | Not specified | vacant | Vacant | |
| | | CA 2 | Not specified | Maulana IT training centre | Allotted | |
| | | CA 2p | Not specified | Archana vidya mandira | Allotted | |
| | | CA 3 | Not specified | Jain hospital | Allotted | |
| | | CA 3p | Not specified | Jain hospital | Allotted | |
| | | CA 4 | Not specified | PVP welfare trust | Unauthorised /court case exist | |
| | | CA 5 | Not specified | Not allotted | Unauthorised exist | |
| | | CA 6 | Not specified | Educational institute | Allotted | |
| 2 | Gnanabharathi Layout (Nagadevanahalli) | CA 3A | Cultural centre | Educational institute | Allotted | |
| | | CA 3B | Community hall | Community hall | Allotted | |
| | | CA 4A | Educational institute | Educational institute | Allotted | |
| | | CA 4B | Not specified | Not Allotted | Unauthorised exist | |
| | | CA 2 | Educational institute | Educational institute | Allotted | |
| | | CA 1 | Old age home | Madvaguru trust | Allotted | |
| | | CA 5&6 | Not specified | Not Allotted | Vacant | |
| | | CA 6 | Not specified | Not Allotted | Vacant | |
| 3 | Chandra layout | CA 1 | Education | Siddaganga school | Allotted | |
| | | CA 2 | Cultural | Gnyan pracharak/ coir board | Allotted | |
| | | CA 3 | BBMP office building | BBMP office building | Allotted | |
| | | CA | Social Activity | Khamar Welfare Assn | Allotted | |
| | | CA | Education purpose | Kannada medium school | Allotted | |
| 4 | Nagarabhavi 1st Stage | CA-1 | Burial ground | Burial ground | - | |
| 5. a) | Nagarabhavi 2nd Stage, 1st Block | CA-1(a) | Church | Arch Bishops Bangalore | - | |
| | | CA-1(b) | Hostel | Social Welfare Dept. | - | |
| | | CA-2 | (Quarry) CA | Vacant | Vacant | OS No.6669/98 |
| b) | Nagarabhavi 2nd Stage, 2nd Block | CA-1 | Police Station | Police Station | - | |
| | | CA-2 | Kannada School | Karnataka Samagara Sangha | - | |
| c) | Nagarabhavi 2nd Stage, 3rd Block | CA-1 | Education Institution | KLE Society | - | |

| | | | | | | |
|---|---|---|---|---|---|---|
| | | CA-2 | Shopping Complex | BDA Nagarabhavi Shopping Complex | - | |
| d) | Nagarabhavi 2nd Stage. **5th Block** | CA-1 | GLR | BWSSB | - | |
| | | CA-2 | Education Institution | Bapuji Vidya Samsthe | - | |
| e) | Nagarabhavi 2nd Stage. **8th Block** | CA-9 | Petro bunk | Notified for allottment | - | |
| f) | Nagarabhavi 2nd Stage, **10th Block** | CA-6/1 | GLR | BWSSB | - | |
| | | CA-6/3 | Telephone Exchange | Telecom Dept. | - | |
| | | CA-6/4 | Bang | St. Methodic Church | - | |
| | | CA-6/5 | Police Station | Police Station | - | |
| | | 6/6 | Post office | P & T Vacant | Vacant | |
| | | CA-6/7 | Fire Station | Vacant | Vacant | |
| | | CA-6/8A | Education Institution | Kanaka Vidya Mandira | - | |
| | | CA-6/8B | Education Institution | Vacant | Vacant | |
| | | CA-6/9 | Shopping Complex | Vacant | Vacant | |
| | | CA-6/10 | - | Allotted to police Dept. | - | |
| | | CA-6/11 | - | IOC | - | |
| | | CA-6/12 | Bus Terminals | BMTC | - | |
| | | CA-6/13 | KPTCL | KPTCL | - | |
| g) | Nagarabhavi 2nd Stage, **11th Block** | CA-17 | School and Play Ground | - | Litigation | |

| | | | | | | |
|---|---|---|---|---|---|---|
| h) | Nagarabhavi 2nd Stage 13th Block | CA-1 | School | Cosmo Education Institution | - | |
| i) | Nagarabhavi 2nd Stage 14th Block | CA-1 | - | OS No.1582/97 under Litigation | - | |
| | | CA-2 | - | Under Litigation | - | |
| 6 | RPC Layout | CA-1,2, 3 & 4 | Vijayanagara Club | Vijayanagara Club | - | |
| | | CA-5 | Education Institution | Govt. I Grade College | - | |
| | | CA-6 | Education Institution | St. Jhon School | - | |
| | | CA-7&9 | School | Cambridge School | - | |
| | | CA-8 | BWSSB | BWSSB | - | |
| | | CA-11 | Police Dept. | ACP Office | - | |
| | | CA-11(p) | Temple | Anjaneya Temple | - | |
| | | CA-12 & 13 | Burial Ground | Burial Ground | - | |
| | | CA-14 | School | Barathiya Vidyalaya | - | |
| | | CA-17 | Post Office | Post office | - | |
| | | CA-23 | Swimming Pool | BBMP | - | |
| | | CA-24 | Indiragandhi Indore Stadium | BBMP | - | |
| | | CA-29 | School | New Model Kannada School | - | |
| | | CA-29(p) | KSRTC | BMTC Bus Stand | - | |
| | | CA-32 | Play Ground | Play Ground | - | |
| 7 | MRCR Layout | CA-1 | BSNL | Telephone Exchange | - | |
| | | CA-2 | Education Dept. | My Lingayatha Education Society | - | |
| | | CA-3 | | Veeresh Theater | - | |
| | | CA-1 | Library | Library | - | |
| | | CA1A1 | BSNL | Telephone Exchange | - | |
| | | CA-3 | IPP Centre | IPP Centre | - | |

| | | | | | | |
|---|---|---|---|---|---|---|
| | MRCR Layout | CA-17 & 18 | Play Ground | BBMP | - | |
| | | CA-5 | Hostel | GTTC Hospital | - | |
| | | CA 6 & 7 | School | Sarvagna School | - | |
| | | CA-22 | Machiyara Sangha | Machiyara Sangha | - | |
| | | CA-16 | Library | Central Library | - | |
| | | CA | Association Building | MRCR residence Association building existing | - | |
| | | CA | Association Building | MRCR residence Association building existing | - | |
| | | CA | School | Udaya Education Society | - | |
| | | CA | Hospital | Hospital Building | - | |
| | | CA 2001 | DSS | DSS | - | |
| | | CA-1/B | Society | Rajajinagar Co-operative Society | - | |
| | | CA | Association | MRCR residence Association | - | |
| | | CA 1307 | Petro bunk | Petrol Bunk | - | |
| | | CA 23 & 24 | Bescom | KEB | - | |
| | | CA 1 & 2 | School | Mahadeve Hindi seva Samithi | - | |

| | | | | | | |
|---|---|---|---|---|---|---|
| | MRCR Layout | CA 2C | School | Jagajyothi Basaveshwara School Building | - | |
| | | CA | Police Station | Police Station | - | |
| | | CA-3 | School | Bharathiya Samshkruthika Vidya Peeta | - | |
| | | CA-10 | Sanga | Arya Visya Sanga | - | |
| | | CA | Commercial | Adhi Chunchanagiri Complex | - | |
| | | CA-4 | Mutt | Adhi Chunchanagiri Mutt | - | |
| | | CA-2 | Sanga | Kalyana Basaveshwara Sanga | - | |
| | | CA | Mosque | Mosque | - | |
| | | CA-12 | BBMP | BBMP Building | - | |
| | | CA-14 & 28 | Temple | Vidya Ganapathi Bajana Mandira | - | |
| 8 | Chandra Layout | CA-1 | BSNL | Telephone Exchange | - | |
| | | CA-2 | Police Station | Police Station | - | |
| | | CA-3 | Health Centre | Health Centre | - | |
| | | CA-4 | KEB | KEB | - | |
| | | CA-5 | Post office | Post office | - | |
| | | CA-6 | BMTC | BMTC Bus Terminal | - | |
| | | CA-7 | Society | Chandra Co-operative Society Ltd | - | |
| | | CA-8 | - | Park | - | |
| | | CA-9 | Play Ground | Play Ground | - | |
| | | CA-10 | Association | Chandra Layout Residence Association | - | |
| 9 | Ambedkar Layout | Nil | Nil | Nil | - | |
| 10 | Sajepalya | Nil | Nil | Nil | - | Layout Not Formed |

## ಬೆಂಗಳೂರು ಉತ್ತರ ಹಾಗೂ ದಕ್ಷಿಣ ತಾಲ್ಲೂಕು ತಹಸೀಲ್ದಾರ್ ಕಛೇರಿ ಸ್ಥಳಾಂತರಿಸುವ ಬಗ್ಗೆ

**637; ಶ್ರೀ ಅಶ್ವಥನಾರಾಯಣ (ವಿಧಾನಸಭಾ ಕ್ಷೇತ್ರ)**

ಅ) ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕು ತಹಶೀಲ್ದಾರ್‌ರವರ ಕಛೇರಿಯಲ್ಲಿ ಸರಿಯಾದ ಶೌಚಾಲಯ ಇಲ್ಲದೇ ದುರ್ನಾತದಿಂದ ಕೂಡಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸದರಿ ಕಛೇರಿಗಳನ್ನು ಬೇರೆಕಡೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆಯೇ; ಕೈಗೊಂಡಿದ್ದರೆ, ಯಾವ ಸ್ಥಳಕ್ಕೆ ಸ್ಥಳಾಂತರಿಸಲಾಗುವುದು; (ವಿವರ ನೀಡುವುದು)

ಆ) ಇದೇ ಕೆಂಪೇಗೌಡ ರಸ್ತೆಯಲ್ಲಿ ನಿರ್ಮಾಣವಾಗಿರುವ ಕಂದಾಯ ಭವನದ ಕಾಮಗಾರಿ ಮುಕ್ತಾಯಗೊಂಡಿದೆಯೇ ಮುಕ್ತಾಯಗೊಂಡಿದ್ದರೆ, ಇದನ್ನು ಉದ್ಘಾಟನೆ ಮಾಡಿ ಸಾರ್ವಜನಿಕ ಕಛೇರಿಗಳಿಗೆ ಎಷ್ಟು ದಿನಗಳಲ್ಲಿ ನೀಡಲಾಗುವುದು;

ಇ) ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕು ತಹಶೀಲ್ದಾರ್‌ರವರ ಕಛೇರಿಗಳನ್ನು ಹೊಸದಾಗಿ ನಿರ್ಮಾಣ ಮಾಡಿರುವ ಕಂದಾಯ ಭವನಕ್ಕೆ ಸ್ಥಳಾಂತರಸಿಲಾಗುವುದೇ; (ಮಾಹಿತಿ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

ಅ) ಹಾಲಿ ಇರುವ ತಾತ್ಕಾಲಿಕ ಕಛೇರಿಗಳಲ್ಲಿ ಕೆಲವು ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ಈ ಕಛೇರಿಗಳಿಗೆ ಹೊಸದಾಗಿ ನಿರ್ಮಿಸಿರುವ ಕಂದಾಯ ಭವನದಲ್ಲಿ ಸ್ಥಳಾವಕಾಶ ಹಂಚಿಕೆ ಮಾಡಲಾಗಿದೆ.

ಆ) ಸದ್ಯದಲ್ಲೆ ಉದ್ಘಾಟಿಸಲು ಉದ್ದೇಶಿಸಲಾಗಿದೆ.

ಇ) ಹೌದು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಸಭೆ ಸರಿಯಾದಂತಹ ಒಂದು ಸ್ಥಿತಿಯಲ್ಲಿಲ್ಲ, ಸದನ ಆರ್ಡರ್‌ನಲ್ಲಿಲ್ಲದೆ ಇರುವಾಗ ತಾವು ಇದನ್ನೆಲ್ಲಾ ಓದಿದರೆ ಅರ್ಥವಿದೆಯೇ? ಹಾಗಾದರೆ ನಾನು ಕೂಡ ಓದುತ್ತೇನೆ. ನಾಡಿಗೆ ಜನತೆಗೆ ಅಪಮಾನ.

(ಗೊಂದಲ)

**ಸಭಾಪತಿಯವರು:–** ಸಭೆಯ ಮುಂದಿಡಲಾಗುವ ಕೆಲವು ಕಾಗದಪತ್ರಗಳಿವೆ. ಮೊದಲಿಗೆ ಮುಖ್ಯಮಂತ್ರಿಗಳ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸಬೇಕು.

## ಸಭೆಯ ಮುಂದಿಡಲಾದ ಕಾಗದ ಪತ್ರಗಳು

## ಮೂರನೆ ಪಟ್ಟಿ

**I. ಶ್ರೀ ಡಿ.ವಿ.ಸದಾನಂದಗೌಡ (ಮುಖ್ಯಮಂತ್ರಿ) ಅವರು:-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ 1951ರ ಕಲಂ 37(7)ರ ಪ್ರಕಾರ:**

1. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2010-11ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು

**1984ರ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(7)ರ ಪ್ರಕಾರ**

1. ಶ್ರೀ ಬಿ.ಎನ್.ಚಂದ್ರಶೇಖರಯ್ಯ, ನಿವೃತ್ತ ಪ್ರಧಾನ ಇಂಜಿನಿಯರ್ ಹಾಗೂ ಶ್ರೀ ವಿ.ಮಪ್ಪರಾಜು, ನಿವೃತ್ತ ತಾಂತ್ರಿಕ ಸಹಾಯಕರು, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ಇವರುಗಳ ಸಂಬಂಧವಾಗಿ ಮಾನ್ಯ ಲೋಕಾಯುಕ್ತರವರು ಮಾಡಿರುವ ವಿಶೇಷ ವರದಿಯನ್ನು

**ಕಂಪನಿ ಅಧಿನಿಯಮ 1956 ಪರಿಚ್ಛೇದ 227(4)ನೇ ಪ್ರಕರಣದ ಮೇರೆಗೆ**

1. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 2010-11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು

**ಕಂಪನಿ ಕಾಯ್ದೆ 1956 ಕಲಂ 619(ಎ)(3)ರ ಮೇರೆಗೆ**

1. ಕೊಂಕಣ ರೈಲ್ವೆ ಕಾರ್ಪೋರೇಷನ್‌ನ 2010-11ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

**II. ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) ಅವರು:-** ಮಾನ್ಯ ಸಭಾಪತಿಯವರೇ,

**1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 48(5)ರ ಪ್ರಕರಣದ ಮೇರೆಗೆ:**

1. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2010-11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**1956ರ ಕಂಪನಿ ಅಧಿನಿಯಮ 619(ಎ)ನೇ ಪ್ರಕರಣದ ಮೇರೆಗೆ:**

1. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ 2010-11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತಿದ್ದೇನೆ.

**III. ಡಾ: ವಿ.ಎಸ್.ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು) ~~ಅವರು~~:-** ಮಾನ್ಯ ಸಭಾಪತಿ ಯವರೇ,

**ಕರ್ನಾಟಕ ವಿಶ್ವ ವಿದ್ಯಾಲಯಗಳ ಅಧಿನಿಯಮ 2000ದ ಕಲಂ 50(2)ರ ಮೇರೆಗೆ:**

1. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇದರ 2008–09ನೇ ಸಾಲಿನ ಲೆಕ್ಕಪರಿಶೋಧನೆಯ ಅನುಸರಣಾ ವರದಿ ಮತ್ತು 2009–10ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿಯನ್ನು ಮಂಡಿಸುತ್ತಿದ್ದೇನೆ.

ಡಾ: ವಿ.ಎಸ್. ಆಚಾರ್ಯ (ಸಭಾನಾಯಕರು):- ಮಾನ್ಯ ಸಭಾಪತಿಯವರೇ,

**IV. ~~[illegible]~~ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರ ~~[illegible]~~** ಪರವಾಗಿ

**1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 300(5)ನೇ ಪ್ರಕರಣದ ಮೇರೆಗೆ:**

1. ಯಾದಗಿರಿ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತಿದ್ದೇನೆ.

**V. ಶ್ರೀ ಆರ್.ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು) ~~ಅವರು~~ :-** ಮಾನ್ಯ ಸಭಾಪತಿಯವರೇ

**ವಿಚಾರಣಾ ಆಯೋಗದ ಕಾಯ್ದೆ 1952ರ ಕಲಂ 3(4)ರ ಮೇರೆಗೆ:**

1. ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಿಸಲ್ಪಟ್ಟ ಶ್ರೀ ಹೆಚ್.ನಾಗಪ್ಪ, ಮಾಜಿ ಸಚಿವರು ಇವರ ಹತ್ಯೆಗೆ ಕಾರಣವಾದ ಸನ್ನಿವೇಶಗಳ ಬಗ್ಗೆ ನ್ಯಾಯಮೂರ್ತಿ ಶ್ರೀ ಆರ್.ಜಿ.ವೈದ್ಯನಾಥ್‌ರವರ ವಿಚಾರಣಾ ಆಯೋಗದ ವರದಿಯನ್ನು ಮಂಡಿಸುತ್ತಿದ್ದೇನೆ

ಡಾ: ವಿ. ಎಸ್. ಆಚಾರ್ಯ (ಸಭಾನಾಯಕರು):- ಮಾನ್ಯ ಸಭಾಪತಿಯವರೇ,

**VI. ~~[illegible]~~ (ಇಂಧನ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರ ~~[illegible]~~** ಪರವಾಗಿ

**1956ರ ಕಂಪನಿಗಳ ಅಧಿನಿಯಮದ 619(ಎ)ನೇ ಪ್ರಕರಣದ ಮೇರೆಗೆ:**

1. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಡಾ: ವಿ. ಎಸ್. ಆಚಾರ್ಯ (ಸಭಾನಾಯಕರು) :- ಮಾನ್ಯ ಸಭಾಪತಿಯವರೇ

**VII. ~~[illegible]~~ (ಕೃಷಿ ಸಚಿವರ ~~[illegible]~~** ಪರವಾಗಿ

**1956ರ ಕಂಪನಿ ಅಧಿನಿಯಮ 619ಎರ ಪ್ರಕರಣದ ಮೇರೆಗೆ:**

1. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ, ಗುಲ್ಬರ್ಗಾ ಇದರ 2010–11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**VIII. ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) ~~ಅವರು~~:-** ಮಾನ್ಯ ಸಭಾಪತಿಯವರೇ,

**1956ರ ಕಂಪನಿ ಅಧಿನಿಯಮ 619ಎ(2)ರ ಪ್ರಕರಣದ ಮೇರೆಗೆ:**

1. ಕಾವೇರಿ ನೀರಾವರಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**IX. ಶ್ರೀ ಎಸ್.ಎ.ರವೀಂದ್ರನಾಥ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು) ಅವರು:-** ಮಾನ್ಯ ಸಭಾಪತಿಯವರೇ,

**1956ರ ಕಂಪನಿ ಅಧಿನಿಯಮ 619ಎ(2)ರ ಪ್ರಕರಣದ ಮೇರೆಗೆ:**

1. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ.
3. ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತಿದ್ದೇನೆ.

**X. ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) ಅವರು:-** ಮಾನ್ಯ ಸಭಾಪತಿಯವರೇ,

**1956ರ ಕಂಪನಿ ಅಧಿನಿಯಮ 619ಎ(2)ರ ಪ್ರಕರಣದ ಮೇರೆಗೆ:**

1. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**XI. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಅವರು:-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕಾಯ್ದೆ ಸೆಕ್ಷನ್ 25(3)ರ ಪ್ರಕರಣದ ಮೇರೆಗೆ:**

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಡಾ: ವಿ.ಎಸ್. ಆಚಾರ್ಯ (ಸಭಾನಾಯಕರು):- ಮಾನ್ಯ ಸಭಾಪತಿಯವರೇ,

**XII. ~~ಶ್ರೀ ಆರ್. ವರ್ತೂರ್ ಪ್ರಕಾಶ್~~ (ಜವಳಿ ಸಚಿವರ ~~ಅವರು~~** ಪರವಾಗಿ

**1956ರ ಕಂಪನಿ ಅಧಿನಿಯಮದ 619(ಎ)(2) ಪ್ರಕರಣದ ಮೇರೆಗೆ:**

1. ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

**XIII. ಶ್ರೀ ಸಿ.ಪಿ.ಯೋಗೀಶ್ವರ್ (ಅರಣ್ಯ ಸಚಿವರು) ಅವರು:-** ಮಾನ್ಯ ಸಭಾಪತಿಯವರೇ,

**1956ರ ಕಂಪನಿಗಳ ಅಧಿನಿಯಮ 619(4)ರ ಮೇರೆಗೆ:**

1. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಸಭಾಪತಿಯವರು:- ಮಂಡಿಸಲಾಯಿತು

ಪಿ.ಶ್ರೀಶ್,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

**********************

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:–** ಸನ್ಮಾನ್ಯ ರಾಜ್ಯಪಾಲರು ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾಡಿರುವ ಭಾಷಣಕ್ಕೆ ಈಗಾಗಲೇ ವಂದನಾ ನಿರ್ಣಯ ಮಂಡನೆಯಾಗಿದೆ. ಅದರ ಬಗ್ಗೆ ಮುಖ್ಯಮಂತ್ರಿಯವರು ಏನಾದರೂ ಸಮಜಾಯಿಷಿ ಹೇಳುವುದಿದ್ದರೆ ಹೇಳಬಹುದು.

**ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಯವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಮಂಡಲದಲ್ಲಿ . . .

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:** ಬಾವಿಯಲ್ಲಿರುವವರು ಮಾತನಾಡಿದ್ದನ್ನು, ಘೋಷಣೆ ಕೂಗಿದ್ದನ್ನು ದಾಖಲೆ ಮಾಡತಕ್ಕದ್ದಲ್ಲ, ಮಾಧ್ಯಮ ಮಿತ್ರರೂ ದಯಮಾಡಿ ಇದರ ಬಗ್ಗೆ ಗಮನಿಸಬೇಕು. ಇಲ್ಲಿ ಕಾನೂನುಬಾಹಿರವಾಗಿ ಯಾರಾದರೂ ಮಾತನಾಡಿದ್ದರೆ ಅದನ್ನು ಯಾರೂ ದಾಖಲೆ ಮಾಡತಕ್ಕದ್ದಲ್ಲ, ವರದಿಯನ್ನು ಸಹ ಮಾಡತಕ್ಕದ್ದಲ್ಲ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸನ ಸಭೆಯಲ್ಲಿ ನಡೆಯುವಂತಹ ಚರ್ಚೆಗಳಿಗೆ ಅತ್ಯಂತ ಮಹತ್ವವಿದೆ. ಆಡಳಿತ ಪಕ್ಷದ ಜೊತೆ ವಿರೋಧ ಪಕ್ಷಗಳು ಸಹಕರಿಸಿದರೆ ಅದರ ಮಹತ್ವ ಇನ್ನಷ್ಟು ಹೆಚ್ಚಾಗುತ್ತದೆ ಮತ್ತು ಪ್ರಜಾತಂತ್ರ ಮೌಲ್ಯಕ್ಕೆ ಹೆಚ್ಚು ಅರ್ಥ ಬರುತ್ತದೆ. ರಚನಾತ್ಮಕವಾಗಿ ಸಹಕಾರ ಮಾಡಬೇಕಾಗಿರುವುದು ವಿರೋಧ ಪಕ್ಷದ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಈ ರೀತಿ ಕಾರ್ಯಕಲಾಪಗಳಿಗೆ ಶೋಭೆ ತರುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕು ಎನ್ನುವ ಹಿತದೃಷ್ಟಿಯಿಂದ ನಾನು ಮುಖ್ಯಮಂತ್ರಿಯಾದ ಮೇಲೆ ಕಲಾಪಗಳನ್ನು 60 ದಿವಸ ನಡೆಸಬೇಕು ಎನ್ನುವ ಉದ್ದೇಶದಿಂದ ಪ್ರಾರಂಭ ಮಾಡಿದ್ದೇನೆ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಇವತ್ತಿಗೆ ಅಧಿವೇಶನ ಪ್ರಾರಂಭವಾಗಿ ಹತ್ತು ದಿವಸಗಳು ಕಳೆದಿದೆ, ಇನ್ನು ಎರಡು ದಿವಸ ಬಾಕಿ ಉಳಿದಿದೆ. ಈ ಎರಡು ದಿವಸ ಕಾರ್ಯಕಲಾಪಗಳಿಗೆ ಅಡೆತಡೆವೊಡ್ಡಬೇಕು ಎನ್ನುವ ದೃಷ್ಟಿಯಿಂದಲೇ ಪ್ರತಿಪಕ್ಷದ ಎಲ್ಲಾ ಸದಸ್ಯರುಗಳು ಇವತ್ತು ನಾನು ಉತ್ತರ ಕೊಟ್ಟ ಮೇಲೆಯೂ ಸಹ ಈ ರೀತಿಯ ವರ್ತನೆಗಳನ್ನು ಮಾಡುತ್ತಿರುವುದು ಪ್ರಜಾತಂತ್ರ ವ್ಯವಸ್ಥೆಗೆ ಗೌರವ ತರುವಂಥದ್ದಲ್ಲ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಸಭೆಯ ಕಲಾಪಗಳನ್ನು ಹತ್ತು ದಿವಸ ನಡೆಸಬೇಕು ಎಂಬುದು ನಮ್ಮ ಇರಾದೆ. ಆ ಹತ್ತು ದಿವಸಕ್ಕೆ ಬೇಕಾದಂತಹ ಎಲ್ಲಾ ಕಾರ್ಯಚಟುವಟಿಕೆಗಳನ್ನು ತಾವು ಈಗಾಗಲೇ ಕೊಟ್ಟಿದ್ದೀರಿ. ನಿಜವಾದ ಅರ್ಥದಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚರ್ಚೆಗಳು ನಡೆಯಬೇಕು ಎಂಬುದು ವಿರೋಧ ಪಕ್ಷದವರಿಗೆ ಇದ್ದರೆ ಪ್ರಾಯಶಃ ತಮ್ಮ ಆದೇಶಗಳನ್ನು ಅವರು ಪಾಲನೆ ಮಾಡಬೇಕು, ಮತ್ತು ಆ ಚರ್ಚೆ ಅತ್ಯಂತ ಯಶಸ್ವಿಯಾಗಿ ನಡೆಯಬೇಕು. ಈಗ ಮಾನ್ಯ ವಿರೋಧ ಪಕ್ಷದವರು ಪ್ರಸ್ತಾಪ ಮಾಡಿದಂತಹ ಪ್ರಶ್ನೆಗೆ ತಮ್ಮ ಮುಂದೆ ಕೂಲಂಕುಷವಾದಂತಹ ಎಲ್ಲಾ ವಿಚಾರಗಳನ್ನು ಕೊಟ್ಟಮೇಲೆಯೂ ಸಹ ಇವತ್ತು ಬೇಕಂತಲೆ ಗದ್ದಲಗಳನ್ನೆಬ್ಬಿಸುವಂಥದ್ದು ಪ್ರತಿಪಕ್ಷದವರು ಸದನದ ಕಲಾಪಕ್ಕೆ ಅಡ್ಡಿ ಉಂಟು ಮಾಡಬೇಕು, ಸದನಕ್ಕೆ ಅಗೌರವ ತೋರಿಸಬೇಕೆಂದು ಈ ರೀತಿ ವರ್ತಿಸುತ್ತಿದ್ದಾರೆಂದು ನಾನು ಭಾವಿಸುತ್ತೇನೆ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ನಾನು ಈಗಾಗಲೇ ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ವಿಚಾರಗಳನ್ನು ಕಾನೂನು ಸುವ್ಯವಸ್ಥೆ, ಆಡಳಿತ ಸುಧಾರಣೆ, ಬರ ಪರಿಸ್ಥಿತಿಯ ಬಗ್ಗೆ ತೆಗೆದುಕೊಂಡಂತಹ ನಿಲುವು, ಆರ್ಥಿಕ ಪರಿಸ್ಥಿತಿ ಹಾಗೂ ಪ್ರಮುಖ ಯೋಜನೆಗಳಾದಂತಹ ಭಾಗ್ಯಲಕ್ಷ್ಮಿ ಯೋಜನೆ,

ಕ್ಷೀರ ಸಹಾಯಧನ, ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ಮತ್ತು ಅದರಲ್ಲಿ ಆದಂತಹ ವಿದ್ಯಮಾನಗಳು, ಕೃಷಿ ಸಾಲದ ಬಗ್ಗೆ ನಾವು ತೆಗೆದುಕೊಂಡಂತಹ ನಿಲುವು, ಉಚಿತ ವಿದ್ಯುತ್. ರಸಗೊಬ್ಬರ ಮತ್ತು ಬಿತ್ತನೆ ಬೀಜ ಸಹಾಯಧನ, ಸಾವಯವ ಕೃಷಿಯ ಬಗ್ಗೆ ನಾವು ತೆಗೆದುಕೊಂಡಂತಹ ನಿಲುವು, ಆರೋಗ್ಯ ಕವಚದಂತಹ ಅದ್ಭುತ ಯೋಜನೆಗಳನ್ನು ಅನುಷ್ಠಾನ ಮಾಡಿರುವಂಥದ್ದು, ನಿರಂತರ ಜ್ಯೋತಿ ವಿದ್ಯುತ್ ಕೊಡುವಂಥದ್ದು, ಶಿಕ್ಷಣಕ್ಕೆ ಆದ್ಯತೆ ಕೊಟ್ಟು ಇಡೀ ದೇಶದಲ್ಲಿಯೇ ಅದ್ಭುತವಾದಂತಹ ಕೆಲಸ ಕಾರ್ಯಗಳನ್ನು ಮಾಡಿರುವಂಥದ್ದು, 1,700 ಕೋಟಿ ರೂಪಾಯಿಗಳನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಈಗಾಗಲೇ ಆಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟು ನೀರಾವರಿಗೆ ಆದ್ಯತೆ ಕೊಟ್ಟಿರುವಂಥದ್ದು, ಗ್ರಾಮೀಣಾಭಿವೃದ್ಧಿ ಯೋಜನೆಗೆ ಹೆಚ್ಚು ಒತ್ತು ಕೊಟ್ಟಿರುವಂಥದ್ದು, ಪಂಚಾಯಿತಿಗಳಿಗೆ ಹೆಚ್ಚು ಅನುದಾನವನ್ನು ಕೊಟ್ಟಿರುವಂಥದ್ದು, ವಸತಿ ಯೋಜನೆಯಲ್ಲಿ ಇಡೀ ದೇಶದಲ್ಲಿಯೇ ನಾವು ಪ್ರಶಸ್ತಿಗಳನ್ನು ತೆಗೆದುಕೊಂಡು

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ವಸತಿಯಲ್ಲಿ ಅತ್ಯಂತ ಅಗ್ರಸ್ಥಾನವನ್ನು ಪಡೆದುಕೊಂಡು, ಆಸರೆ ಯೋಜನೆಯಲ್ಲಿ ವಿಶೇಷವಾದಂತಹ ಅನುಷ್ಠಾನ ಮಾಡಿರುವಂಥದ್ದು, ವಿದ್ಯುತ್‌ನಲ್ಲಿ ತೆಗೆದುಕೊಂಡಂತಹ ಹತ್ತು ಹಲವು ನಿಲುವುಗಳು, ವಿಮಾನ ನಿಲ್ದಾಣಗಳ ಅಭಿವೃದ್ಧಿ, ನಗರಾಭಿವೃದ್ಧಿಯಲ್ಲಿ ತೆಗೆದುಕೊಂಡಂತಹ ಹೊಸ ಹೊಸ ಯೋಜನೆಗಳು, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಉದ್ಯೋಗವಕಾಶ ಕೊಟ್ಟಿರುವಂಥದ್ದು, ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಿರುವಂಥದ್ದು, ನಾಗರೀಕ ಸ್ನೇಹಿ ಕ್ರಮಗಳನ್ನು ತೆಗೆದುಕೊಳ್ಳುವಂಥದ್ದು Right to Services Act ಎನ್ನುವ ಅದ್ಭುತವಾದಂತಹ ಕಾನೂನನ್ನು ಕರ್ನಾಟಕ ರಾಜ್ಯದಲ್ಲಿ ಜಾರಿ ಮಾಡಿರುವಂಥದ್ದು, ರೈಲ್ವೆ ಯೋಜನೆಗಳಿಗೆ ಹೆಚ್ಚು ಒತ್ತು ಕೊಟ್ಟಿರುವಂಥದ್ದು, ಈ ರೀತಿ ಅದ್ಭುತವಾದಂತಹ ಹೊಸ ಹೊಸ ಕಾರ್ಯಕ್ರಮಗಳನ್ನು ಜನಪರವಾದಂತಹ ಮತ್ತು ರಾಜ್ಯದ ಹಿತಾಸಕ್ತಿಯುಳ್ಳ ಅಧ್ಭುತವಾದಂತಹ

ಕೆಲಸ ಕಾರ್ಯಗಳನ್ನು ಮಾಡಿರುವಂಥದ್ದು ಕರ್ನಾಟಕ ರಾಜ್ಯವನ್ನು ಇಡೀ ದೇಶದಲ್ಲಿಯೇ ಅಭಿವೃದ್ಧಿಯಲ್ಲಿ ನಂಬರ್ ಒನ್ ರಾಜ್ಯವನ್ನಾಗಿ ಪರಿವರ್ತನೆ ಮಾಡುವಂತಹ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರ ತೆಗೆದುಕೊಂಡಂತಹ ನಿಲುವುಗಳು ಅದ್ಭುತವಾಗಿದೆ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎಲ್ಲವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಾನು ಅದಕ್ಕೆ ಪೂರಕವಾದಂತಹ ಎಲ್ಲಾ ವಿಚಾರಗಳನ್ನು ಲಿಖಿತ ಉತ್ತರದ ರೂಪದಲ್ಲಿ ತಮ್ಮಗಳ ಮುಂದೆ ಮಂಡಿಸುತ್ತಿದ್ದೇನೆ. ಇದನ್ನು ಸ್ವೀಕಾರ ಮಾಡಿ ಅನುಮೋದನೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನನ್ನ ಲಿಖಿತ ಭಾಷಣವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಇದನ್ನು ಸದನದ ಕಲಾಪದ ನಡವಳಿಕೆಗಳಿಗೆ ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ವಿಧಾನ ಮಂಡಲವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯವರು ಲಿಖಿತ ಭಾಷಣದ ಪ್ರತಿಯನ್ನು ಸದನದಲ್ಲಿ ಮಂಡಿಸಿದರು)

## 4. ವಿಧಾನ ಮಂಡಲವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದ ಉತ್ತರದ ಮಂಡನೆ.

**ಸನ್ಮಾನ್ಯ ಸಭಾಪತಿಯವರೆ,**

- ವಿಧಾನ ಮಂಡಲದಲ್ಲಿ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಕುರಿತು ಈ ಸದನದಲ್ಲಿ ನಡೆದ ಚರ್ಚೆಗೆ ಸರ್ಕಾರದ ಪರವಾಗಿ ಉತ್ತರ ನೀಡಲು ಇಚ್ಛಿಸುತ್ತೇನೆ.

- ಆಡಳಿತ ಪಕ್ಷದ ಸದಸ್ಯರಾದ ಶ್ರೀ ಅಶ್ವತ್ಥನಾರಾಯಣ ಹಾಗೂ ಮತ್ತಿತರರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ.

- ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಸಂಕ್ಷಿಪ್ತ ಚಿತ್ರವನ್ನು ರಾಜ್ಯಪಾಲರ ಭಾಷಣದ ರೂಪದಲ್ಲಿ ಸದನದ ಮೂಲಕ ನಾಡಿನ ಜನತೆಗೆ ಒದಗಿಸಲಾಗಿದೆ.

- ಹಿಂದಿನ ಸಂದರ್ಭಕ್ಕೆ ಹೋಲಿಸಿದಾಗ ಈ ಬಾರಿ ಗೌರವಾನ್ವಿತ ರಾಜ್ಯಪಾಲರ ಭಾಷಣವನ್ನು ಸದನದ ಸದಸ್ಯರು ಅತ್ಯಂತ ಗೌರವಯುತವಾಗಿ ಮತ್ತು ಗಂಭೀರವಾಗಿ ಸ್ವೀಕರಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ಆದ್ದರಿಂದ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರೆಲ್ಲರನ್ನೂ ನಾನು ಅಭಿನಂದಿಸುತ್ತೇನೆ.

**ಸುಗಮ ಕಾರ್ಯಕಲಾಪ**

- ಅಲ್ಲದೆ ರಾಜ್ಯಪಾಲರ ಭಾಷಣದ ನಂತರದ ಕಲಾಪಗಳೂ ಕೂಡಾ ಬಹುತೇಕ ಶಾಂತಿಯುತವಾಗಿ ನಡೆದು ಹಲವಾರು ವಿಷಯಗಳ ಬಗ್ಗೆ ಗಂಭೀರ ಹಾಗೂ ಅರ್ಥಪೂರ್ಣವಾದ ಚರ್ಚೆಗಳಾಗಿವೆ.

- ಶಾಸನ ಸಭೆಯ ಕಲಾಪಗಳು ದಿಕ್ಕು ತಪ್ಪುತ್ತಿವೆ ಎಂಬ ಅಭಿಪ್ರಾಯ ಸಾಮಾನ್ಯವಾಗುತ್ತಿರುವ ಸಂದರ್ಭದಲ್ಲಿ ಇದು ಆಶಾದಾಯಕ ಬೆಳವಣಿಗೆಯಾಗಿದೆ.

**ಚರ್ಚೆಯ ಮಹತ್ವ**

- ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸನ ಸಭೆಗಳಲ್ಲಿ ನಡೆಯುವ ಚರ್ಚೆಗಳಿಗೆ ಅತ್ಯಂತ ಮಹತ್ವವಿದೆ. ಆಳುವ ಪಕ್ಷದ ಜೊತೆಗೆ ವಿರೋಧ ಪಕ್ಷದ ಸದಸ್ಯರೂ ಕೂಡಾ ರಚನಾತ್ಮಕವಾಗಿ ಸಹಕರಿಸಿದರೆ ಕಾರ್ಯಕಲಾಪಗಳಿಗೆ ಶೋಭೆ ಬರುತ್ತದೆ.

- ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ವಸ್ತುನಿಷ್ಠ ಚರ್ಚೆ ಹಾಗೂ ಶಾಸನ ರಚನೆಯ ಪ್ರಕ್ರಿಯೆ ಫಲಪ್ರದವಾಗಿ ಜರುಗಲು ಅನುವಾಗುತ್ತದೆ. ಈ ದೃಷ್ಟಿಯಿಂದ ಪ್ರಸಕ್ತ ಅಧಿವೇಶನ ಸರಿದಾರಿಯಲ್ಲಿ ಸಾಗಿದೆ ಮತ್ತು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಸಾಧ್ಯಗೊಳಿಸುತ್ತದೆಂಬ ಆಶಾಭಾವನೆ ಮೂಡಿದೆ.

**ಕಾನೂನು ಸುವ್ಯವಸ್ಥೆ**

- ರಾಜ್ಯ ಪ್ರಗತಿ ಪಥದಲ್ಲಿ ಮುನ್ನಡೆಯಲು ಶಾಂತಿ ಸುವ್ಯವಸ್ಥೆ ಕಾಪಾಡುವುದು ಅತಿ ಮುಖ್ಯ. ರಾಜ್ಯದಾದ್ಯಂತ ಯಾವುದೇ ಅಹಿತಕರ ಘಟನೆಗಳು ನಡೆಯಲು ನಮ್ಮ ಸರ್ಕಾರ ಅವಕಾಶ ನೀಡದೆ ಕಾನೂನು ಸುವ್ಯವಸ್ಥೆ ಸುಧಾರಿಸಿದೆ.

- ಸಣ್ಣಪುಟ್ಟ ಘಟನೆಗಳು ಜರುಗಿದ್ದರೂ ಅನಾಹುತ ಸಂಭವಿಸುವ ಮೊದಲೇ ನಿಯಂತ್ರಣಕ್ಕೆ ತರಲಾಗಿದೆ. ರಾಜ್ಯದಾದ್ಯಂತ ಶಾಂತ ಪರಿಸ್ಥಿತಿ ಕಾಪಾಡಿಕೊಂಡು ಬರಲಾಗಿದೆ ಎನ್ನಲು ನನಗೆ ಸಂತೋಷವಾಗುತ್ತಿದೆ.

**ಆಡಳಿತ ಸುಧಾರಣೆ**

- ಆಡಳಿತ ಯಂತ್ರ ಚುರುಕಾಗಿ ಕೆಲಸ ಮಾಡಿದಾಗ ಮಾತ್ರ ನಾಗರೀಕರು ನೆಮ್ಮದಿಯಿಂದಿರಲು ಸಾಧ್ಯ. ಆದ್ದರಿಂದ ಆಡಳಿತದಲ್ಲಿ ಸುಧಾರಣೆ ತರಲು ನಮ್ಮ ಸರ್ಕಾರ ವಿಶೇಷ ಗಮನ ನೀಡಿದೆ. ಈ ದಿಶೆಯಲ್ಲಿ ಮೊದಲ ಹೆಜ್ಜೆಯಾಗಿ ನಾಗರೀಕ ಸೇವಾ ಹಕ್ಕು ಅಧಿನಿಯಮ ಜಾರಿಗೆ ವ್ಯಾಪಕ ಸಿದ್ಧತೆ ಮಾಡಿಕೊಳ್ಳಲಾಗಿದೆ.

- ನಾಗರೀಕರಿಗೆ ವಿಳಂಬವಿಲ್ಲದೆ, ಅಡಚಣೆಗಳಿಲ್ಲದೆ ಸಕಾಲದಲ್ಲಿ ಸರ್ಕಾರಿ ಸೇವೆ ಮತ್ತು ಸವಲತ್ತುಗಳು ದೊರೆಯಬೇಕು ಎಂಬುದು ನಮ್ಮ ಸರ್ಕಾರದ ಧ್ಯೇಯವಾಗಿದೆ. ಈ ಗುರಿ ಸಾಧನೆಗೆ ಅಗತ್ಯವಾದ ಪೂರ್ವಭಾವಿ ಪ್ರಕ್ರಿಯೆಗಳನ್ನು ಸರ್ಕಾರ ಪೂರ್ಣಗೊಳಿಸಿದೆ.

- ಪ್ರಾರಂಭದಲ್ಲಿ ನಾಗರೀಕ ಖಾತರಿ ಅಧಿನಿಯಮದ ವ್ಯಾಪ್ತಿಗೆ 11 ಇಲಾಖೆಗಳ 151 ಸೇವೆಗಳನ್ನು ಒಳಪಡಿಸಿದ್ದು, ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕೆ ಬೇಕಾದ ತರಬೇತಿಯನ್ನು ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಗೆ ಮೈಸೂರಿನ ಆಡಳಿತ ಸಂಸ್ಥೆ ವತಿಯಿಂದ ನೀಡಲು ವ್ಯವಸ್ಥೆ ಮಾಡಲಾಗುತ್ತಿದೆ.
- ಈ ಕಾಯ್ದೆ ಈಗಾಗಲೇ ಬಿಹಾರ ರಾಜ್ಯದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿದೆ. ಅದಕ್ಕೂ ಹೆಚ್ಚು ಪರಿಣಾಮಕಾರಿಯಾಗಿ ಕರ್ನಾಟಕದಲ್ಲಿ ಅನುಷ್ಠಾನ ಮಾಡಬೇಕೆಂಬ ಸಂಕಲ್ಪವನ್ನು ನಮ್ಮ ಸರ್ಕಾರ ಮಾಡಿದೆ.

**ಬರ ಪರಿಸ್ಥಿತಿ**

- ಈ ವರ್ಷ ಮುಂಗಾರು ವಿಫಲವಾದ ಹಿನ್ನೆಲೆಯಲ್ಲಿ ರಾಜ್ಯ ತೀವ್ರ ಬರ ಪರಿಸ್ಥಿತಿ ಎದುರಿಸುತ್ತಿದೆ. ಕಳೆದ ನಾಲ್ಕು ದಶಕಗಳಲ್ಲಿ ಇಂತಹ ದುರ್ಭರ ಪರಿಸ್ಥಿತಿ ಎದುರಾಗಿರಲಿಲ್ಲ. 24 ಜಿಲ್ಲೆಗಳ 123 ತಾಲ್ಲೂಕುಗಳು ಬರಪೀಡಿತವಾಗಿವೆ. ಬರಪೀಡಿತ ಪ್ರದೇಶಗಳ ಜನ ಮತ್ತು ಜಾನುವಾರುಗಳ ರಕ್ಷಣೆಗೆ ಸರ್ಕಾರ ತಕ್ಷಣವೇ ಸ್ಪಂದಿಸಿದೆ.
- ಬರ ಪರಿಹಾರ ಕಾಮಗಾರಿಗಳಿಗೆ ವಿವಿಧ ಕಾರ್ಯಕ್ರಮಗಳಡಿ 1,001 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರು ಸರಬರಾಜು ವ್ಯವಸ್ಥೆ ಮಾಡಲಾಗಿದೆ. ಬರಪೀಡಿತ ಪ್ರದೇಶಗಳಿಂದ ಉದ್ಯೋಗವನ್ನರಸಿ ಜನ ವಲಸೆ ಹೋಗುವುದನ್ನು ತಪ್ಪಿಸಲು ಸಾಕಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ.
- ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಬರಪೀಡಿತ ಪ್ರದೇಶದಲ್ಲಿ ಉದ್ಯೋಗ ಖಾತರಿ ಯೋಜನೆಯಡಿ ಒಟ್ಟು 1,77,056 ಕಾಮಗಾರಿಗಳ ಮಂಜೂರಾತಿ ನೀಡಲಾಗಿದ್ದು, 19,238 ಕಾಮಗಾರಿಗಳನ್ನು

ಪೂರ್ಣಗೊಳಿಸಲಾಗಿದೆ. 1,57,818 ಕಾಮಗಾರಿಗಳು ಚಾಲ್ತಿಯಲ್ಲಿದೆ. ರೂ. 1,174.07 ಕೋಟಿ ಹಣ ಲಭ್ಯವಿದ್ದು, ಈವರೆಗೆ ರೂ. 828.05 ಕೋಟಿ ಹಣ ವೆಚ್ಚವಾಗಿದೆ.

○ ಬರ ಪರಿಸ್ಥಿತಿ ನಿರ್ವಹಣೆಗೆ 723 ಕೋಟಿ ರೂ.ಗಳ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ.

**ಆರ್ಥಿಕ ಪರಿಸ್ಥಿತಿ**

○ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದೆ. ಸಂಪನ್ಮೂಲ ಸುಧಾರಣೆಗೆ ನಮ್ಮ ಸರ್ಕಾರ ಕೈಗೊಂಡಿರುವ ಕ್ರಮಗಳು ಫಲ ನೀಡಿವೆ.

○ ಕಳೆದ ವರ್ಷದ ಜನವರಿ ಅಂತ್ಯಕ್ಕೆ 44,490 ಕೋಟಿ ರೂ. ರಾಜಸ್ವ ಸಂಗ್ರಹವಾಗಿತ್ತು. ಈ ವರ್ಷ ಜನವರಿ ಅಂತ್ಯಕ್ಕೆ 52,686 ಕೋಟಿ ರೂ. ರಾಜಸ್ವ ಸಂಗ್ರಹವಾಗಿದೆ.

○ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ರಾಜಸ್ವ ಸಂಗ್ರಹ ಶೇ.18 ರಷ್ಟು ಹೆಚ್ಚಿದೆ. ನಮ್ಮ ಯೋಜನಾ ವೆಚ್ಚ ಕೂಡ ಕಳೆದ ವರ್ಷಕ್ಕಿಂತ ಶೇ. 17 ರಷ್ಟು ಈ ವರ್ಷ ಹೆಚ್ಚಾಗಿದೆ.

○ ಈ ವರ್ಷ ಅಂದರೆ 2011–12ನೇ ಸಾಲಿನಲ್ಲಿ 38,070 ಕೋಟಿ ರೂ. ವಾರ್ಷಿಕ ಯೋಜನಾ ವೆಚ್ಚದ ಗುರಿ ಹಾಕಿಕೊಂಡಿದ್ದು, ಇದನ್ನು ಪೂರ್ಣ ಪ್ರಮಾಣದಲ್ಲಿ ಸಾಧಿಸುವ ವಿಶ್ವಾಸವಿದೆ.

**ಪ್ರಮುಖ ಯೋಜನೆಗಳು**

**ಭಾಗ್ಯಲಕ್ಷ್ಮಿ**

○ ಬಡತನ ರೇಖೆ ಕೆಳಗೆ ಜೀವಿಸುತ್ತಿರುವ ಕುಟುಂಬಗಳ ಹೆಣ್ಣು ಮಕ್ಕಳ ಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗೆ ಮಾಧ್ಯಮವಾಗಿರುವ ಭಾಗ್ಯಲಕ್ಷ್ಮಿ ಯೋಜನೆ ನಮ್ಮ ಸರ್ಕಾರದ ಪ್ರಧಾನ ಯೋಜನೆಗಳಲ್ಲಿ ಮುಖ್ಯವಾದುದು.

- ಪ್ರತಿ ವರ್ಷ ಸುಮಾರು 2 ಲಕ್ಷ ಮಂದಿ ಬಡ ಕುಟುಂಬಗಳ ಹೆಣ್ಣುಮಕ್ಕಳು ಈ ಯೋಜನೆ ವ್ಯಾಪ್ತಿಗೆ ಒಳಪಡುತ್ತಿದ್ದಾರೆ. ಈವರೆಗೆ 11.40 ಲಕ್ಷ ಮಂದಿಗೆ ಈ ಯೋಜನೆಯಡಿ ಪ್ರಯೋಜನ ದೊರೆತಿದೆ. ಸರ್ಕಾರಕ್ಕೆ ವಾರ್ಷಿಕ ಸುಮಾರು 407 ಕೋಟಿ ರೂ. ವೆಚ್ಚವಾಗುತ್ತಿದೆ.

**ಕ್ಷೀರ ಸಹಾಯಧನ**

- ಪ್ರತಿ ವರ್ಷ ಸುಮಾರು 7 ಲಕ್ಷ ಮಂದಿ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ 2 ರೂ.ನಂತೆ ವಿಶೇಷ ಪ್ರೋತ್ಸಾಹಧನ ನೀಡಲಾಗುತ್ತಿದೆ. ಈ ವರ್ಷ 7 ಲಕ್ಷ ಹಾಲು ಉತ್ಪಾದಕರಿಗೆ 300 ಕೋಟಿ ರೂ. ಪ್ರೋತ್ಸಾಹಧನ ದೊರೆತಿದೆ.

**ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ**

- ಸದನದ ಗೌರವಾನ್ವಿತ ಸದಸ್ಯರಿಗೆಲ್ಲಾ ತಿಳಿದಿರುವಂತೆ ನಮ್ಮ ಸರ್ಕಾರ ಮೊದಲ ಬಾರಿಗೆ ಕೃಷಿ ಮತ್ತು ಸಂಬಂಧಿಸಿದ ವಲಯಗಳಲ್ಲಿ ಹೆಚ್ಚು ಖಾಸಗಿ ಬಂಡವಾಳವನ್ನು ತೊಡಗಿಸಲು ಕೃಷಿ ವ್ಯಾಪಾರ ನೀತಿ ಜಾರಿಗೊಳಿಸಲಾಗಿದೆ.

- ದೇಶದಲ್ಲಿಯೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಕಳೆದ ಡಿಸೆಂಬರ್ 1 ಮತ್ತು 2 ರಂದು ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.

- ಈ ಸಮಾವೇಶದ ಫಲಶೃತಿಯಾಗಿ ಕೃಷಿ ಕ್ಷೇತ್ರದಲ್ಲಿ 60 ಸಾವಿರ ಕೋಟಿ ರೂ. ಬಂಡವಾಳ ಹೂಡಲು ಒಪ್ಪಂದಗಳಿಗೆ ಸಹಿ ಮಾಡಲಾಗಿದೆ. ಅಲ್ಲದೆ 50 ಸಾವಿರ ಕೋಟಿ ರೂ.ಗಳ ಸಾಲ ಸೌಲಭ್ಯ ಒದಗಿಸಲು ವಿವಿಧ ಬ್ಯಾಂಕುಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

○ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ವಲಯಗಳ ಬೆಳವಣಿಗೆಗೆ ಪೂರಕವಾಗಿ ಅಗತ್ಯ ಮೂಲ ಸೌಲಭ್ಯ ಮತ್ತು ಸಾಗಾಣಿಕೆ ಸೌಲಭ್ಯ ಹೆಚ್ಚಿಸಲು ಇದರಿಂದ ಅನುಕೂಲವಾಗುತ್ತದೆ.

**ಕೃಷಿ ಸಾಲ**

○ ರಾಜ್ಯದ ಸುಮಾರು 11.74 ಲಕ್ಷ ರೈತರಿಗೆ 4,379 ಕೋಟಿ ರೂ. ಸಾಲ ಸೌಲಭ್ಯ ನೀಡಲಾಗಿದೆ.

**ಉಚಿತ ವಿದ್ಯುತ್**

○ ಸುಮಾರು 16 ಲಕ್ಷ ನೀರಾವರಿ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಮುಂದುವರಿಸಲಾಗಿದ್ದು ವಾರ್ಷಿಕ 2,800 ಕೋಟಿ ರೂ. ಸಹಾಯಧನವನ್ನು ಸರ್ಕಾರ ನೀಡುತ್ತಿದೆ.

**ರಸಗೊಬ್ಬರ ಮತ್ತು ಬಿತ್ತನೆ ಬೀಜ ಸಹಾಯಧನ**

○ ವಾರ್ಷಿಕ 12 ಲಕ್ಷ ಮಂದಿ ರೈತರಿಗೆ ಶೇ.50ರಷ್ಟು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಮತ್ತು ರಿಯಾಯ್ತಿ ದರದಲ್ಲಿ ರಸಗೊಬ್ಬರ ವಿತರಿಸಲಾಗುತ್ತಿದೆ. ಈ ಸಂಬಂಧ 60 ಕೋಟಿ ರೂ. ಸಹಾಯಧನ ನೀಡಲಾಗುತ್ತಿದೆ.

**ಸಾವಯುವ ಕೃಷಿ**

○ ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ರಾಜ್ಯದಲ್ಲಿ 52,000 ಮಂದಿ ರೈತರು 71,000 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ಕೃಷಿ ಅಳವಡಿಸಿದ್ದಾರೆ. ಇದರಿಂದ ಪರಿಸರದ ಮೇಲೆ ಆಗುತ್ತಿದ್ದ ಪ್ರತಿಕೂಲ ಪರಿಣಾಮಗಳನ್ನು ತಡೆದು ಆರೋಗ್ಯಕರ ಆಹಾರಧಾನ್ಯ ಮತ್ತು ಹಣ್ಣು ಹಂಪಲುಗಳನ್ನು ಉತ್ಪಾದಿಸಲು ಅನುಕೂಲವಾಗಿದೆ. ಸಾವಯವ ಕೃಷಿಯನ್ನು ಮತ್ತಷ್ಟು ವಿಸ್ತರಿಸಲು ಈ ವರ್ಷ 200 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

## ಆರೋಗ್ಯ ಕವಚ

- ಆರೋಗ್ಯ ಕವಚ ಯೋಜನೆಯಡಿ ರಾಜ್ಯದಲ್ಲಿ 517 ಆಂಬ್ಯುಲೆನ್ಸ್‌ಗಳು ಉಚಿತ ಸೇವೆ ಸಲ್ಲಿಸುತ್ತಿವೆ. ಇದರಿಂದಾಗಿ ರಾಜ್ಯದಲ್ಲಿ ಈ ವರ್ಷ ಸುಮಾರು 4 ಲಕ್ಷ ಮಂದಿ ಪ್ರಾಣ ರಕ್ಷಣೆ ಮಾಡಲು ಸಾಧ್ಯವಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಗರ್ಭಿಣಿ ಮಹಿಳೆಯರು ಸಕಾಲದಲ್ಲಿ ಆಸ್ಪತ್ರೆ ಸೇರಿ ಸುರಕ್ಷಿತ ಹೆರಿಗೆಯಾಗಲು ಆರೋಗ್ಯ ಕವಚ ಯೋಜನೆ ನೆರವಾಗುತ್ತಿದೆ. ಇದರಿಂದ ಪ್ರಸವಾನಂತರ ಆಗುತ್ತಿದ್ದ ಮರಣದ ಪ್ರಮಾಣ ಕಮ್ಮಿಯಾಗಿದೆ.

## ಶಿಕ್ಷಣಕ್ಕೆ ಆದ್ಯತೆ

- ನಮ್ಮ ಸರ್ಕಾರ ರಾಜ್ಯದಲ್ಲಿ ಎಲ್ಲಾ ಹಂತಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ಈ ವರ್ಷ 304 ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳ ಮಟ್ಟಕ್ಕೆ ಮೇಲ್ದರ್ಜೆಗೇರಿಸಲಾಗಿದೆ.
- ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಲಾಗುತ್ತಿದೆ. ಪಂಚ ಸೌಲಭ್ಯ ಯೋಜನೆಯಡಿ ಆಟದ ಮೈದಾನ, ಕುಡಿಯುವ ನೀರು, ವಿದ್ಯುಚ್ಛಕ್ತಿ ಮೊದಲಾದ ಸೌಲಭ್ಯಗಳನ್ನು ಒದಗಿಸಲು ಈ ವರ್ಷ ವಿಶೇಷ ಗಮನ ನೀಡಲಾಗಿದೆ.
- ಮೊದಲ ಬಾರಿಗೆ ಹಾವೇರಿ ಜಿಲ್ಲೆಯಲ್ಲಿ ಜಾನಪದ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಲಾಗಿದೆ. ಅಲ್ಲದೆ 74 ಸರ್ಕಾರಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ.

## ನೀರಾವರಿ

- 2011 ರಿಂದ 2020ರ ವರೆಗೆ ನೀರಾವರಿ ದಶಕದ ಘೋಷಣೆ ಮಾಡಲಾಗಿದೆ. ರಾಜ್ಯದ ಪೂರ್ಣ ಜಲಸಂಪನ್ಮೂಲ ಬಳಸಿಕೊಂಡು ರೈತರಿಗೆ ನೆರವಾಗುವ ಗುರಿ ಹಾಕಿಕೊಂಡಿದ್ದು ಇದಕ್ಕಾಗಿ 50 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಹಣ ತೊಡಗಿಸುವ ಉದ್ದೇಶವಿದೆ.
- ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ ತರುವಾಯ ಕೃಷ್ಣಾ ನದಿ ನೀರನ್ನು ಸಂಪೂರ್ಣ ಬಳಕೆ ಮಾಡಿಕೊಳ್ಳಲು ಕಾರ್ಯಕ್ರಮ ರೂಪಿಸಲಾಗಿದೆ. ಈ ಉದ್ದೇಶಕ್ಕೆ 17 ಸಾವಿರ ಕೋಟಿ ರೂ.ಗಳನ್ನು ವೆಚ್ಚ ಮಾಡಲು ಅನುಮೋದನೆ ನೀಡಲಾಗಿದೆ.
- ಈ ವರ್ಷ 57 ಸಾವಿರ ಹೆಕ್ಟೇರ್ ಭೂಮಿಗೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗುತ್ತಿದ್ದು 1.12 ಲಕ್ಷ ಹೆಕ್ಟೇರ್ ಲವಣ ಮತ್ತು ಕ್ಷಾರ ಬಾಧಿತ ಪ್ರದೇಶಗಳನ್ನು ಕೃಷಿ ಯೋಗ್ಯಗೊಳಿಸಲಾಗಿದೆ.
- ಸಣ್ಣ ನೀರಾವರಿ ಇಲಾಖೆ ಮೂಲಕ 631 ಕೆರೆಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಹಾಕಿಕೊಳ್ಳಲಾಗಿದೆ.

## ಗ್ರಾಮೀಣಾಭಿವೃದ್ಧಿ

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ನಮ್ಮ ಸರ್ಕಾರ ವಿಶೇಷ ಗಮನ ನೀಡಿದೆ. ಇದರ ಫಲವಾಗಿ 54 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಉದ್ಯೋಗ ಚೀಟಿ ನೀಡಿ 200 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಸಲಾಗಿದೆ.
- ಪಿಎಂಜಿಎಸ್‌ವೈ ಯೋಜನೆಯಡಿ ರಾಜ್ಯದಲ್ಲಿ 1,091 ಕಿಮೀ ವ್ಯಾಪ್ತಿಯ ರಸ್ತೆಗಳನ್ನು ನಿರ್ಮಿಸಲಾಗಿದೆ. 2 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಜನವಸತಿ ಪ್ರದೇಶಗಳಿಗೆ ಸರ್ವ ಋತು ಗ್ರಾಮೀಣ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ.

## ಗ್ರಾಮ ಪಂಚಾಯತ್‌ಗಳಿಗೆ ಅನುದಾನ

- ಗ್ರಾಮ ಪಂಚಾಯತ್‌ಗಳ ವಾರ್ಷಿಕ ಅನುದಾನದ ಮೊತ್ತವನ್ನು 6 ಲಕ್ಷ ರೂ.ನಿಂದ 8 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ.

## ವಸತಿ

- ಕರ್ನಾಟಕವನ್ನು ಗುಡಿಸಲು ಮುಕ್ತ ಹಾಗೂ ಕೊಳಚೆ ಪ್ರದೇಶ ಮುಕ್ತ ರಾಜ್ಯವನ್ನಾಗಿ ರೂಪಿಸುವ ದೃಷ್ಠಿಯಿಂದ ವಿವಿಧ ವಸತಿ ಯೋಜನೆಗಳನ್ನು ರೂಪಿಸಲಾಗುವುದು.
- ಕಳೆದ ಮೂರೂವರೆ ವರ್ಷಗಳಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ 7.75 ಲಕ್ಷ ಮನೆಗಳನ್ನು ನಿರ್ಮಿಸಲಾಗಿದ್ದು, 79,439 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.
- ವಸತಿ ಯೋಜನೆಯ ಫಲಾನುಭವಿಗಳಿಗೆ ಆನ್‌ಲೈನ್ ಮೂಲಕ ನೇರವಾಗಿ ಅವರ ಖಾತೆಗಳಿಗೆ ಸರ್ಕಾರಿ ಸಹಾಯ ಧನವನ್ನು ತಲುಪಿಸಲು ವ್ಯವಸ್ಥೆ ಮಾಡಲಾಗಿದೆ.
- ಕೊಳಚೆ ಪ್ರದೇಶಗಳ ಅಭಿವೃದ್ಧಿ ಸಲುವಾಗಿ ಹೊಸ ಕೊಳಚೆ ಅಭಿವೃದ್ಧಿ ನೀತಿ ಜಾರಿಗೆ ತರಲಾಗಿದೆ. ತ್ವರಿತ ತಾಂತ್ರಿಕತೆ ಮೂಲಕ ಮನೆಗಳನ್ನು ನಿರ್ಮಾಣ ಮಾಡಿ ರಾಜ್ಯದ ಕೊಳಚೆ ಪ್ರದೇಶಗಳ ಜನರಿಗೆ ಅನುಕೂಲ ಮಾಡಿಕೊಡಲಾಗಿದೆ.

## ಆಸರೆ

- 2009ರ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದ ಸಂತ್ರಸ್ತರಾದವರಿಗೆ ಮನೆಹಾನಿ ಪರಿಹಾರ ಮತ್ತು ಬೆಳೆ ಪರಿಹಾರ ಇತ್ಯಾದಿ ಸೌಲಭ್ಯ ಒದಗಿಸಿರುವುದಲ್ಲದೆ ನಿರಂತರ ಪ್ರವಾಹ ಪೀಡಿತವಾಗುತ್ತಿದ್ದ 289 ಗ್ರಾಮಗಳ ಖಾಯಂ ಸ್ಥಳಾಂತರಕ್ಕೆ "ಆಸರೆ" ಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಒಟ್ಟು 57,389

ಮನೆ ನಿರ್ಮಾಣ ಕೈಗೆತ್ತಿಕೊಂಡಿದ್ದು, ಈವರೆಗೆ ಸುಮಾರು 47,067 ಮನೆಗಳು ಪೂರ್ಣಗೊಂಡಿವೆ. 10,322 ಮನೆಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ಇವುಗಳನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಿ ಎಲ್ಲಾ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಸಿದ್ಧತೆ ನಡೆದಿದೆ. ಆಸರೆ ಯೋಜನೆಯಡಿ ಮನೆಗಳ ನಿರ್ಮಾಣಕ್ಕೆ ಹಾಗೂ ಮೂಲಭೂತ ಸೌಕರ್ಯಗಳಿಗೆ ಇದುವರೆಗೂ ರೂ. 89,339.70 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಇಂತಹ ಬೃಹತ್ ಪರಿಹಾರ ಕಾರ್ಯವನ್ನು ದೇಶದ ಯಾವುದೇ ರಾಜ್ಯದಲ್ಲಿ ಕೈಗೊಳ್ಳಲಾಗಿಲ್ಲ ಎಂಬುದು ಗಮನಾರ್ಹ.

## ವಿದ್ಯುತ್

○ ಎಪ್ಪತ್ತರ ದಶಕದಲ್ಲಿ ವಿದ್ಯುತ್ ಸ್ವಾವಲಂಬಿ ರಾಜ್ಯವಾಗಿದ್ದ ಕರ್ನಾಟಕವನ್ನು ಪ್ರಸ್ತುತ ಶೇ.20ರಷ್ಟು ವಿದ್ಯುತ್ ಕೊರತೆ ಕಾಡುತ್ತಿದೆ. ಇದನ್ನು ನಿವಾರಿಸಿ ಮತ್ತೆ ವಿದ್ಯುತ್ ಸ್ವಾವಲಂಬಿ ರಾಜ್ಯವನ್ನಾಗಿ ರೂಪಿಸುವ ಸವಾಲನ್ನು ನಮ್ಮ ಸರ್ಕಾರ ಸ್ವೀಕರಿಸಿದೆ. ಕನಿಷ್ಠ 5,000 ಮೆ.ವ್ಯಾ. ವಿದ್ಯುತ್‌ನ್ನು ಹೊಸದಾಗಿ ಜಾಲಕ್ಕೆ ಸೇರ್ಪಡೆಗೊಳಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ವಿದ್ಯುತ್ ಕೊರತೆ ನೀಗಿಸಲು ತಕ್ಷಣದ ಕ್ರಮವಾಗಿ ಪ್ರತಿನಿತ್ಯ 1 ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಹೊರಗಿನ ಮೂಲಗಳಿಂದ ಕೊಂಡು ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಒದಗಿಸಲಾಗುತ್ತಿದೆ.

## ನಿರಂತರ ಜ್ಯೋತಿ

○ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಸುಧಾರಿಸಲು 2,812 ಕೋಟಿ ರೂ. ವೆಚ್ಚದ "ನಿರಂತರ ಜ್ಯೋತಿ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. 70 ತಾಲ್ಲೂಕುಗಳಲ್ಲಿ ಎರಡು ಹಂತಗಳಲ್ಲಿ ಈ ಕಾರ್ಯಕ್ರಮ ಜಾರಿಗೆ ಬರಲಿದೆ.

## ವಿಮಾನ ನಿಲ್ದಾಣಗಳ ಅಭಿವೃದ್ಧಿ

- ಶಿವಮೊಗ್ಗ, ಗುಲ್ಬರ್ಗಾ, ಬಿಜಾಪುರ ಮತ್ತು ಹಾಸನದಲ್ಲಿ ಸಣ್ಣ ವಿಮಾನ ನಿಲ್ದಾಣಗಳನ್ನು ಖಾಸಗಿ ಪ್ರವರ್ತಕರ ಮೂಲಕ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಅಭಿವೃದ್ಧಿಪಡಿಸಲಾಗುತ್ತಿದೆ.

## ಬೆಂಗಳೂರು ಮೆಟ್ರೋ

- ಬೈಯ್ಯಪ್ಪನಹಳ್ಳಿಯಿಂದ ಮಹಾತ್ಮ ಗಾಂಧಿ ರಸ್ತೆವರೆಗಿನ 7.5 ಕಿಮೀ ಉದ್ದದ ರೀಚ್–1 ಮಾರ್ಗದಲ್ಲಿ ಮೆಟ್ರೋ ರೈಲು ಸಂಚಾರ ಪ್ರಾರಂಭವಾಗಿದೆ. ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಈವರೆಗೆ 5,208 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು, 4,700 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈವರೆಗೆ ಕಾಮಗಾರಿಗಳ ಪೈಕಿ ಶೇ.51 ರಷ್ಟು ಕೆಲಸ ಪೂರ್ಣಗೊಂಡಿದ್ದು ಮೊದಲನೇ ಹಂತದ ಕಾಮಗಾರಿಗಳು 2013 ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

## ನಗರಾಭಿವೃದ್ಧಿ

- ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಸುಧಾರಣೆಗೆ ವಿಶೇಷ ಗಮನ ನೀಡಲಾಗಿದೆ. ಇದಕ್ಕೆ ಹೆಚ್ಚು ಸಂಪನ್ಮೂಲ ಒದಗಿಸಿಕೊಳ್ಳಲು ಆಸ್ತಿ ತೆರಿಗೆಗಳ ವ್ಯಾಪ್ತಿ ವಿಸ್ತರಣೆ ಮತ್ತು ಸಂಗ್ರಹಣೆಯಲ್ಲಿ ಸುಧಾರಣೆ ತರಲಾಗಿದೆ.

- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ರಾಷ್ಟ್ರದಲ್ಲಿಯೇ ಉತ್ತಮ ಸೇವೆಗೆ ಹೆಸರಾಗಿದ್ದು ವಿವಿಧ ಪ್ರಶಸ್ತಿಗಳಿಗೆ ಪಾತ್ರವಾಗಿದೆ. ಬಿ.ಎಂ.ಟಿ.ಸಿ ದೇಶದಲ್ಲೇ ಏಕೈಕೆ ಲಾಭದಾಯಕ ಸಾರ್ವಜನಿಕ ವಲಯದ ನಗರ ಸಾರಿಗೆ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

## ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ

- 2010ರ ಜೂನ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಅತ್ಯಂತ ಯಶಸ್ವಿಯಾಗಿ ಜರುಗಿದ್ದು ನಿಮಗೆಲ್ಲಾ ತಿಳಿದಿದೆ. ಈ ಸಂದರ್ಭದಲ್ಲಿ 389 ಒಡಂಬಡಿಕೆಗಳಿಗೆ ಸಹಿಮಾಡಿ, 4 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ 2 ಲಕ್ಷ ಕೋಟಿ ರೂ.ಗಳಿಗೂ ಅಧಿಕ ಬಂಡವಾಳ ಹೂಡಿಕೆಯ 225 ಯೋಜನೆಗಳು ಅನುಷ್ಠಾನ ಪ್ರಾರಂಭಿಸಿವೆ. ಒಟ್ಟಾರೆ ಈ ಯೋಜನೆಗಳಿಂದ ಸುಮಾರು 10 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ.

- ಈ ವರ್ಷ ಜೂನ್‌ನಲ್ಲಿ ಎರಡನೇ ಬಾರಿಗೆ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಲು ಸಿದ್ಧತೆಗಳನ್ನು ಮಾಡಲಾಗಿದೆ.

- ಇತ್ತೀಚೆಗೆ "ಅಸೋಚಾಮ್" ನಡೆಸಿದ ಅಧ್ಯಯನದ ಪ್ರಕಾರ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಬಂಡವಾಳ ಹೂಡಿಕೆಗೆ ಅತ್ಯಂತ ಪ್ರಶಸ್ತ ತಾಣ ಎಂಬುದು ನಿರೂಪಿತವಾಗಿದೆ. ಇದೊಂದು ಹೆಗ್ಗಳಿಕೆ.

## ಉದ್ಯೋಗಾವಕಾಶ

- ಕಳೆದ ಮೂರುವರೆ ವರ್ಷಗಳಲ್ಲಿ 147 ಜಿಲ್ಲಾ ಮಟ್ಟದ ಮತ್ತು ಸಣ್ಣ ಉದ್ಯೋಗ ಮೇಳಗಳ ಮೂಲಕ 2.9 ಲಕ್ಷ ಮಂದಿಗೆ ಉದ್ಯೋಗ ದೊರಕಿಸಿ ಕೊಡಲಾಗಿದೆ. ಅಲ್ಲದೆ 3.15 ಲಕ್ಷ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಲಾಗಿದೆ.

- ಈ ಸಾಲಿನಲ್ಲಿ (2011–12) ಡಿಸೆಂಬರ್‌ವರೆಗೆ 6 ಬೃಹತ್ ಕೌಶಲ್ಯ ಅಭಿವೃದ್ಧಿ ಉದ್ಯೋಗ ಮೇಳ ಹಾಗೂ 9 ಮಿನಿ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿತ್ತು. ಒಟ್ಟು 51,887 ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದು, 41,579 ಅಭ್ಯರ್ಥಿಗಳಿಗೆ ತರಬೇತಿ ನೀಡಿದ್ದು, 33,771 ಮಂದಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

## ಪ್ರಾದೇಶಿಕ ಅಸಮತೋಲನ ನಿವಾರಣೆ

- ಪ್ರಾದೇಶಿಕ ಅಸಮತೋಲನ ನಿವಾರಣೆಗೆ ನಮ್ಮ ಸರ್ಕಾರ ವಿಶೇಷ ಆದ್ಯತೆ ನೀಡಿದ್ದು ಡಾ॥ ನಂಜುಂಡಪ್ಪ ಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಕ್ರಮ ಕೈಗೊಂಡಿದೆ.
- ಇದಕ್ಕಾಗಿ ವಿಶೇಷ ಅಭಿವೃದ್ಧಿ ಯೋಜನೆ ರೂಪಿಸಲಾಗಿದ್ದು, ಈ ವರ್ಷ 2,984 ಕೋಟಿ ರೂ. ಹಂಚಿಕೆ ಮಾಡಿದ್ದು, ಡಿಸೆಂಬರ್ 2011ರವರೆಗೆ 1,209 ಕೋಟಿ ರೂ. ವೆಚ್ಚ ಮಾಡಲಾಗಿದೆ.

## ನಾಗರೀಕ ಸ್ನೇಹಿ ಕ್ರಮಗಳು

- ರೈತರಿಗೆ ನೇರವಾಗಿ ಸಹಾಯಧನ ನೀಡುವ ಉದ್ದೇಶದಿಂದ ಇ–ಕ್ಲಿಯರೆನ್ಸ್ ವ್ಯವಸ್ಥೆ ಜಾರಿಗೊಳಿಸಲಾಗಿದೆ.
- ಗ್ರಾಮೀಣ ಯುವಕರಿಗೆ ಉದ್ಯೋಗಾವಕಾಶ ಹೆಚ್ಚಿಸಲು ರಾಜ್ಯದಾದ್ಯಂತ 32 ಬಿ.ಪಿ.ಒ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.
- ಸಾಮಾಜಿಕ ಭದ್ರತಾ ಪಿಂಚಣಿ ವಿತರಣೆಯಲ್ಲಿ ಕ್ಷಿಪ್ರತೆ ಮತ್ತು ಸುಧಾರಣೆ ತರಲು 6 ಜಿಲ್ಲೆಗಳಲ್ಲಿ (ಬಳ್ಳಾರಿ, ಗುಲ್ಬರ್ಗಾ, ಚಿತ್ರದುರ್ಗ, ಚಾಮರಾಜನಗರ, ಧಾರವಾಡ ಮತ್ತು ಮಂಡ್ಯ) ಪ್ರಾಯೋಗಿಕವಾಗಿ ಸ್ಮಾರ್ಟ್ ಕಾರ್ಡ್ ವಿತರಣೆ ಮಾಡಲಾಗಿದೆ. ಎಲ್ಲಾ ಜಿಲ್ಲೆಗಳಿಗೂ ಈ ಯೋಜನೆಯನ್ನು ವಿಸ್ತರಿಸಲು ನಿರ್ಧರಿಸಲಾಗಿದೆ.
- ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆ 104 ಇಲಾಖೆ/ಸಂಸ್ಥೆಗಳಲ್ಲಿ ಅನುಷ್ಠಾನದಲ್ಲಿದ್ದು 87 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಬಿಡ್ ನಿರ್ವಹಣೆ ಮಾಡಲಾಗಿದೆ. ಇದರಿಂದ ಶೇ.10ಕ್ಕೂ ಹೆಚ್ಚು ಹಣ ಉಳಿತಾಯವಾಗಿದೆ. ಸುಮಾರು 21 ಸಾವಿರ ಪೂರೈಕೆದಾರರು/ ಗುತ್ತಿಗೆದಾರರು ನೋಂದಾಯಿಸಿಕೊಂಡಿದ್ದಾರೆ.

- ಬೆಂಗಳೂರು–ಒನ್ 75 ಬಹುವಿಧ ಸೇವಾ ಕೇಂದ್ರಗಳು ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇದೇ ಮಾದರಿಯ 32 ಕರ್ನಾಟಕ ಕೇಂದ್ರಗಳನ್ನು ರಾಜ್ಯದ ಪ್ರಮುಖ ಪಟ್ಟಣ ಮತ್ತು ನಗರಗಳಲ್ಲಿ ಸ್ಥಾಪಿಸಲಾಗಿದೆ.
- ಆಧಾರ ಯೋಜನೆಯನ್ನು ರಾಜ್ಯದಲ್ಲಿ 24 ಜಿಲ್ಲೆಗಳಲ್ಲಿ ವಿಸ್ತರಿಸಲಾಗಿದೆ.
- ಆಸ್ತಿಗಳನ್ನು ರಾಜ್ಯದಲ್ಲಿ ಎಲ್ಲಿ ಬೇಕಾದರೂ ನೋಂದಣಿ ಮಾಡಲು ಅವಕಾಶ ಕಲ್ಪಿಸುವ ಉದ್ದೇಶವಿದ್ದು, ಪ್ರಸ್ತುತ ಬೆಂಗಳೂರಿನಲ್ಲಿ 5 ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ದಾಖಲೆಗಳ ನೋಂದಣಿ, ಪ್ರಮಾಣ ಪತ್ರ ಮತ್ತು ದಸ್ತಾವೇಜುಗಳ ದೃಢೀಕೃತ ಪತ್ರಗಳನ್ನು ಪಡೆಯುವ ವ್ಯವಸ್ಥೆ ಜಾರಿಗೆ ತರಲಾಗಿದೆ.
- ಮೈಸೂರು ವಿಭಾಗದ 13 ತಾಲ್ಲೂಕುಗಳ 13 ಹೋಬಳಿಗಳಲ್ಲಿ ವಿಶೇಷ ಪೋಡಿ ಯೋಜನೆ ಜಾರಿಗೊಳಿಸಲಾಗಿದ್ದು, ಕ್ರಮೇಣ ರಾಜ್ಯದ ಉಳಿದ ತಾಲ್ಲೂಕುಗಳಲ್ಲೂ ವಿಸ್ತರಿಸಲಾಗುವುದು.

**ಸನ್ಮಾನ್ಯ ಸಭಾಪತಿಯವರೆ,**

ಆಡಳಿತದಲ್ಲಿ ದಕ್ಷತೆ, ಕ್ಷಿಪ್ರತೆ ಮತ್ತು ಪಾರದರ್ಶಕತೆ ತಂದು ಅಭಿವೃದ್ಧಿ ಪ್ರಕ್ರಿಯೆಯ ವೇಗದಲ್ಲಿ ಹೆಚ್ಚಳ ಹಾಗೂ ಫಲಾನುಭವಿಗಳಿಗೆ ಶೀಘ್ರ ಪ್ರಯೋಜನ ದೊರೆಕಿಸಿಕೊಡುವತ್ತ ನಮ್ಮ ಸರ್ಕಾರ ವಿವಿಧ ಜನಪರ ನಿರ್ಧಾರಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸುತ್ತಿದೆ. ಎಲ್ಲರ ಸಹಕಾರದಿಂದ ರಾಜ್ಯವನ್ನು ಅಭಿವೃದ್ಧಿ ಹೊಂದಿದ ರಾಜ್ಯಗಳ ಪೈಕಿ ಮುಂಚೂಣಿ ಸ್ಥಾನಕ್ಕೆ ಕೊಂಡೊಯ್ಯುವ ಮೂಲಕ ಕರ್ನಾಟಕವನ್ನು ನಾಗರೀಕ ಸ್ನೇಹಿ, ಜನಪರ ಹಾಗೂ ಪ್ರಗತಿಪರ ಮಾದರಿ ರಾಜ್ಯವನ್ನಾಗಿ ರೂಪಿಸುವ ದಿಶೆಯಲ್ಲಿ ಮಹತ್ವಾಕಾಂಕ್ಷೆಯಿಂದ ನಾವು ಕೆಲಸ ಮಾಡುತ್ತಿದ್ದೇವೆ. ನಮ್ಮ ಈ ಪ್ರಯತ್ನದಲ್ಲಿ ಎಲ್ಲರೂ ಭಾಗಿಗಳಾಗುವಂತೆ, ಸಹಯೋಗ ನೀಡಿ ಸಹಕರಿಸುವಂತೆ ಕೋರಿ ರಾಜ್ಯಪಾಲರ ಭಾಷಣದ

ಮೇಲಿನ ವಂದನಾ ನಿರ್ಣಯವನ್ನು ಸದನ ಸ್ವೀಕರಿಸುವಂತೆ ಮನವಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

**ಪ್ರಸ್ತಾವದ ಅಂಗೀಕಾರ**

**ಸಭಾಪತಿಯವರು:-** ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣಕ್ಕೆ ಅವರ ಲಿಖಿತ ಉತ್ತರಗಳನ್ನು ಮಂಡಿಸಿದ್ದಾರೆ.

ಪ್ರಸ್ತಾವ ಏನೆಂದರೆ,

"ದಿನಾಂಕ 31ನೇ ಜನವರಿ 2012ರಂದು ಮಾನ್ಯ ಸದಸ್ಯರಾದಂತಹ ಶ್ರೀ ಅಶ್ವಥ್ ನಾರಾಯಣ್‌ರವರು ಸೂಚಿಸಿ, ಶ್ರೀ ನಾರಾಯಣ್ ಸಾ ಭಾಂಡಗೆಯವರು ಅನುಮೋದಿಸಿದ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವವನ್ನು ಸದನ ಅಂಗೀಕರಿಸುವುದು"

ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕೆ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರು ಸನ್ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ನಿರ್ಣಯವನ್ನು ಸದನವು ಸರ್ವಾನುಮತದಿಂದ ಅಂಗೀಕರಿಸಿದೆ.

**ಪ್ರಸ್ತಾವವು ಸರ್ವಾನುಮತದಿಂದ ಅಂಗೀಕಾರವಾಯಿತು.**

**5. ಸಾರಾಂಶ**

**ಸಭಾಪತಿಯವರು:- ದಿನಾಂಕ 30-01-2012 ರಿಂದ 8-02-2012 ರವರೆಗೆ ನಡೆದ ವಿಧಾನ ಪರಿಷತ್ತಿನ 117ನೇ ಅಧಿವೇಶದ ಕಾರ್ಯಕಲಾಪಗಳ ಸಾರಾಂಶವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.**

ವಿಧಾನ ಪರಿಷತ್ತಿನ 117ನೇ ಅಧಿವೇಶನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವ ಪೂರ್ವದಲ್ಲಿ ಸದರಿ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನ ದಿನಾಂಕ: 30.01.2012 ರಿಂದ 08.02.2012ರವರೆಗೆ ಒಟ್ಟು 08 ದಿನಗಳು ನಡೆಸಲಾಗಿರುತ್ತದೆ.

ದಿನಾಂಕ: 30.01.2012 ರಂದು ಮಧ್ಯಾಹ್ನ 12.15 ಗಂಟೆಗೆ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಕಾರ್ಯಕಲಾಪ ಪ್ರಾರಂಭಗೊಂಡಿತು. ರಾಜ್ಯಪಾಲರ ಭಾಷಣದ ನಂತರ ಮಧ್ಯಾಹ್ನ 1.35 ಗಂಟೆಗೆ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಕಾರ್ಯಕಲಾಪಗಳು ಪ್ರಾರಂಭವಾಯಿತು. ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಮಂಡಿಸಲಾಯಿತು. ದಿನಾಂಕ: 08.02.2012 ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಮಂಡಿಸಿದ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನ ಹೊಂದಿದ ಒಟ್ಟು 8 ಜನ ಗಣ್ಯವ್ಯಕ್ತಿಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಹಾಗೂ ರಾಷ್ಟ್ರಾಧ್ಯಕ್ಷರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಸಭೆಯಲ್ಲಿ ಮಂಡಿಸಿದರು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದು, ಎರಡು ಮತ್ತು ಮೂರನೆಯ ಪಟ್ಟಿಗಳನ್ನು ಸದನದ ಮುಂದೆ ಮಂಡಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 838 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಅಂಗೀಕರಿಸಿದ್ದು, 76 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 44 ಪ್ರಶ್ನೆಗಳಿಗೆ

ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು. ಒಟ್ಟು 690 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ, 496 ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 725ರಡಿಯಲ್ಲಿ 75 ಸೂಚನೆಗಳನ್ನು ಸ್ವೀಕರಿಸಿ ಆ ಪೈಕಿ 10 ಸೂಚನೆಗಳನ್ನು ಹಾಗೂ ನಿಯಮ 330 ರಡಿಯಲ್ಲಿ 57 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ ಆ ಪೈಕಿ 6 ಸೂಚನೆಗಳನ್ನು ಸದನದಲ್ಲಿ ಚರ್ಚಿಸಲಾಗಿದೆ. ಶೂನ್ಯ ವೇಳೆಯ 18 ಪ್ರಸ್ತಾವಗಳನ್ನು ಸ್ವೀಕರಿಸಿದ್ದು, ಆ ಪೈಕಿ 15 ಪ್ರಸ್ತಾವಗಳಿಗೆ ಉತ್ತರಿಸಲಾಗಿದೆ. ನಿಯಮ 59ರಡಿಯಲ್ಲಿ 5 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 01 ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ ಉಳಿದ ಸೂಚನೆಗಳನ್ನು ತಡೆಹಿಡಿಯಲಾಯಿತು.

ವಿಧಾನ ಪರಿಷತ್ತಿನಲ್ಲಿ ಮಂಡಿಸಲಾದ 2011ನೇ ಸಾಲಿನ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ಎರಡನೇ ತಿದ್ದುಪಡಿ) ವಿಧೇಯಕಕ್ಕೆ ವಿಧಾನ ಪರಿಷತ್ತು ತನ್ನ ಅಂಗೀಕಾರವನ್ನು ನೀಡಿರುತ್ತದೆ.

ಮಾನ್ಯ ಮುಖ್ಯಮಂತ್ರಿಗಳಿಗೆ, ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮಗಳ ವರದಿಗಾರರಿಗೆ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ ಮತ್ತು ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ ನೌಕರ ವೃಂದದವರಿಗೆ, ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, **ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.**

**(ಸದನವು ಮಧ್ಯಾಹ್ನ 12 ಗಂಟೆ 25 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)**